## ಅಧ್ಯಾಯ-೦೪

# ಬ್ಯಾಂಕಿಂಗ್, ಸಹಕಾರ, ವಾಣಿಜ್ಯ ಮತ್ತು ವ್ಯವಹಾರ

ಕರ್ನಾಟಕವು ಪ್ರಾಚೀನ ಕಾಲದಿಂದಲೂ ತನ್ನದೇ ಆದ ವಿಶೇಷತೆಯಿಂದ ಕೂಡಿದ, ಅತ್ಯಂತ ಶ್ರೀಮಂತ, ವೈವಿಧ್ಯಮಯ ಆರ್ಥಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಮೈಗೂಡಿಸಿಕೊಂಡು ಬಂದಿರುವುದನ್ನು ನಾವು ಚರಿತ್ರೆಯ ಉದ್ದಕ್ಕೂ ಕಾಣಬಹುದು.

ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಶಾಸನಗಳು ಅಂದಿನ ಕಾಲದಲ್ಲಿ ಪ್ರಚಲಿತದಲ್ಲಿದ್ದ ವಿವಿಧ ಬಗೆಯ ವರ್ತಕರು, ಅವರ ವಿವಿಧ ಹಂತಗಳ ವಾಣಿಜ್ಯ ಚಟುವಟಿಕೆಗಳು, ವರ್ತಕರ ಸಂಘಗಳು, ನಾಣ್ಯ ಚಲಾವಣೆ, ವಿವಿಧ  ಹಂತದ ವ್ಯಾಪಾರಿ ತೆರಿಗೆಗಳು, ಸುಂಕಗಳು, ರಾಜಾಶ್ರಯ, ಹಣಕಾಸಿನ ವ್ಯವಹಾರ, ಸಂತೆಗಳು, ವ್ಯಾಪಾರಿಗಳಿಂದ ಉಂಟಾದ ನಗರೀಕರಣ, ತೆರಿಗೆ ರಿಯಾಯಿತಿ ಇತ್ಯಾದಿ; ವರ್ತಕರ ಸಮುದಾಯಗಳು ನಿರ್ವಹಿಸುತ್ತಿದ್ದ ಸಾಮಾಜಿಕ, ಧಾರ್ಮಿಕ ಸೇವೆಗಳು, ಮುಂತಾದವುಗಳನ್ನು ಕುರಿತಂತೆ ಸಾಕಷ್ಟು ಮಾಹಿತಿಯನ್ನು ಒದಗಿಸುತ್ತಿವೆ. ಅಂದಿನ ಕಾಲದಲ್ಲಿ ದೇವಾಲಯಗಳು, ವರ್ತಕರ ಸಂಘಗಳು, ಸ್ಥಳೀಯ ಸಂಸ್ಥೆಗಳು ಮಠಮಾನ್ಯಗಳು ತಮ್ಮ ಪರಿಸರದಲ್ಲಿ ಕೆಲ ಒಂದು ಬ್ಯಾಂಕುಗಳ ಕಾರ್ಯವನ್ನು ಅಂದಿನ ವ್ಯವಸ್ಥೆಗೆ ಅನುಗುಣವಾಗಿ ಸಾರ್ವಜನಿಕರ ಹಿತಾಸಕ್ತಿಗೆ ಪೂರಕವಾಗಿ ನಡೆಸುತ್ತಿದ್ದವು. ಅನೇಕ ದೇವಾಲಯಗಳು ಸಾರ್ವಜನಿಕ ಸಂಪತ್ತಿನ ಧರ್ಮದರ್ಶಿಗಳಂತೆ (Trustees) ಕಾರ್ಯ ನಿರ್ವಹಿಸುತ್ತಿದ್ದವು. ದೇವಾಲಯಗಳ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ವಾಣಿಜ್ಯಕ ಚಟುವಟಿಕೆಗಳಿಗೆ ರಾಜಾಶ್ರಯ ಮತ್ತು ರಾಜಮನ್ನಣೆಯೂ ಇತ್ತು ಮತ್ತು ಈ ಸಂಸ್ಥೆಗಳು ತಮ್ಮದೇ ಆದ ಆಡಳಿತ ನೀತಿ ನಿರೂಪಣೆಯ ಸ್ವಾಯತ್ತತೆಯನ್ನು ಹೊಂದಿದ್ದವು. ಬ್ಯಾಂಕಿಂಗ್ ವ್ಯವಹಾರದಿಂದ ಬಂದ ಆದಾಯದಲ್ಲಿ ಒಂದು ಭಾಗವನ್ನು ದೇವಾಲಯಗಳ ನಿತ್ಯ ಸೇವೆಗೆ, ಅಭಿವೃದ್ಧಿಗೆ ಉಪಯೋಗಿಸುತ್ತಿದ್ದವು ಎಂಬುದು ಅನೇಕ ಶಾಸನಗಳ ಅಧ್ಯಯನದಿಂದ ತಿಳಿದು ಬರುವದು.

ದೇವಾಲಯಗಳು, ವರ್ತಕರ ಸಮುದಾಯಗಳು ಅಲ್ಲದೇ ಅನೇಕ ಶ್ರೀಮಂತರು, ಜಮೀನುದಾರರು ರಾಜ ಪರಿವಾರದವರು ಅಧಿಕಾರ ವರ್ಗದವರು, ಯಾವದೇ ನಿರ್ಬಂಧ ಇಲ್ಲದೇ ಹಣದ ಲೇವಾದೇವಿಯನ್ನು ಮಾಡುತ್ತಿದ್ದರು ಎಂದು ಶಾಸನಗಳಿಂದ ಮತ್ತು ಇತರೇ ಮೂಲಗಳಿಂದ ತಿಳಿದು ಬರುವದು.

ವೇದಗಳ ಕಾಲದಿಂದಲೂ ಇಂದಿನವರೆಗೆ ಭಾರತದಲ್ಲಿ ಪ್ರಮುಖವಾಗಿ ಅಸಂಘಟಿತ ವಲಯದಲ್ಲಿ ಹಣದ ಲೇವಾದೇವಿ ಅವ್ಯಾಹತವಾಗಿ ನಡೆದುಕೊಂಡು ಬಂದಿರುವುದರ ಬಗ್ಗೆ ದಾಖಲೆಗಳು ಉಂಟು. ವೇದಗಳ ಕಾಲದಲ್ಲಿ (೧೨೦೦-೧೮೦೦ BC) ಸಾಲಗಳ ಮೇಲೆ ಅತೀ ಹೆಚ್ಚಿನ ಬಡ್ಡಿಯನ್ನು ವಿಧಿಸುವುದು ಸರ್ವೇ ಸಾಮಾನ್ಯವಾಗಿತ್ತು. ಆದರೆ ಮನು ಮತ್ತು ಕೌಟಿಲ್ಯರು (ಅರ್ಥಶಾಸ್ತ್ರ) ಅದಕ್ಕೆ ನಿಯಂತ್ರಣವನ್ನು ಹಾಕುವಂತೆ ಸೂಚಿಸುತ್ತಾರೆ. ಎಲ್ಲಾ ವಿಧದ ಸಾಲಗಳ ಮೇಲೆ (ಆಧಾರ ಮತ್ತು ಆಧಾರರಹಿತ) ಕನಿಷ್ಠ ಶೇ.೧೫ರಿಂದ ಗರಿಷ್ಠ. ಶೇ೪೦ರ ಮಿತಿ ಮೀರದಂತೆ ನಿಯಂತ್ರಣಕ್ಕೆ ಒಳಪಡಿಸಿದ ವಿಷಯ ಸಮಕಾಲೀನ ದಾಖಲೆಗಳಿಂದ ತಿಳಿದು ಬರುವುದು.

ವೇದಗಳ ಕಾಲದಲ್ಲಿ ವರ್ಣಾಶ್ರಮ ಧರ್ಮದ ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯ ಅನುಸಾರ ಬಡ್ಡಿದರದಲ್ಲಿ ವ್ಯತ್ಯಾಸ ಇತ್ತು. ಬ್ರಾಹ್ಮಣರು ಸಾಲಕ್ಕೆ ಶೇ.೧೫ರ ಬಡ್ಡಿ ನೀಡಿದರೆ, ಶೂದ್ರರು ಅತಿ ಹೆಚ್ಚಿನ ಅಂದರೆ ಶೇ.೪೦ ಬಡ್ಡಿಯನ್ನು ನೀಡಬೇಕಾಗುತ್ತಿತ್ತು. ಕಾರಣ ಅವರ ಸಾಲಕ್ಕೆ ಯಾವುದೇ ಸ್ಥಿರಾಸ್ತಿಯ ಭದ್ರತೆ ಇರುತ್ತಿರಲಿಲ್ಲ. ಮತ್ತು ಅವರಿಗೆ ಯಾವುದೇ ಸ್ಥಿರಾಸ್ತಿಯನ್ನು ಹೊಂದುವ ಅಧಿಕಾರ ಇರಲಿಲ್ಲ. ಇದು ಅಂದಿನ ಸಾಮಾಜಿಕ ವ್ಯವಸ್ಥೆಯಾಗಿತ್ತು. ಆದರೆ ಇಂದು ಬದಲಾದ ವ್ಯವಸ್ಥೆಯಲ್ಲಿ ದುರ್ಬಲ, ಅಸಹಾಯಕ, ಹಿಂದುಳಿದ ವರ್ಗದವರಿಗೆ ರಿಯಾಯತಿ ಬಡ್ಡಿದರದಲ್ಲಿ ಸಾಲ ಸೌಲಭ್ಯವನ್ನು ಒದಗಿಸುವ ಮೂಲಕ ಸಾಮಾಜಿಕ ನ್ಯಾಯ ಒದಗಿಸಲಾಗುತ್ತಿದೆ. ಇಂದಿನ ೨೦೧೪ರ ಪ್ರಧಾನಮಂತ್ರಿಗಳ ಜನಧನ್ (Jandhan Yojana) ಯೋಜನೆ ಇದಕ್ಕೆ ಒಂದು ಉದಾಹರಣೆ ಎಂದು ಹೇಳಬಹುದು. ಇಂದಿನ ಬ್ಯಾಂಕಿಂಗ್ ವ್ಯವಸ್ಥೆ ಮತ್ತು ಅದರ ಬದ್ಧತೆ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯನ್ನು ತರುವಲ್ಲಿ ತುಂಬಾ ಸಹಾಯಕ ಮತ್ತು ಪೂರಕ ವ್ಯವಸ್ಥೆಯಾಗಿದೆ.

ಭಾರತದಲ್ಲಿ ಸಂಘಟಿತ ವಲಯದ ಬ್ಯಾಂಕಿಂಗ್ ಉದ್ಯಮ ಸುಮಾರು ೨೧೦ ವರ್ಷಗಳ ಸುದೀರ್ಘ ಇತಿಹಾಸ ಹೊಂದಿದ್ದರೆ, ಕರ್ನಾಟಕದಲ್ಲಿ ಸಂಘಟಿತ ವಲಯದ ಆಧುನಿಕ ಬ್ಯಾಂಕಿಂಗ್

ಉದ್ಯಮ ಸುಮಾರು ೧೫೩ ವರ್ಷಗಳ ಸುದೀರ್ಘ, ಅನೇಕ ಏಳು-ಬೀಳುಗಳ ಚರಿತ್ರೆಯನ್ನು ಹೊಂದಿರುವುದು; ಕಾಲಗತಿಯಲ್ಲಿ ಈ ಉದ್ಯಮವು ಬದಲಾಗುತ್ತಿರುವ ಆರ್ಥಿಕ, ಸಾಮಾಜಿಕ, ರಾಜಕೀಯ, ವಾಣಿಜ್ಯಕ, ತಾಂತ್ರಿಕ ನೈಪುಣ್ಯತೆ, ಹೊಸ ಆವಿಷ್ಕಾರ, ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಜಾಗತಿಕ, ವಿಚಾರ ಧಾರೆಗಳಿಗೆ ಸೂಕ್ತವಾಗಿ ಸ್ಪಂದಿಸುತ್ತಾ ಮುನ್ನಡೆದಿರುವುದು ಈ ಉದ್ಯಮದ ವಿಶೇಷತೆ ಮತ್ತು ಕ್ರಿಯಾಶೀಲತೆ ಎಂದು ಹೇಳಬಹುದು.

೨೦ನೇ ಶತಮಾನದಲ್ಲಿಯೂ, ಆಧುನಿಕ ಬ್ಯಾಂಕಿಂಗ್ ಉದ್ಯಮದಲ್ಲಿ ಕರ್ನಾಟಕವು ಇಡೀ ದೇಶದಲ್ಲಿ ಅನೇಕ ವಲಯಗಳಲ್ಲಿ ಗಮನಾರ್ಹ ಮುನ್ನಡೆಯನ್ನು ಸಾಧಿಸಿದೆ ಮತ್ತು ದೇಶದಲ್ಲಿಯೇ ಅನೇಕ 'ಪ್ರಪ್ರಥಮ' ಎಂದು ಹೇಳಲಾಗುವ ಘಟನೆಗಳಿಗೆ ಸಾಕ್ಷಿಯಾಗಿದೆ.

ಕರ್ನಾಟಕದಲ್ಲಿ ಸಂಘಟಿತ ವಲಯದ ಬ್ಯಾಂಕಿಂಗ್ ಉದ್ಯಮದ ಆರಂಭವನ್ನು ಅಂದಿನ ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಪ್ರಾಯೋಜಕತ್ವದಲ್ಲಿ ಆರಂಭಗೊಂಡ ಅಂದಿನ ಬೊಂಬಾಯಿ ಪ್ರೆಸಿಡೆನ್ಸಿ ಬ್ಯಾಂಕ್ (೧೮೪೦) (Presidency Bank of Bombay) ಮತ್ತು ಮದ್ರಾಸ್ ಪ್ರೆಸಿಡೆನ್ಸಿ ಬ್ಯಾಂಕ್ (೧೮೪೩) (Madras Presidency Bank) ಇವುಗಳು ತಮ್ಮ ವ್ಯಾಪಾರ ಅಭಿವೃದ್ಧಿಗೆ ಸಹಾಯಕವಾಗಲು ಅವುಗಳ ಶಾಖೆಗಳನ್ನು ಕ್ರಮವಾಗಿ ಧಾರವಾಡ (೧೮೬೩) ಮತ್ತು ಬೆಂಗಳೂರಿನ ದಂಡುಪ್ರದೇಶದಲ್ಲಿ (Cantonment) ೧೮೬೪ರಲ್ಲಿ ಆರಂಭಿಸುವ ಮೂಲಕ ಉದ್ಯಮದ ಬೀಜಾಂಕುರವಾಯಿತು ಎಂದು ದಾಖಲೆಗಳ ಮೂಲಕ ತಿಳಿದು ಬರುವುದು. ಮೊದಲನೆಯ ಪ್ರೆಸಿಡೆನ್ಸಿ ಬ್ಯಾಂಕ್, ಬ್ಯಾಂಕ್ ಆಫ್ ಬೆಂಗಾಲ್ (Bank of Bengal) ಎಂಬ ಹೆಸರಿನಲ್ಲಿ ೧೮೦೬ರಲ್ಲಿ ಕಲಕತ್ತಾ ನಗರದಲ್ಲಿ ಆರಂಭಗೊಂಡಿತು.] ಈ ಮೂರು ಪ್ರೆಸಿಡೆನ್ಸಿ ಬ್ಯಾಂಕುಗಳ ಆರಂಭವು ಭಾರತದಲ್ಲಿ ಸುಭದ್ರವಾದ ಮತ್ತು ಸಂಘಟಿತ ವಲಯದ ಬ್ಯಾಂಕಿಂಗ್ ಉದ್ಯಮ ಆಳವಾಗಿ ವ್ಯಾಪಕವಾಗಿ ಬೇರೂರಲು ಪ್ರಮುಖ ಅಂಶವಾಗಿತ್ತು. ಇದರ ಪೂರ್ವದಲ್ಲಿ ದೇಶದ ಹಲವಡೆಯಲ್ಲಿ ಅಲ್ಲಲ್ಲಿ ವಿರಳವಾಗಿ ಅನೇಕ ಕೂಡು ಬಂಡವಾಳ ಸಂಸ್ಥೆಗಳು (Joint Stock Co.) ಬ್ಯಾಂಕಿಂಗ್ ಉದ್ಯಮವನ್ನು ಸ್ವತಂತ್ರವಾಗಿ ಆರಂಭ ಮಾಡಿದ್ದ ವಿಷಯ ದಾಖಲೆಗಳಿಂದ ತಿಳಿಯಬಹುದು. ಆದರೆ ಈ ಸಂಸ್ಥೆಗಳು ತಮ್ಮದೇ ಆದ ಹಲವಾರು ಕಾರಣಗಳಿಂದ ಬಹುಕಾಲ ಬಾಳಿ ಬದುಕಲಿಲ್ಲ. ಅನೇಕ ಸಂಸ್ಥೆಗಳು ಬಹುಬೇಗ ತಮ್ಮ ಅಸ್ತಿತ್ವವನ್ನು ಕಳೆದುಕೊಂಡವು. ಬೊಂಬಾಯಿ ಪ್ರೆಸಿಡೆನ್ಸಿ ಬ್ಯಾಂಕ್ ಧಾರವಾಡ ಶಾಖೆಯ ನಂತರ ಬೆಳಗಾವಿಯಲ್ಲಿ (೧೮೬೭), ಹುಬ್ಬಳ್ಳಿ (೧೮೭೦), ಮತ್ತು ಕುಮಟಾ (ಉ.ಕ. ಜಿಲ್ಲೆ) ೧೮೭೨-೭೩)ರಲ್ಲಿ ಶಾಖೆಗಳನ್ನು ಸ್ಥಳೀಯ ಹತ್ತಿ ವ್ಯಾಪಾರಸ್ಥರ ಅನುಕೂಲಕ್ಕಾಗಿ ಆರಂಭಿಸಿತು. ಮದ್ರಾಸ್ ಪ್ರೆಸಿಡೆನ್ಸಿ ಬ್ಯಾಂಕ್ ೧೮೬೭ರಲ್ಲಿ ಮಂಗಳೂರಿನಲ್ಲಿ ತನ್ನ ಶಾಖೆಯನ್ನು 'ಕರಾವಳಿಯ ವರ್ತಕರು ಮತ್ತು ಮಿಷಿನರಿ'ಗಳ ಅನುಕೂಲಕ್ಕೆ ಆರಂಭಿಸಿತು.

ಮುಂದುವರೆದು, ೧೯೨೧ರಲ್ಲಿ ಈ ಮೊದಲಿನ ಮೂರೂ ಪ್ರೆಸಿಡೆನ್ಸಿ ಬ್ಯಾಂಕುಗಳನ್ನು ವಿಲೀನಗೊಳಿಸಿ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ (Imperial Bank of India) ಆರಂಭಿಸಲಾಯಿತು. ಇದು ಸರ್ಕಾರದ ಅಂಗ ಸಂಸ್ಥೆಯಾಗಿ ಮತ್ತು ಸಾರ್ವಜನಿಕ ವಲಯದ ವಾಣಿಜ್ಯ ಬ್ಯಾಂಕ್ ಆಗಿಯೂ ಸೇವೆಯನ್ನು ಸಲ್ಲಿಸುತ್ತಿತ್ತು. ಮುಂಬರುವ ದಿನಗಳಲ್ಲಿ ೧೯೩೫ರಲ್ಲಿ ಭಾರತಕ್ಕೆ ಪ್ರತ್ಯೇಕವಾದ ಕೇಂದ್ರಿಯ ಬ್ಯಾಂಕ್ (Central Bank) ಅಂದರೆ ಭಾರತೀಯ ರಿಜರ್ವ್ ಬ್ಯಾಂಕ್ ಆರಂಭಿಸಲಾಯಿತು (Reserve Bank of India). ಸ್ವಾತಂತ್ರ್ಯ ನಂತರ ೧೯೪೯ರಲ್ಲಿ ಪ್ರಪ್ರಥಮವಾಗಿ, ಬೆಳೆಯುತ್ತಿರುವ ಭಾರತೀಯ ಬ್ಯಾಂಕಿಂಗ್ ವ್ಯವಸ್ಥೆಯ ಆಡಳಿತವನ್ನು ಸಂಪೂರ್ಣವಾಗಿ ನಿಯಂತ್ರಿಸಲು, ಆರ್ಥಿಕವಾಗಿ ಬಲಪಡಿಸಲು ಸಹಾಯಕವಾಗುವಂತೆ ಸಮಗ್ರವಾದ (Banking Regulation Act) ಬ್ಯಾಂಕಿಂಗ್ ನಿಯಂತ್ರಣ ಕಾಯಿದೆಯನ್ನು ಜಾರಿಗೆ ತರುವ ಮೂಲಕ ಬ್ಯಾಂಕಿಂಗ್ ಸಂಸ್ಥೆಗಳನ್ನು ಇನ್ನಷ್ಟು ಬಲಪಡಿಸಲಾಯಿತು. ಈ ರಾಷ್ಟ್ರ ವ್ಯಾಪ್ತಿಯ ಪ್ರಥಮ ಕಾನೂನು ಭಾರತದಲ್ಲಿ ಬ್ಯಾಂಕಿಂಗ್ ಉದ್ಯಮ ಸುಭದ್ರವಾದ ಆರ್ಥಿಕ ತಳಹದಿಯ ಮೇಲೆ ನಿಲ್ಲಲು ಸಹಾಯಕವಾಯಿತು.

ಬೆಳೆಯುತ್ತಿರುವ ಬ್ಯಾಂಕಿಂಗ್ ಉದ್ಯಮವನ್ನು ಇನ್ನಷ್ಟು ಬಲಪಡಿಸಲು ಮತ್ತು ಬ್ಯಾಂಕಿಂಗ್ ಸೇವೆಗಳ ಪರಿಧಿಯನ್ನು ವಿಸ್ತರಿಸಲು, ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಬ್ಯಾಂಕಿಂಗ್ ಸೇವೆಗಳನ್ನು ವ್ಯವಸಾಯಕ್ಕೆ ಪೂರಕವಾಗುವಂತೆ ವಿಸ್ತರಿಸಲು ಸಹಾಯಕವಾಗುವಂತೆ ೧೯೨೧ರಲ್ಲಿ ಸ್ಥಾಪನೆಯಾಗಿದ್ದ ಇಂಪೀರಿಯಲ್ ಬ್ಯಾಂಕ್‌ನ್ನು ಪುನರ್ ರಚಿಸಿ (೧೯೫೫, ಜುಲೈ) ಭಾರತೀಯ ಸ್ಟೇಟ್ ಬ್ಯಾಂಕ್ ಎಂದು ಪುನರ್ ನಾಮಕರಣ ಮಾಡಲಾಯಿತು. ಪುನರ್ ರಚಿತಗೊಂಡ ಸ್ಟೇಟ್ ಬ್ಯಾಂಕ್‌ನಲ್ಲಿ ಈ ಮೊದಲೆ ಕಾರ್ಯ ನಿರ್ವಹಿಸುತ್ತಿದ್ದ ವಿವಿಧ ಪ್ರದೇಶಗಳ ದೇಶೀಯ ಸಂಸ್ಥಾನಗಳು (Princely States) ಆರಂಭಿಸಿದ್ದ ಏಳು ಸಹವರ್ತಿ ಬ್ಯಾಂಕುಗಳಲ್ಲಿ ಕೆಲವು ಸ್ಟೇಟ್‌ಬ್ಯಾಂಕ್‌ನೊಂದಿಗೆ ವಿಲೀನಗೊಂಡರೆ ಉಳಿದವು (ಸಹವರ್ತಿ) SBI Associate Banks ಆಗಿ ಕಾರ್ಯ ನಿರ್ವಹಿಸುತ್ತಿವೆ. ಈಗ ಉಳಿದಿರುವ ಐದು (ಕರ್ನಾಟಕದ SBMಸೇರಿದಂತೆ) ಮತ್ತು ಇತ್ತೀಚೆಗೆ ೨೦೧೩ರಲ್ಲಿ ಆರಂಭಗೊಂಡ ಭಾರತೀಯ ಮಹಿಳಾ ಬ್ಯಾಂಕ್ ಸೇರಿದಂತೆ ಪ್ರಾದೇಶಿಕ ಸ್ಟೇಟ್ ಬ್ಯಾಂಕುಗಳನ್ನು ಭಾರತೀಯ State Bankನೊಂದಿಗೆ ವಿಲೀನಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ. ಇದಕ್ಕೆ ಸ್ಥಳೀಯ ಪ್ರಾದೇಶಿಕ ಬ್ಯಾಂಕುಗಳ ನೌಕರರ ಸಂಘಟನೆಗಳು ಕಳೆದು ಹೋಗಲಿರುವ ತಮ್ಮ ಅಸ್ತಿತ್ವವನ್ನು ಕುರಿತಂತೆ ವಿರೋಧಿಸುತ್ತಿವೆ.

ಇಂದು ಭಾರತೀಯ ಸ್ಟೇಟ್ ಬ್ಯಾಂಕ್ ದೇಶದ ಅತ್ಯಂತ ಪ್ರಮುಖ ಮತ್ತು ದೇಶದ ಬ್ಯಾಂಕಿಂಗ್ ವ್ಯವಹಾರದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯ ಶಾಖೆಗಳನ್ನು ಹೊಂದಿರುವ ದೇಶದ ಪ್ರಮುಖ ಬ್ಯಾಂಕಾಗಿದ್ದು ಕರ್ನಾಟಕದಲ್ಲಿ ೭೧೩ ಶಾಖೆಗಳನ್ನು ಹೊಂದಿದೆ.

### ಅಸಂಘಟಿತ ವಲಯದ ಬ್ಯಾಂಕಿಂಗ್ ವ್ಯವಸ್ಥೆ

ಅಸಂಘಟಿತ ವಲಯದ (Unorganised) ಬ್ಯಾಂಕಿಂಗ್ ವ್ಯವಸ್ಥೆ ದೇಶದ ಅತ್ಯಂತ ಪ್ರಾಚೀನವಾದ ಹಣದ ಲೇವಾದೇವಿಯ ವ್ಯವಸ್ಥೆಯಾಗಿದ್ದು ಸ್ಥಳೀಯವಾಗಿ ಬೇರೆ ಬೇರೆ ಹೆಸರಿನಿಂದ ಕರೆಯಲ್ಪಡುತ್ತಿದೆ. ಈ ವ್ಯವಸ್ಥೆಯು ಪ್ರಮುಖವಾಗಿ ಸ್ಥಳೀಯ ವರ್ತಕರು, ಸಾಹುಕಾರರು, ಶ್ರೀಮಂತರು, ಜಮೀನುದಾರರು, ರಾಜ ಪರಿವಾರದವರು, ಮಠಮಾನ್ಯಗಳು, ಮಾರವಾಡಿಗಳು, ಚೆಟ್ಟಿಯಾರರು, ಜೈನರು, ಮುಲ್ತಾನಿ ಬ್ಯಾಂಕರುಗಳು, ನಿಧಿಗಳು, ಚಿಟ್‌ಫಂಡುಗಳು, ಹಣಕಾಸು ಸಂಸ್ಥೆಗಳು, ಗಿರವಿದಾರರು

ಮುಂತಾದವರನ್ನು ಒಳಗೊಂಡಿರುವದು. ಇವರು ತಮ್ಮದೇ ಬಂಡವಾಳದಿಂದ ಹಣದ ಲೇವಾದೇವಿ ನಡೆಸುತ್ತಿರುವರು. ಈ ವ್ಯವಹಾರಗಳನ್ನು ನಿಯಂತ್ರಿಸಲು ಕರ್ನಾಟಕದಲ್ಲಿ ವಿಲೀನಗೊಂಡ ವಿವಿಧ ಆಡಳಿತ ಪ್ರದೇಶಗಳಲ್ಲಿ ೧೯೩೦–೪೦ರ ದಶಕದವರೆಗೆ ಯಾವುದೇ ಬಲವಾದ ಕಾನೂನಿನ ನಿಯಂತ್ರಣ ಇರಲಿಲ್ಲ. ಬಡ್ಡಿದರದ ನಿಯಂತ್ರಣವೂ ಇರಲಿಲ್ಲ. ಇದರಿಂದ ಬಡ ಸಾಲಗಾರರ ಶೋಷಣೆ ಅದರಲ್ಲಿಯೂ ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ, ಬಡ ಅಸಹಾಯಕ ರೈತರ, ಕೂಲಿ ಕಾರ್ಮಿಕರ ಶೋಷಣೆ ಅವ್ಯಾಹತವಾಗಿ ನಡೆಯುತ್ತಿತ್ತು. ಆದರೆ ಮೈಸೂರು ಸಂಸ್ಥಾನದಲ್ಲಿ ಈ ಕುರಿತಂತೆ ೧೯೨೩, ೧೯೩೭ ಮತ್ತು ೧೯೩೯ರಲ್ಲಿ ವಿವಿಧ ಕಾನೂನುಗಳು ಜಾರಿಯಲ್ಲಿ ಇದ್ದವು. ಕರ್ನಾಟಕದಲ್ಲಿ ಈ ವ್ಯವಸ್ಥೆಯನ್ನು ಸಂಪೂರ್ಣವಾಗಿ ನಿಯಂತ್ರಿಸಲು ೧೯೬೧ರಲ್ಲಿ ರಾಜ್ಯವ್ಯಾಪ್ತಿಯ ಲೇವಾದೇವಿ ನಿಯಂತ್ರಣ ಮತ್ತು ೧೯೬೧ರಲ್ಲಿ ಗಿರವಿ ವ್ಯವಹಾರ ನಿಯಂತ್ರಣ, ೧೯೮೨ರಲ್ಲಿ ಚಿಟ್‌ಫಂಡ್ ನಿಯಂತ್ರಣ ಕಾನೂನನ್ನು ಜಾರಿಗೊಳಿಸಲಾಯಿತು. ಅನೇಕ ಸಂದರ್ಭಗಳಲ್ಲಿ ಈ ವ್ಯವಸ್ಥೆ ಸ್ಥಳೀಯವಾಗಿ ಜೀತ ಪದ್ಧತಿ (Bonded Labour), ಬಾಲ ಕಾರ್ಮಿಕರ ಬಳಕೆ, ಸಾಮಾಜಿಕ ಶೋಷಣೆ ಮುಂತಾದವುಗಳಿಗೆ ಅವಕಾಶ ಮಾಡಿಕೊಟ್ಟಿದೆ.

ಈ ಹಣದ ಲೇವಾದೇವಿ ವ್ಯವಹಾರ ಅತ್ಯಂತ ಸರಳ, ಸುಲಭವಾಗಿ ಯಾವುದೇ ಪರಿಶ್ರಮ ಇಲ್ಲದೇ ಸುಲಭವಾಗಿ ಲಾಭ ಗಳಿಸುವ ಉದ್ಯಮವಾದುವದರಿಂದ ಕರ್ನಾಟಕದಲ್ಲಿ ಹೊರ ರಾಜ್ಯಗಳಿಂದ ವಿಶೇಷವಾಗಿ ಉತ್ತರದ ಕಡೆಯಿಂದ ಬಂದ ಮಾರವಾಡಿಗಳು. ಜೈನರು, ಮಹಾಜನ, ಬನಿಯ ಮುಂತಾದವರು ಕರ್ನಾಟಕದ ಪ್ರಮುಖ ನಗರಗಳಲ್ಲಿ ಬಂದು ನೆಲೆಸಿರುವುದಲ್ಲದೇ ಅನೇಕ ವಾಣಿಜ್ಯ ವ್ಯವಹಾರದಲ್ಲಿ ತೊಡಗಿರುವರು, ಸ್ಥಳೀಯ ವ್ಯವಸ್ಥೆಗೆ ಹೊಂದಿಕೊಂಡಿರುವರು. ನೊಂದಾಯಿತ ಹಣದ ಲೇವಾದೇವಿಗಾರರಲ್ಲದೇ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಅನೇಕರು ಖಾಸಗಿಯಾಗಿ ಹಣದ ಲೇವಾದೇವಿಯನ್ನು ಚೀಟಿ ವ್ಯವಹಾರವನ್ನು ಮಾಡುತ್ತಿದ್ದು, ಸದರಿಯವರು ಮಾಸಿಕ ಶೇ.೩ರಿಂದ ೫ರವರೆಗೆ 'ಮೀಟರ್' ಬಡ್ಡಿಯನ್ನು ವಸೂಲಿ ಮಾಡುವುದು ರೂಢಿಯಲ್ಲಿದೆ. ಚೀಟಿ ವ್ಯವಹಾರಗಳಲ್ಲಿ ಅನೇಕ ವಿಧದ ವಂಚನೆ, ಮೋಸ, ಅವ್ಯವಹಾರಗಳು ವರದಿಯಾಗಿರುವುದು ಎಲ್ಲರಿಗೂ ಗೊತ್ತಿರುವ ವಿಷಯ.

ಸಹಕಾರ ಇಲಾಖೆಯ ೨೦೧೬ರ ಆಡಳಿತ ವರದಿಯಂತೆ, ಸದರಿ ವರ್ಷದ ಮಾರ್ಚ್ ಕೊನೆಯಲ್ಲಿ ರಾಜ್ಯಾದ್ಯಂತ ೧೭,೦೨೭ ನೊಂದಾಯಿತ ಲೇವಾದೇವಿಗಾರರು/ಹಣಕಾಸು ಸಂಸ್ಥೆಗಳು, ೧೦೬೧ ಗಿರವಿದಾರರು ಕಾರ್ಯ ನಿರ್ವಹಿಸುತ್ತಿದ್ದು, ೨೦೧೫–೧೬ರಲ್ಲಿ ಲೇವಾದೇವಿಗಾರರು ಗಿರವಿದಾರರು ಮತ್ತು ಹಣಕಾಸು ಸಂಸ್ಥೆಗಳಿಂದ ಒಟ್ಟಾಗಿ ರೂ.೧೭೬.೧೨ ಲಕ್ಷ ಪರವಾನಗಿ ಶುಲ್ಕ ಸಂದಾಯವಾಗಿದೆ. ಲೇವಾದೇವಿ ಅದಿನಿಯಮ ೧೯೬೧ರ ಅನ್ವಯ ದಿನಾಂಕ ೨೮–೮–೨೦೦೩ರಿಂದ ಲೇವಾದೇವಿಗಾರರು ಭದ್ರತಾ ಸಾಲಗಳಿಗೆ ವಾರ್ಷಿಕ ಶೇ.೧೪ ಮತ್ತು ಭದ್ರತಾರಹಿತ ಸಾಲಗಳಿಗೆ ಶೇ.೧೬ಕ್ಕಿಂತ ಹೆಚ್ಚಿನ ಬಡ್ಡಿಯನ್ನು ವಿಧಿಸುವಂತಿಲ್ಲ. ಪ್ರಸ್ತುತ ರಾಜ್ಯದಲ್ಲಿ ೧೦೪೨ ನೊಂದಾಯಿತ ಚಿಟ್ ಸಂಸ್ಥೆಗಳಿದ್ದು, ೨೦೧೫–೧೬ರಲ್ಲಿ, ರೂ.೯೧.೦೨ ಲಕ್ಷ ಸರ್ಕಾರಕ್ಕೆ ಶುಲ್ಕ ಸಂದಾಯವಾಗಿರುವದು. ಒಂದು ಅಂದಾಜಿನ ಪ್ರಕಾರ ರಾಜ್ಯದ ಒಟ್ಟು ಸಂಖ್ಯೆಯ ಲೇವಾದೇವಿಗಾರರಲ್ಲಿ, ಗಿರವಿದಾರರಲ್ಲಿ ಹಣಕಾಸು ಸಂಸ್ಥೆಗಳಲ್ಲಿ, ಬಹುಪಾಲು ಬೆಂಗಳೂರು ಮಹಾನಗರ ಪಾಲಿಕೆಯ ಮಿತಿಯಲ್ಲಿ ಕೇಂದ್ರಿಕೃತವಾಗಿವೆ ಎಂಬುದು ಅಂಕಿ–ಅಂಶಗಳಿಂದ ತಿಳಿದು ಬರುವದು. ಅನೇಕ ಹೊರ ರಾಜ್ಯಗಳ ಹಣಕಾಸು ಸಂಸ್ಥೆಗಳು ಬೆಂಗಳೂರಿನಲ್ಲಿ ತಮ್ಮದೇ ಆದ ಶಾಖೆಗಳನ್ನು ಹೊಂದಿರುವವು.

ಫೈನಾನ್ಸ್ ಕಾರ್ಪೋರೇಷನ್‌ಗಳು ಭಾರತೀಯ ಪಾಲುಗಾರಿಕೆ ಕಾನೂನು ೧೯೩೨ ಅಥವಾ ಕಂಪನಿ ಕಾನೂನು ೧೯೫೬ರ ಅನ್ವಯ ನೊಂದಾಯಿತ ಸಂಸ್ಥೆಗಳಾಗಿದ್ದು ಸಾರ್ವಜನಿಕರ ಠೇವಣಿಗಳನ್ನು ಆಕರ್ಷಿಸಲು ಅನೇಕ ಬಹುಮಾನ ಯೋಜನೆಗಳ ಮೂಲಕ ಠೇವಣಿಗಳನ್ನು ಸಂಗ್ರಹಿಸುತ್ತಿವೆ. ಅವಶ್ಯ ಇರುವ ಚಿಲ್ಲರೆ ವ್ಯಾಪಾರಸ್ಥರು, ಸಣ್ಣ ಉದ್ಯಮದಾರರು, ಸರ್ಕಾರಿ ನೌಕರರು ಈ ಸಂಸ್ಥೆಗಳಿಂದ ಸಾಲ ಪಡೆಯುವವರು ಇವುಗಳ ಸ್ವೀಕರಿಸುವ ಬಡ್ಡಿ ಬ್ಯಾಂಕಿನ ಬಡ್ಡಿಗಿಂತ ಹೆಚ್ಚಾಗಿರುವದು. ಅನೇಕ ಹಣಕಾಸು ಸಂಸ್ಥೆಗಳು ವಾಹನ ಖರೀದಿ ಸಾಲ, ಗಿರವಿ ಸಾಲಗಳನ್ನು ಸ್ಥಿರಾಸ್ತಿ ಜಾಮೀನಿನ ಮೇಲೆ ಮಂಜೂರು ಮಾಡುವವು. ಅನೇಕ ಸಂದರ್ಭಗಳಲ್ಲಿ ಈ ಸಂಸ್ಥೆಗಳು ಹೇಳದೇ ಕೇಳದೇ ತಮ್ಮ ವ್ಯವಹಾರವನ್ನು ಮುಚ್ಚಿಬಿಡುವ ಮೂಲಕ ಸಾರ್ವಜನಿಕರು ವಂಚನೆಗೆ ಒಳಗಾದ ಸಂದರ್ಭಗಳೂ ಉಂಟು.

### ಬೆಂಗಳೂರಿನ ದಂಡು ಪ್ರದೇಶದ ಲೇವಾದೇವಿ ವ್ಯವಹಾರ

ಬ್ರಿಟಿಷರ ಆಳ್ವಿಕೆಯಲ್ಲಿ ಬೆಂಗಳೂರು ದಂಡು ಪ್ರದೇಶದಲ್ಲಿ ಸ್ಥಳೀಯರೊಂದಿಗೆ, ಯುರೋಪಿಯನ್ ಮೂಲದ ಹಣಕಾಸು ಲೇವಾದೇವಿಗಾರರು, (ಸೈನ್ಯಾಧಿಕಾರಿಗಳ ವಿಧವಾ ಪತ್ನಿಯರೂ ಸೇರಿದಂತೆ) ಲೇವಾದೇವಿ ವ್ಯವಹಾರದಲ್ಲಿ ತಮ್ಮನ್ನು ವ್ಯಾಪಕವಾಗಿ ತೊಡಗಿಸಿಕೊಂಡಿದ್ದರು. ಕಾಲಕ್ರಮೇಣ ವ್ಯವಹಾರಗಳು ವೃದ್ಧಿಯಾದಂತೆ, ವ್ಯವಹಾರಕ್ಕೆ ಸಂಬಂಧಪಟ್ಟಂತೆ ಸಾಲಗಾರ ಮತ್ತು ಸಾಲಿಗರ ನಡುವೆ ವ್ಯಾಜ್ಯಗಳು ಹೆಚ್ಚಾಗಿ, ಸದರಿ ವ್ಯಾಜ್ಯಗಳನ್ನು ತೀರಿಸಲು ೧೮೬೩ರಲ್ಲಿ ಯುರೋಪಿಯನ್ ಮಹಿಳೆಯರಿಗೆ ಪ್ರತ್ಯೇಕವಾದ (**small cause**) ಲಘು ವ್ಯವಹಾರಗಳ ನ್ಯಾಯಾಲಯಗಳು ಆರಂಭವಾದ ವಿಷಯ, ಬೆಂಗಳೂರಿನ ಬಡ್ಡಿ ವ್ಯವಹಾರದ ಗಾತ್ರ ಮತ್ತು ವ್ಯಾಪಕತೆಯನ್ನು ಸೂಚಿಸುವುದು. ವಿಶೇಷ ಕೋರ್ಟ್‌ಗಳು ರೂ.೫೦೦ವರೆಗಿನ ವ್ಯವಹಾರಕ್ಕೆ ಮಾತ್ರ ಸೀಮಿತವಾಗಿದ್ದವು.

ಮುಂದುವರೆದು, ೧೮೯೫ರಲ್ಲಿ ಇಲ್ಲಿ ಕೆಲವು ವರ್ಷ ಸೈನ್ಯದ ಅಧಿಕಾರಿಯಾಗಿದ್ದ ಬ್ರಿಟಿಷ್ ಪ್ರಧಾನಮಂತ್ರಿ ವಿನ್‌ಸ್ಟನ್ ಚರ್ಚಿಲ್ ಅವರು ದಂಡುಪ್ರದೇಶದ ಸ್ಥಳೀಯ ಲೇವಾದೇವಿಗಾರರ ವ್ಯಕ್ತಿತ್ವ, ಗುಣ ಸ್ವಭಾವ, ವೃತ್ತಿಪರತೆ ಕುರಿತಂತೆ ತಮ್ಮದೇ ಆದ ರೋಚಕ ಅನುಭವವನ್ನು ದಾಖಲಿಸಿರುವರು. ಈ ಲೇವಾದೇವಿಗಾರರನ್ನು 'ಹಿಂದು ಬ್ಯಾಂಕರ್ಸ್ ಮತ್ತು ಸಾಹುಕಾರರು' ಎಂದು ಕರೆಯಲಾಗಿದೆ. ಅವರು ಅಂದು ವಿಧಿಸುತ್ತಿದ್ದ ಬಡ್ಡಿ ತಿಂಗಳಿಗೆ ಶೇ.೨. ಇದರಿಂದ ಅವರಿಗೆ ಉತ್ತಮ ಆದಾಯ ಬರುತ್ತಿತ್ತು ಎಂದು ನಮೂದಿಸಿರುವರು. ದಂಡುಪ್ರದೇಶದ ಲೇವಾದೇವಿ ವ್ಯವಹಾರವನ್ನು ಕುರಿತಂತೆ ಕಮಿಶನರ್ ಬೌರಿಂಗ್ ೧೮೭೨ರಲ್ಲಿ ತಮ್ಮ 'Eastern Experience'ನಲ್ಲಿ ಅನೇಕ ಕುತುಹಲಕಾರಿ ವಿವರಗಳನ್ನು ದಾಖಲಿಸಿರುವರು. 'A guide to Bangalore ೧೯೦೫' ವರದಿಯ ಪ್ರಕಾರ ದಂಡು ಪ್ರದೇಶದ ವಿವಿಧ ಸೈನಿಕ

ನೆಲೆಗಳಲ್ಲಿನ ಬಡ್ಡಿ ವ್ಯವಹಾರಗಳು ಮತ್ತು ಅತೀಯಾದ ಬಡ್ಡಿಯ ಸಾಲಗಳು ನಿಜವಾಗಿಯೂ ಜನರ ರಕ್ತ ಹೀರಿ ಹಿಂದು ಬ್ಯಾಂಕರ್ಸ್ ಮತ್ತು ಸಾಹುಕಾರರು ಸಾಕಷ್ಟು ಸಂಪತ್ತುಗಳಿಸಿದ್ದರು ಎಂದು ಟೀಕಿಸಲಾಗಿದೆ.

ಬೆಂಗಳೂರು ನಗರದಲ್ಲಿ ೧೮ನೇ ಶತಮಾನದಲ್ಲಿ ಬಹು ಶ್ರೀಮಂತ ವರ್ತಕರು ಹಣದ ಲೇವಾದೇವಿಯಲ್ಲಿ ತೊಡಗಿಸಿಕೊಂಡಿದ್ದರು ಎಂದು ದಾಖಲೆಗಳಿಂದ ತಿಳಿದು ಬರುವುದು. ಮೈಸೂರು ಗ್ಯಾಜೆಟಿಯರಿನ ಒಂದು ದಾಖಲೆ ಪ್ರಕಾರ ನವಾಬ ಹೈದರ್ ಅಲಿಯು ಮೈಸೂರು ಸೈನ್ಯದ ಅಧಿಕಾರಿಯಾಗಿದ್ದಾಗ ೧೭೬೦ರಲ್ಲಿ ಬೆಂಗಳೂರಿನ ಬ್ಯಾಂಕರುಗಳಿಂದ ಸೈನಿಕ ಕಾರ್ಯಾಚರಣೆಗೋಸ್ಕರ ರೂ. ನಾಲ್ಕು ಲಕ್ಷ ಸಾಲ ಪಡೆದ ಬಗ್ಗೆ ತಿಳಿದು ಬರುವುದು.

## ವ್ಯಾಪಕವಾಗಿ ಬೆಳೆದ ಬ್ಯಾಂಕಿಂಗ್ ಉದ್ಯಮ

ಸ್ವಾತಂತ್ರ ಪೂರ್ವದ ದಶಕಗಳಲ್ಲಿ ಬ್ಯಾಂಕಿಂಗ್ ಉದ್ಯಮದ ಆರಂಭಕ್ಕೆ ಇಂದಿನಂತೆ ಯಾವುದೇ ಬಿಗಿಯಾದ ಕಾನೂನಿನ ನಿಯಂತ್ರಣ, ನಿರ್ವಹಣೆ ಇರಲಿಲ್ಲ. ಉದ್ಯಮದ ಆರಂಭ. ಸುಲಭ, ಸರಳ ಆಗಿತ್ತು. ಹೆಚ್ಚು ಕಾನೂನಿನ ತೊಡಕುಗಳು ಇರಲಿಲ್ಲ. ಇಂದಿನಂತೆ ಬ್ಯಾಂಕಿಂಗ್ ಉದ್ಯಮ, ಭಾರತೀಯ ರಿಸರ್ವ್ ಬ್ಯಾಂಕ್ ಕಾನೂನಿಕ ಅನ್ವಯ ನಿಗದಿಪಡಿಸಿದ ಸೀಮಿತ ಬ್ಯಾಂಕಿಂಗ್ ವ್ಯವಹಾರಕ್ಕೆ ಒಳಪಟ್ಟಿರಲಿಲ್ಲ. ಕೂಡು ಬಂಡವಾಳ ಸಂಸ್ಥೆಯ ಮೂಲಕ ಬ್ಯಾಂಕಿಂಗ್ ವ್ಯವಹಾರದ ಜೊತೆಯಲ್ಲಿ ಉತ್ಪಾದನೆ, ವಿತರಣೆ, ವಿಮೆ, ಸರಕು ಸಾಗಣೆ, ಕಮಿಷನ್ ವ್ಯವಹಾರ, ನಿರ್ಮಾಣ ಮುಂತಾದ ಅನೇಕ ಬ್ಯಾಂಕೇತರ ಚಟುವಟಿಕೆಗಳನ್ನು ನಡೆಸಬಹುದಾಗಿತ್ತು. ಪ್ರಥಮ ನಿಯಂತ್ರಣ ಆರಂಭವಾದದ್ದು ೧೯೪೯ರ ಬ್ಯಾಂಕಿಂಗ್ ಕಾಯಿದೆ ನಂತರ, ಇದರಿಂದಾಗಿ ಮಿತ ಬಂಡವಾಳ ಹೊಂದಿದ್ದ, ಹಣಕಾಸಿನ ನಿರ್ವಹಣಾ ಅನುಭವ ಇಲ್ಲದ, ವೃತ್ತಿಪರತೆ ಮತ್ತು ಪರಿಣತಿ ಇಲ್ಲದ ಬಹುಪಾಲು ಕುಟುಂಬ ವ್ಯವಹಾರದಂತೆ ಚಿಕ್ಕ ಚಿಕ್ಕ ಬ್ಯಾಂಕಿಂಗ್ ಕಂಪನಿಗಳು ನಗರ, ಅರೆನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಒಂದು ರೀತಿಯಲ್ಲಿ ನಾಯಿಕೊಡೆಗಳಂತೆ ವಿಪುಲವಾಗಿ ಬೆಳೆದು ಬಂದವು.

ಈ ರೀತಿ ರಾಜ್ಯದಲ್ಲಿ ಆರಂಭಗೊಂಡ ಬ್ಯಾಂಕಿಂಗ್ ಕಂಪನಿಗಳಲ್ಲಿ ಸುಮಾರು ಅರ್ಧದಷ್ಟು ೧೯೩೦-೪೦ರ ದಶಕದಲ್ಲಿ ನೊಂದಾಯಿಸಲ್ಪಟ್ಟವು. ಸ್ವದೇಶಿ ಚಳುವಳಿಯ ಆರಂಭ (೧೯೦೫-೧೯೧೫). ವಿಶೇಷವಾಗಿ ಸ್ಥಳೀಯ ವರ್ತಕರಿಗೆ,ರಾಜಕೀಯ ನಾಯಕರಿಗೆ, ಸಾಮಾಜಿಕ ಕಾರ್ಯಕರ್ತರಿಗೆ, ಸಮುದಾಯಗಳ ನಾಯಕರಿಗೆ ಬ್ಯಾಂಕಿಂಗ್ ಉದ್ಯಮ ಆರಂಭಿಸಲು ಪ್ರೇರಕವಾಯಿತು. ಈ ಅವಧಿಯಲ್ಲಿ ರಾಜ್ಯಾದ್ಯಂತ ಸಹಕಾರಿ ವಲಯದಲ್ಲಿ, ನಗರ ಮತ್ತು ಅರೆನಗರ ಪ್ರದೇಶಗಳಲ್ಲಿ ವ್ಯವಸಾಯೇತರ ಉದ್ದೇಶಗಳಿಗೆ ಸಾಲ ಸೌಲಭ್ಯ ಒದಗಿಸವ ಪಟ್ಟಣ ಸಹಕಾರ ಬ್ಯಾಂಕುಗಳು ಕ್ರೆಡಿಟ್ (Credit) ಸೊಸಾಯಿಟಿಗಳು ವ್ಯಾಪಕವಾಗಿ ನೊಂದಾಯಿಸಲ್ಪಟ್ಟವು. ಈ ಉದ್ದೇಶಕ್ಕೆ ಸಹಕಾರಿ ಕಾನೂನು ೧೯೧೨ ಪೂರಕವಾಗಿತ್ತು.

ಆದರೆ ಬ್ಯಾಂಕಿಂಗ್ ವಿಷಯದಲ್ಲಿ, ಆರಂಭಗೊಂಡ ಬಹುಪಾಲು ಬ್ಯಾಂಕುಗಳು ಜಾಗತಿಕ ಆರ್ಥಿಕ ಹಿನ್ನಡೆ (೧೯೨೯-೩೦) ನಂತರದ ಎರಡನೆಯ ಜಾಗತಿಕ ಯುದ್ಧದ (೧೯೩೯-೧೯೪೫) ಪರಿಣಾಮದಿಂದ ದೀರ್ಘಕಾಲ ಬದುಕುಳಿಯಲು ಸಾಧ್ಯವಾಗಲಿಲ್ಲ. ಅಂದಿನ ದಿನಗಳಲ್ಲಿ ಬ್ಯಾಂಕುಗಳ ಮತ್ತು ಸಹಕಾರಿ ಸಂಘಗಳ ಹೆಸರಿನ ಆಯ್ಕೆಯಲ್ಲಿ ಯಾವುದೇ ಕಾನೂನಿನ ನಿಯಂತ್ರಣ ತೊಡಕು ಇರಲಿಲ್ಲ. ಗ್ರಾಹಕರನ್ನು ಅವರವರ ಧರ್ಮ, ಜಾತಿ, ಪಂಗಡ, ಪ್ರದೇಶ, ಭಾಷೆಗಳ ಹೆಸರಿನಲ್ಲಿ ಆರಂಭಗೊಂಡ ಸಂಸ್ಥೆಗಳ ಮೂಲಕ ಭಾವನಾತ್ಮಕ ಬಾಂಧವ್ಯ ಬೆಸೆಯುವ ಮೂಲಕ ಸಂಸ್ಥೆಯ ವ್ಯವಹಾರದ ಬೆಳವಣಿಗೆಗೆ ಪೂರಕ ಅಂಶವಾಗಿ ಪರಿಣಾಮಿಸಿದ್ದನ್ನು ಕಾಣಬಹುದು. ಈ ಒಂದು ವಿಶೇಷ ಪ್ರವೃತ್ತಿಯು ಕರ್ನಾಟಕದಲ್ಲಿ ಆಧುನಿಕ ಬ್ಯಾಂಕಿಂಗ್ ಉದ್ಯಮಕ್ಕೆ ಸೂಕ್ತ ವೇದಿಕೆಯಾಗಿ ಪರಿಣಾಮಿಸಿತೆಂದೇ ಅರ್ಥೈಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಪ್ರಾರಂಭಿಕ ಹಂತದ ಬ್ಯಾಂಕಿಂಗ್ ಉದ್ಯಮದಲ್ಲಿ ಈ ಅಂಶ ಕಂಡುಬರುತ್ತದೆ.

## ದಕ್ಷಿಣ ಕನ್ನಡ ಜಿಲ್ಲೆಯ ಕೊಡುಗೆ

ಆಧುನಿಕ ಬ್ಯಾಂಕಿಂಗ್ ಉದ್ಯಮಕ್ಕೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಕೊಡುಗೆ ವಿಶೇಷವಾದದ್ದು, ಅಪಾರವಾದದ್ದು. ಬ್ಯಾಂಕು ಶಾಖೆಗಳನ್ನು ಆರಂಭಿಸುವ ಪ್ರಕ್ರಿಯೆ ಈ ಜಿಲ್ಲೆಯಲ್ಲಿ ವ್ಯಾಪಕವಾಗಿ ೧೯೨೩ಕ್ಕೆ ಮೊದಲೇ ಆರಂಭವಾಯಿತು. ಈ ಜಿಲ್ಲೆಯಲ್ಲಿ ನಾಲ್ಕು ದಶಕಗಳ ಅವಧಿಯಲ್ಲಿ (೧೯೦೬-೧೯೪೬) ವಿವಿಧ ಗಾತ್ರದ ೨೨ ಬ್ಯಾಂಕಿಂಗ್ ಕಂಪನಿಗಳನ್ನು ಹುಟ್ಟು ಹಾಕಿ ಅವುಗಳನ್ನು ಸರಿಯಾಗಿ ಪೋಷಿಸಿ ಪಾಲನೆ ಮಾಡಲಾಯಿತು. ಅಂತೆಯೇ ಈ ಜಿಲ್ಲೆಯನ್ನು ಭಾರತದಲ್ಲಿ ಬ್ಯಾಂಕಿಂಗ್ ಉದ್ಯಮದ ತೊಟ್ಟಿಲು ಎಂದು ಕರೆಯಲಾಗುವುದು. ಈ ಜಿಲ್ಲೆಯಲ್ಲಿ ಶಾಖೆಗಳನ್ನು ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ತೆರೆಯಲು ಸಿಂಡಿಕೇಟ್ ಬ್ಯಾಂಕ್ ೧೯೪೬ರಲ್ಲಿ ಆಯ್ಕೆ ಮಾಡಿಕೊಂಡ ವಿಧಾನ ಕುತೂಹಲಕಾರಿ. ಸ್ಥಳೀಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರನ್ನು ಕಮಿಷನ್ ಆಧಾರದ ಮೇಲೆ 'ಗ್ರಾಮೀಣ ಪ್ರತಿನಿಧಿಗಳು' ಎಂದು ನೇಮಿಸಿಕೊಂಡು ಅವರಿಗೆ ಈ ಹೊಣೆಗಾರಿಕೆಯನ್ನು ವಹಿಸಲಾಯಿತು. ಅವರು ಪ್ರತಿದಿನ ಮೂರು ಪ್ರತ್ಯೇಕ ಲೆಕ್ಕಗಳನ್ನು ನಿರ್ವಹಿಸಬೇಕಾಗುತ್ತಿತ್ತು. ಪೋಸ್ಟ್ ಆಫೀಸ್, ಸರ್ಕಾರದ ಶಾಲೆಯ ಲೆಕ್ಕ, ಜೊತೆಗೆ ಬ್ಯಾಂಕ್ ಲೆಕ್ಕ ಇದನ್ನು "ತ್ರಿ-ಇನ್-ಒನ್ (three-in-one)" ಎಂದು ತಮಾಷೆ ಮಾಡಲಾಗುತ್ತಿತ್ತು. ಇದು ಅತ್ಯಂತ ಕಡಿಮೆ ವೆಚ್ಚದಲ್ಲಿ ಸುರಕ್ಷಿತವಾಗಿ ಶಾಖೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಆರಂಭಿಸಲು ಅನುಕೂಲವಾಯಿತು. ಸಿಂಡಿಕೇಟ್ ಬ್ಯಾಂಕು ಒಂದೇ ದಿನದಲ್ಲಿ (ನವೆಂಬರ್ ೨೨) ೨೬ ಗ್ರಾಮೀಣ ಶಾಖೆಗಳನ್ನು ಜಿಲ್ಲೆಯಾದ್ಯಾಂತ ಆರಂಭಿಸಿತು. ಅಲ್ಲದೇ ಬ್ಯಾಂಕಿಂಗ್ ವಲಯದಲ್ಲಿ ಸಣ್ಣ ಉಳಿತಾಯ ಮನೋಭಾವನೆಯನ್ನು ಪ್ರಚೋದಿಸಲು 'ಪಿಗ್ಮಿ ಡಿಪಾಜಿಟ್' ಯೋಜನೆಯನ್ನು ಮೊದಲಿಗೆ ಆರಂಭ ಮಾಡಿದ ಹಿರಿಮೆ ಸಿಂಡಿಕೇಟ್ ಬ್ಯಾಂಕಿನದಾಗಿದೆ. ಮಂಗಳೂರು ನಗರವು ೧೯೩೦ರಸುಮಾರಿಗೆ ದೇಶದ ಪ್ರಮುಖ ಬ್ಯಾಂಕಿಂಗ್ ಕೇಂದ್ರಗಳಲ್ಲಿ ಒಂದಾಗಿತ್ತು. ೧೯೩೬ರಲ್ಲಿ ಮಂಗಳೂರಿನಲ್ಲಿ ಕ್ಲೆಯರಿಂಗ್ ಹೌಸ್ (Clearing House) ಆರಂಭಿಸಲಾಯಿತು. ಅಂದು ದೇಶಾದ್ಯಂತ ಕೇವಲ ೧೩ ಕ್ಲಿಯರಿಂಗ್ ಹೌಸ್‌ಗಳು ಕಾರ್ಯ ನಿರ್ವಹಿಸುತ್ತಿದ್ದವು.

ಕರ್ನಾಟಕದ ವಿವಿಧ ಭಾಗಗಳಲ್ಲಿ ಆಯಾ ಪ್ರದೇಶಗಳಲ್ಲಿನ ಸ್ಥಳೀಯ ಬೇಡಿಕೆ, ಆರ್ಥಿಕ ಬೆಳವಣಿಗೆಯ ಸಾಮರ್ಥ್ಯ, ನಿರ್ವಹಣಾ ಪರಿಣತಿ, ಮುಂತಾದವುಗಳನ್ನು ಆಧರಿಸಿ ಬೇರೆ ಬೇರೆ ಕಾಲಘಟ್ಟದಲ್ಲಿ ಅತಿ ವಿರಳವಾಗಿ ಬ್ಯಾಂಕಿಂಗ್ ಸಂಸ್ಥೆಗಳು

ಆರಂಭಿಸಲ್ಪಟ್ಟವು. ಸ್ಥಳೀಯ ಸಹಕಾರ ಬ್ಯಾಂಕಿಂಗ್ ವ್ಯವಸ್ಥೆ ಬಲವಾಗಿದ್ದ ಪ್ರದೇಶಗಳಲ್ಲಿ ವಾಣಿಜ್ಯ ಬ್ಯಾಂಕುಗಳು ತಮ್ಮ ಪ್ರವೇಶವನ್ನು ತಡವಾಗಿ ಮಾಡಿದವು. ಬೊಂಬಾಯಿ ಕರ್ನಾಟಕದಲ್ಲಿ ಇದು ಅನುಭವಕ್ಕೆ ಬರುತ್ತದೆ. ಹಳೇ ಮೈಸೂರು ಸಂಸ್ಥಾನದಲ್ಲಿ ಕಮಿಶನರ್ ಅವರ ಆಳ್ವಿಕೆಯ ಕಾಲ (೧೮೩೧-೧೮೮೧) ಅತ್ಯಂತ ಪ್ರಮುಖವಾದುದು. ಈ ಕಾಲದಲ್ಲಿ ಬ್ರಿಟೀಷ್ ಮಾದರಿಯ ಆಡಳಿತ ಕ್ರಮವನ್ನು ಅನುಸರಿಸುವ ಮೂಲಕ ಬ್ಯಾಂಕಿಂಗ್ ವಲಯವೂ ಸೇರಿದಂತೆ ಎಲ್ಲಾ ವಲಯಗಳಲ್ಲಿಯೂ ಆಧುನೀಕರಣವನ್ನು ವ್ಯಾಪಕವಾಗಿ ಸಂಸ್ಥಾನದಲ್ಲಿ ರೂಢಿಗೆ ತರಲಾಯಿತು. ೧೮೦೯ರಲ್ಲಿ ಬೆಂಗಳೂರಿನಲ್ಲಿ ದಂಡು ಪ್ರದೇಶದ ಸ್ಥಾಪನೆ ಆದನಂತರ, ಮುಂದುವರೆದು ೧೮೩೧ರಲ್ಲಿ ರಾಜ್ಯದ ಆಡಳಿತ ಸಚಿವಾಲಯವನ್ನು (Secretariate) ಮೈಸೂರಿನಿಂದ ಬೆಂಗಳೂರಿಗೆ ವರ್ಗಾವಣೆ ಮುಂತಾದ ಕ್ರಮಗಳಿಂದ ಬೆಂಗಳೂರಿನಲ್ಲಿ ವಾಣಿಜ್ಯ ಮತ್ತು ಕೈಗಾರಿಕಾಕರಣ ಚಟುವಟಿಕೆಗಳು ಉತ್ತೇಜನಗೊಂಡವು. ಈ ಉತ್ತೇಜನ ಮುಂಬರುವ ದಿನಗಳಲ್ಲಿ ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬ್ಯಾಂಕಿಂಗ್ ಉದ್ಯಮ ಇನ್ನಷ್ಟು ವ್ಯಾಪಕವಾಗಿ ಬೆಳೆಯಲು ಸಹಾಯಕವಾಯಿತು. ಬೆಂಗಳೂರಿನ ವ್ಯಾಪಾರ ವಾಣಿಜ್ಯ ಬೆಳೆದಂತೆ ಹೊರ ರಾಜ್ಯದ ಬ್ಯಾಂಕಿಂಗ್ ಕಂಪನಿಗಳು ಶಾಖೆಗಳ ಮೂಲಕ ನಗರ ಪ್ರವೇಶ ಮಾಡಿದವು.

ಸಂಸ್ಥಾನದ ಅಂದಿನ ರಾಜಧಾನಿ ಪಟ್ಟಣ ಮೈಸೂರು ನಗರವೂ ಬ್ಯಾಂಕಿಂಗ್ ಕಂಪನಿಗಳನ್ನು ಪ್ರಾಯೋಜಿಸುವಲ್ಲಿ ಯಾವದೇ ರೀತಿಯಲ್ಲಿ ಹಿಂದೆ ಬೀಳಲಿಲ್ಲ. ೧೮೭೪ರಲ್ಲಿ (ಅಂದರೆ ಬೆಂಗಳೂರಿನಲ್ಲಿ ಆರಂಭಗೊಂಡ ಆರು ವರ್ಷದ ನಂತರ) ರಾಜಧಾನಿ ಬ್ಯಾಂಕ್ ಮತ್ತು ಟೌನ್ ಬ್ಯಾಂಕ್ ಆಫ್ ಮೈಸೂರು (Town Bank of Mysore) ಎಂಬ ಎರಡು ಕಂಪನಿಗಳು ಮೈಸೂರಿನಲ್ಲಿ ಆರಂಭಗೊಂಡವು. ಇವುಗಳು ೧೯೧೩ರ ನಂತರ ಮುಂದುವರೆದ ಬಗ್ಗೆ ಯಾವುದೇ ದಾಖಲೆಗಳು ಲಭ್ಯವಿಲ್ಲ. ಒಂದು ದಶಕದ ನಂತರ ೧೮೮೫ರಲ್ಲಿ [ರಾಜಧಾನಿ ಬ್ಯಾಂಕಿನ ನಂತರ] ನಂಜನಗೂಡು ಶ್ರೀಕಂಠೇಶ್ವರಸ್ವಾಮಿ ಎಂಬ ಹೆಸರಿನ ಬ್ಯಾಂಕ್‌ನ್ನು ಪ್ರಾಯೋಜಿಸಲಾಯಿತು. ಈ ಸಂಸ್ಥೆಯು ೮೦ ವರ್ಷಗಳ ಸುದೀರ್ಘ ಸೇವೆಯ ನಂತರ ೧೯೬೫ರಲ್ಲಿ ಅದರ ಪರವಾನಗಿಯನ್ನು ಮುಂದುವರೆಸದೇ ಇದ್ದುದರಿಂದ ವ್ಯವಹಾರ ನಿಲ್ಲಿಸಲಾಯಿತು. ಸುಮಾರು ಎರಡೂವರೆ ದಶಕಗಳ ಅವಧಿಯಲ್ಲಿ (೧೮೮೪-೧೯೦೮) ರಾಜಧಾನಿ ನಗರ ಮೈಸೂರಿನಲ್ಲಿ ೧೭ ಕೂಡು ಬಂಡವಾಳ ಸಂಸ್ಥೆಗಳು ಆರಂಭಿಸಲ್ಪಟ್ಟವು. ಇವು ಕೇವಲ ಬ್ಯಾಂಕಿಂಗ್ ವ್ಯವಹಾರ ಅಲ್ಲದೇ ವ್ಯಾಪಾರ, ವಾಣಿಜ್ಯಕ ವ್ಯವಹಾರಗಳನ್ನು ನಡೆಸುತ್ತಿದ್ದವು. ಹಳೇ ಮೈಸೂರಿನ ಅತ್ಯಂತ ಹಳೇಯ ಬ್ಯಾಂಕುಗಳಲ್ಲಿ ಏಳು ಸುತ್ತಿನ ಕಲ್ಲಿನಕೋಟೆಯ ಐತಿಹಾಸಿಕ ನಗರ ಚಿತ್ರದುರ್ಗದಲ್ಲಿ ೧೮೭೦ರಲ್ಲಿ ಚನ್ನಗಿರಿ ರಾಘವೇಂದ್ರ ರಾವ್ ಅವರಿಂದ ಆರಂಭಗೊಂಡ ಚಿತ್ರದುರ್ಗ ಸೇವಿಂಗ್ಸ್ ಬ್ಯಾಂಕ್ ಉಲ್ಲೇಖನೀಯ. ಇದು ಸುಮಾರು ೯೬ ವರ್ಷಗಳ ಸುದೀರ್ಘ ಸೇವೆಯ ನಂತರ ೧೯೬೬ರಲ್ಲಿ ಕರ್ನಾಟಕ ಬ್ಯಾಂಕಿನೊಂದಿಗೆ ವಿಲೀನವಾಯಿತು.

ಮೈಸೂರು ಸಂಸ್ಥಾನದಲ್ಲಿ ಆರಂಭಗೊಂಡ ಕೂಡು ಬಂಡವಾಳ ಸಂಸ್ಥೆಗಳಲ್ಲಿ (Joint Stock Company) ಬೆಂಗಳೂರಿನಿಂದ ಮೂಡಿ ಬಂದ ಬೆಂಗಳೂರು ಬ್ಯಾಂಕ್ ಮತ್ತು ಮೈಸೂರು ಬ್ಯಾಂಕ್ ಕಾರ್ಪೋರೇಷನ್ ಎಂಬ ಎರಡು ಹಣಕಾಸು ಸಂಸ್ಥೆಗಳನ್ನು ೧೮೬೮ರಲ್ಲಿ ನೊಂದಾಯಿಸಲಾಯಿತು. ಈ ಹಣಕಾಸು ಸಂಸ್ಥೆಗಳು ಕ್ರಮವಾಗಿ ರೂ. ಏಳು ಲಕ್ಷ ಮತ್ತು ರೂ. ಎರಡು ಲಕ್ಷ ಷೇರುಬಂಡವಾಳವನ್ನು ಹೊಂದಿದ್ದವು. ಈ ಮೊದಲೇ ಸೂಚಿಸಿದಂತೆ ಬೆಂಗಳೂರು ನಗರ ಮತ್ತು ದಂಡುಪ್ರದೇಶ ಅಭಿವೃದ್ಧಿಗೆ ಪೂರಕವಾದ ಉತ್ತಮ ಮೂಲ ಸೌಕರ್ಯಗಳನ್ನು ಮತ್ತು ಸಾಮರ್ಥ್ಯವನ್ನು ಹೊಂದಿದ್ದರಿಂದ, ಈ ಎರಡೂ ಪ್ರದೇಶಗಳಲ್ಲಿ, ಸಂಘಟಿತ ಮತ್ತು ಅಸಂಘಟಿತ ವಲಯದ ಬ್ಯಾಂಕಿಂಗ್ ಮತ್ತು ಇತರೇ ವ್ಯಾಪಾರಿ ವಾಣಿಜ್ಯ ಸಂಸ್ಥೆಗಳು ಬಹುವ್ಯಾಪಕ ಪ್ರಮಾಣದಲ್ಲಿ ಬಂದು ನೆಲೆಸಲು ಸಹಾಯಕವಾಯಿತು. ಅದಕ್ಕೆ ಪೂರಕವಾಗಿ ಎರಡೂ ಪ್ರದೇಶಗಳಲ್ಲಿ ಜನಸಂಖ್ಯೆಯ ಹೆಚ್ಚಳವಾಯಿತು. ವಿಶೇಷವಾಗಿ ದಂಡುಪ್ರದೇಶದಲ್ಲಿ ಹೊರರಾಜ್ಯಗಳ ವಲಸಿಗರು ಬಂದು ಇಲ್ಲಿ ದೊಡ್ಡ ಪ್ರಮಾಣದಲ್ಲಿ ನೆಲೆಸಲು ಸ್ಥಳೀಯ ವಾತಾವರಣ ಪೂರಕವಾಗಿತ್ತು.

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ೧೮೬೮ ಮತ್ತು ೧೮೭೬ರ ಅವಧಿಯಲ್ಲಿ ಸುಮಾರು ೨೪ ವಿವಿಧ ಗಾತ್ರದ ವೈವಿದ್ಯಮಯ ಹೆಸರಿನ ಬ್ಯಾಂಕುಗಳು ಕಾರ್ಯ ನಿರ್ವಹಿಸುತ್ತಿದ್ದ ವಿಷಯ ದಾಖಲೆಗಳಿಂದ ತಿಳಿದುಬರುವುದು. ಮುಂದಿನ ಆರು ದಶಕಗಳಲ್ಲಿ ಅಂದರೆ ೧೮೯೦-೧೯೪೭ರ ಸ್ವಾತಂತ್ರ್ಯ ಪೂರ್ವದ ಅವಧಿಯಲ್ಲಿ ಸುಮಾರು ೧೨ ಬ್ಯಾಂಕಿಂಗ್ ಕಂಪನಿಗಳು ಆರಂಭಗೊಂಡರೂ ಎಲ್ಲವೂ ಬದುಕಿ ಉಳಿಯಲಿಲ್ಲ.

ಬೆಂಗಳೂರು ಮೂಲದ ಬ್ಯಾಂಕುಗಳಲ್ಲಿ ೧೮೯೦ರಲ್ಲಿ ಆರಂಭಗೊಂಡ ಬೆಂಗಳೂರು ಯುನಿಯನ್ ಬ್ಯಾಂಕ್ ಅತೀ ಹೆಚ್ಚಿನ ಅವಧಿಯ ಅಂದರೆ ೫೦ ವರ್ಷಗಳ ಸುದೀರ್ಘ ಸೇವೆಯ ನಂತರ ೧೯೪೦ರಲ್ಲಿ ಸಮಾಪನಗೊಂಡಿತು (Liquidated), ೧೯೨೬ರಲ್ಲಿ ಆರಂಭಗೊಂಡ ದೇವಾಂಗ ಬ್ಯಾಂಕ್, ೧೯೬೩ರಲ್ಲಿ ವಿಜಯಾ ಬ್ಯಾಂಕಿನೊಂದಿಗೆ ವಿಲೀನವಾಯಿತು. ೧೯೧೩ರಲ್ಲಿ ಮೈಸೂರು ಕಂಪನಿ ಕಾನೂನು ೧೮೯೫ ರನ್ವಯ ಸರ್ ಎಂ.ವಿಶ್ವೇಶ್ವರಯ್ಯನವರ ಮಾರ್ಗದರ್ಶನ ಮತ್ತು ಮುಂದಾಳತ್ವದಲ್ಲಿ ಆರಂಭಗೊಂಡ ಮೈಸೂರು ಬ್ಯಾಂಕ್ ಮತ್ತು ೧೯೩೦ರಲ್ಲಿ ಆರಂಭಗೊಂಡ ವೈಶ್ಯ ಬ್ಯಾಂಕುಗಳು ಇಂದಿಗೂ ಅಸ್ತಿತ್ವದಲ್ಲಿ ಇರುವವು. ನಂತರದ ದಿನಗಳಲ್ಲಿ ಮೈಸೂರು ಬ್ಯಾಂಕ್ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಎಂದು ಪುನರ್ ನಾಮಕರಣಗೊಂಡು (೧೯೬೬), ಭಾರತೀಯ ಸ್ಟೇಟ್ ಬ್ಯಾಂಕಿನ ಸಹವರ್ತಿ ಬ್ಯಾಂಕಾಗಿ ಕಾರ್ಯನಿರ್ವಹಿಸುತ್ತಿದೆ. ಅಂದಿನ ಮೈಸೂರು ಸರ್ಕಾರ ಈ ಬ್ಯಾಂಕಿಲ್ಲಿ ಬಂಡವಾಳದ ಪಾಲುಗಾರಿಕೆ ಹೊಂದಿದ್ದು, ಅಲ್ಲದೆ ಠೇವಣಿಯಲ್ಲಿ ಹಣ ಹೂಡಿತ್ತು ಮತ್ತು ಆರಂಭದ ವರ್ಷಗಳಲ್ಲಿ ಭಾಗಶಃ ನಿರ್ವಹಣಾ ವೆಚ್ಚ ಭರಿಸುತ್ತಿತ್ತು. ಸರ್ ಕೆ.ಪಿ. ಪುಟ್ಟಣ್ಣ ಚೆಟ್ಟಿಯವರು ಇದರ ಪ್ರಥಮ ಅಧ್ಯಕ್ಷರಾಗಿದ್ದರು.

ಹಳೆಯ ಮುಂಬಯಿ ಕರ್ನಾಟಕ ಪ್ರದೇಶದ ಭಾಗಗಳಲ್ಲಿ ಸ್ಥಳೀಯವಾಗಿ ಪಟ್ಟಣ ಸಹಕಾರ ಬ್ಯಾಂಕುಗಳು ವ್ಯಾಪಕವಾಗಿದ್ದು, ಹೆಚ್ಚು ಪ್ರಭಾವಶಾಲಿಯಾಗಿದ್ದರಿಂದ ಸ್ಥಳೀಯ ವರ್ತಕರಿಂದ ವಾಣಿಜ್ಯ ಬ್ಯಾಂಕುಗಳನ್ನು ಆರಂಭಿಸುವ ಪ್ರಯತ್ನಗಳು ವಿರಳವಾಗಿ ಮತ್ತು ಸೀಮಿತವಾಗಿ ನಡೆದವು. ಈ ಭಾಗದಲ್ಲಿ ಆರಂಭಗೊಂಡ ಆರಂಭಿಕ ಪ್ರಯತ್ನಗಳೆಂದರೆ 'ಯೂನಿಯನ್ ಬ್ಯಾಂಕ್ ಆಫ್ ಬಿಜಾಪುರ ಮತ್ತು ಸೊಲ್ಲಾಪುರ' (೧೯೦೮), 'ಬಾಗಲಕೋಟ್

ಕಮರ್ಷಿಯಲ್ ಬ್ಯಾಂಕ್' (೧೯೨೨), 'ಶ್ರೀ ಲಕ್ಷ್ಮೀ ಬ್ಯಾಂಕ್, ಹಾನಗಲ್ಲ' (೧೯೨೯), (ಇಂದಿನ ಹಾವೇರಿ ಜಿಲ್ಲೆ), 'ಹುಬ್ಬಿ (ಹುಬ್ಬಳ್ಳಿ) ಸಿಟಿ ಬ್ಯಾಂಕ್' (೧೯೩೦), 'ಬೆಳಗಾಂ ಬ್ಯಾಂಕ್ ಆಫ್ ಬೆಳಗಾಂವ್' (೧೯೩೦) ಮತ್ತು 'ಬ್ಯಾಂಕ್ ಆಫ್ ಸಿಟಿಜನ್ಸ್ ಬೆಳಗಾಂವ್' (೧೯೩೯). ಉತ್ತರ ಕನ್ನಡ ಜಿಲ್ಲೆಯಲ್ಲಿ ಆರಂಭಗೊಂಡ ಹಳೆಯ (ಪ್ರಥಮ) ವಾಣಿಜ್ಯ ಬ್ಯಾಂಕುಗಳಲ್ಲಿ ಕಡಲ ತೀರದ ಕಾರವಾರದಲ್ಲಿ ೧೯೪೦ರಲ್ಲಿ ಆರಂಭಗೊಂಡ 'ಬ್ಯಾಂಕ್ ಆಫ್ ರೂರಲ್ ಇಂಡಿಯಾ' ಒಂದಾಗಿತ್ತು. ಮಂಗಳೂರು ಮತ್ತು ಮುಂಬಯಿ ಮೂಲದ ಪ್ರಮುಖ ವಾಣಿಜ್ಯ ಬ್ಯಾಂಕುಗಳೆಂದರೆ ವಿಶೇಷವಾಗಿ ಕೆನರಾ, ಸಿಂಡಿಕೇಟ್, ಕಾರ್ಪೋರೇಷನ್, ಯೂನಿಯನ್ ಬ್ಯಾಂಕ್, ಎಸ್.ಬಿ.ಐ. ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಮುಂತಾದವು ೧೯೩೦-೧೯೪೦ರ ಅವಧಿಯಲ್ಲಿ ಬೊಂಬಾಯಿ ಕರ್ನಾಟಕದ ಪ್ರಮುಖ ವಾಣಿಜ್ಯ ಕೇಂದ್ರಗಳಲ್ಲಿ ತಮ್ಮ ಬ್ಯಾಂಕು ಶಾಖೆಗಳನ್ನು ಆರಂಭಿಸಿದ್ದವು. ಇನ್ನು ಹಿಂದಿನ ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ, ಹೈದರಾಬಾದ (ನೈಜಾಮ್) ಸರ್ಕಾರದ ಒಡೆತನದ ಹೈದರಾಬಾದ ಬ್ಯಾಂಕ್ ೧೯೪೧ರಲ್ಲಿ ಆರಂಭವಾಗುವವರೆಗೆ ಸ್ಥಳೀಯವಾಗಿ ಬ್ಯಾಂಕುಗಳನ್ನು ಪ್ರಾಯೋಜಿಸುವ ಯಾವುದೇ ಗಮನಾರ್ಹ ಪ್ರಯತ್ನಗಳು ನಡೆಯಲಿಲ್ಲ. ಆದಾಗ್ಯೂ ಕಲಬುರಗಿ ಜಿಲ್ಲೆಯಲ್ಲಿ 'ಸರಸ್ವತಿ ಬ್ಯಾಂಕ್' (೧೯೨೨), 'ಗುಲಬರ್ಗಾ ಬ್ಯಾಂಕಿಂಗ್ ಕಂಪನಿ' (೧೯೩೦), 'ಕಮರ್ಷಿಯಲ್‌ಬ್ಯಾಂಕಿಂಗ್ ಕಂಪನಿ ಯಾದಗಿರಿ' (೧೯೩೮), ಮುಂತಾದ ವಾಣಿಜ್ಯ ಬ್ಯಾಂಕಿಂಗ್ ಸಂಸ್ಥೆಗಳು ಆರಂಭಗೊಂಡವು. ರಾಯಚೂರು ಜಿಲ್ಲೆಯಲ್ಲಿ 'ಶ್ರೀ ಶಾರದಾ ಬ್ಯಾಂಕಿಂಗ್ ಕಂ' (೧೯೩೭) ಮತ್ತು 'ಉಸ್ಮಾನಿಯ ಅಜೀಜ್ ಬ್ಯಾಂಕ್' (೧೯೩೩)ಗಳು ಆರಂಭಗೊಂಡರೆ ಬೀದರ್ ಜಿಲ್ಲೆಯಲ್ಲಿ ೧೯೪೬ರವರೆಗೆ ಯಾವುದೇ ವಾಣಿಜ್ಯ ಬ್ಯಾಂಕುಗಳು ಇರಲಿಲ್ಲವೆಂದು ತಿಳಿದುಬರುತ್ತದೆ. ಇನ್ನು ಹಳೆಯ ಮದ್ರಾಸ್ ಪ್ರಾಂತ್ಯಕ್ಕೆ ಒಳಪಟ್ಟ ಪ್ರದೇಶಗಳಾಗಿದ್ದ ಇಂದಿನ ದಕ್ಷಿಣ ಕನ್ನಡ, ಉಡುಪಿ, ಕೊಡಗು, ಬಳ್ಳಾರಿ ಜಿಲ್ಲೆಗಳು ಮತ್ತು ಇಂದಿನ ಚಾಮರಾಜನಗರ ಜಿಲ್ಲೆಯ ಭಾಗವಾಗಿರುವ ಕೊಳ್ಳೇಗಾಲ ತಾಲೂಕು ಪ್ರದೇಶದಲ್ಲಿ ಪೂರ್ಣಪ್ರಮಾಣದ ವಾಣಿಜ್ಯ ಬ್ಯಾಂಕುಗಳು ವ್ಯಾಪಿಸಿದ್ದು ಕಾರ್ಯ ನಿರ್ವಹಿಸುತ್ತಿದ್ದವು.

### ಬ್ಯಾಂಕಿಂಗ್ ಉದ್ಯಮದ ಅಭಿವೃದ್ಧಿ

ದೇಶದ ಬ್ಯಾಂಕಿಂಗ್ ಉದ್ಯಮದ ಬೆಳವಣಿಗೆಯಲ್ಲಿ ಕಂಡು ಬರುತ್ತಿರುವ ತೀವ್ರತರವೂ ಗಮನಾರ್ಹವೂ ಆದ ಬದಲಾವಣೆಗಳನ್ನು ವಿಶೇಷವಾಗಿ ರಾಷ್ಟ್ರೀಕರಣ ನಂತರದ (೧೯೬೯ ಮತ್ತು ೧೯೮೦) ವರ್ಷಗಳಲ್ಲಿ ಗಮನಿಸಬಹುದು. ರಾಷ್ಟ್ರೀಕರಣಗೊಂಡ ದೇಶದ ೨೦ ಪ್ರಮುಖ ಬ್ಯಾಂಕುಗಳ ಪೈಕಿ ನಾಲ್ಕು ಸಂಸ್ಥೆಗಳು ಕರ್ನಾಟಕ ಕರಾವಳಿಯ ಮೂಲದವು. ಅವುಗಳಲ್ಲಿ ೧೯೬೯ರಲ್ಲಿ ರಾಷ್ಟ್ರೀಕರಣಗೊಂಡ ಕೆನರಾ ಬ್ಯಾಂಕ್ (೧೯೦೬), ಹಾಗೂ ಸಿಂಡಿಕೇಟ್ ಬ್ಯಾಂಕ್ (೧೯೨೫), ೧೯೮೦ರಲ್ಲಿ ರಾಷ್ಟ್ರೀಕರಣಗೊಂಡ ಕಾರ್ಪೋರೇಷನ್ ಬ್ಯಾಂಕ್ (೧೯೦೬), ವಿಜಯ ಬ್ಯಾಂಕ್ (೧೯೩೦), ಇವುಗಳಲ್ಲಿ ಕೆನರಾ ಮತ್ತು ವಿಜಯಾ ಬ್ಯಾಂಕುಗಳು ತಮ್ಮ ಆಡಳಿತ ಕಛೇರಿಗಳನ್ನು ಬೆಂಗಳೂರಿಗೆ ವರ್ಗಾಯಿಸಿದ್ದರೆ ಉಳಿದವುಗಳು ಅಷ್ಟ ಮಠಗಳ ಕೇಂದ್ರ ಉಡುಪಿಯಿಂದ ಕಾರ್ಯ ನಿರ್ವಹಿಸುತ್ತಿರುವವು. ರಾಜ್ಯದ ಖಾಸಗಿ ವಲಯದ ಪ್ರಮುಖ ಬ್ಯಾಂಕುಗಳಲ್ಲಿ ಬೆಂಗಳೂರು ಮೂಲದ ವೈಶ್ಯ ಬ್ಯಾಂಕ್ (೧೯೩೦) INGವೈಶ್ಯ (International Netherlands Group) ಎಂದು ೨೦೦೨ ಬದಲಾವಣೆಗೊಂಡು ನಂತರ ಕೊಟಕ್ ಮಹೇಂದ್ರ (Kotak Mahendra) ಬ್ಯಾಂಕ್‌ನೊಂದಿಗೆ ೨೦೧೬ರಲ್ಲಿ ವಿಲೀನಗೊಂಡಿದೆ. ಮತ್ತು ಮಂಗಳೂರು ಮೂಲದ ಕರ್ನಾಟಕ ಬ್ಯಾಂಕ್ (೧೯೩೦) ಗಮನಾರ್ಹವಾದವು. ಈ ಸಂಸ್ಥೆಗಳ ಶಾಖೆಗಳು ರಾಜ್ಯದ ಹೊರಗೂ ಸಹ ವ್ಯಾಪಿಸಿವೆ. ರಾಜ್ಯದಲ್ಲಿ ವ್ಯಾಪಕವಾಗಿ ವೃದ್ಧಿಸುತ್ತಿರುವ ಬ್ಯಾಂಕಿಂಗ್ ಉದ್ಯಮವನ್ನು ಪರಿಗಣಿಸಿ ಭಾರತೀಯ ರಿಸರ್ವ್ ಬ್ಯಾಂಕ್ ೧೯೫೩ರಲ್ಲಿ ತನ್ನ ಒಂದು ಶಾಖೆಯನ್ನು ಬೆಂಗಳೂರಿನಲ್ಲಿ ಆರಂಭಿಸಿದ್ದು ಮಹತ್ವದ ಬೆಳವಣಿಗೆಯಾಗಿತ್ತು.

ಭಾರತೀಯ ರಿಜರ್ವ್ ಬ್ಯಾಂಕಿನ ಬೆಂಗಳೂರಿನ ಪ್ರಾದೇಶಿಕ ಕಛೇರಿಯಲ್ಲಿ ವರ್ಷ ೨೦೧೬ರಲ್ಲಿ ಒಟ್ಟು ೭೪೭ ವಿವಿಧ ದರ್ಜೆಯ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದು, ಆ ಪೈಕಿ ೩೬೧ (ಒಂದನೆ ದರ್ಜೆ), ೨೦೨ ಮೂರನೇ ದರ್ಜೆ ಮತ್ತು ೧೮೪ ನಾಲ್ಕನೇಯ ದರ್ಜೆಯ ಸಿಬ್ಬಂದಿ ಎಂದು ವರದಿಯಾಗಿದೆ. ರಾಷ್ಟ್ರೀಕರಣದ ಪೂರ್ವದಲ್ಲಿ (೧೯೬೯) ಕೇಂದ್ರ ಸರ್ಕಾರ ಬ್ಯಾಂಕಿಂಗ್ ಉದ್ಯಮಕ್ಕೆ ಸುಭದ್ರತೆ, ಸುಸ್ಥಿರತೆಯನ್ನು ಒದಗಿಸುವ ಉದ್ದೇಶದಿಂದ ಮತ್ತು ಜನಸಾಮಾನ್ಯರಿಗೆ ಉದ್ಯಮದ ಲಾಭಗಳು ನೇರವಾಗಿ ತಲುಪುವ ಉದ್ದೇಶದಿಂದ ೧೯೬೭ರಲ್ಲಿ ಸಾಮಾಜಿಕ ನಿಯಂತ್ರಣ (Social Control) ಕಾಯಿದೆಯನ್ನು ಜಾರಿಯಲ್ಲಿ ತರಲಾಯಿತು. ೧೯೬೦ರ ದಶಕದಲ್ಲಿ ವಾಣಿಜ್ಯ ಬ್ಯಾಂಕುಗಳ ಸಂಯೋಜನೆ ಮತ್ತು ವಿಲೀನ (Amalgamation and Merger) ಪ್ರಕ್ರಿಯೆ ಮೂಲಕ ಅಶಕ್ತ ಮತ್ತು ದುರ್ಬಲ ಬ್ಯಾಂಕಿಂಗ್ ಕಂಪನಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಯಿತು. ೧೯೪೬ರಲ್ಲಿ ರಾಜ್ಯದಲ್ಲಿ ನೊಂದಾಯಿತವಾಗಿದ್ದ ೪೪ ಬ್ಯಾಂಕುಗಳ ಸಂಖ್ಯೆ ೧೯೬೬ರಲ್ಲಿ ೧೦ಕ್ಕೆ ಇಳಿಯಿತು ಮತ್ತು ಅವುಗಳು ಹೊಂದಿದ್ದ ಶಾಖೆಗಳ ಸಂಖ್ಯೆ ೬೧೦ ಆಗಿತ್ತು. ೧೯೫೬ರಲ್ಲಿ ಕರ್ನಾಟಕ ರಾಜ್ಯ ಉದಯಸಿದಾಗ ಆ ವೇಳೆಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಹುಟ್ಟಿದ್ದ ೭೫ ಬ್ಯಾಂಕುಗಳಲ್ಲಿ ಕೇವಲ ೩೮ ಬ್ಯಾಂಕುಗಳು ಉಳಿದಿದ್ದವು. ಈ ಸಂಯೋಜನೆ ಮತ್ತು ವಿಲೀನ ಪ್ರಕ್ರಿಯೆಯಿಂದ ನಾಲ್ಕು ರಾಷ್ಟ್ರೀಯ ಬ್ಯಾಂಕುಗಳು ತಮ್ಮ ಬ್ಯಾಂಕಿಂಗ್ ವ್ಯವಹಾರವನ್ನು ವ್ಯಾಪಕವಾಗಿ ಅಭಿವೃದ್ಧಿಪಡಿಸಿಕೊಂಡವು.

ರಾಷ್ಟ್ರೀಕರಣ ನಂತರದ ದಿನಗಳಲ್ಲಿ ಬ್ಯಾಂಕಿಂಗ್ ಉದ್ಯಮದ ಪರಿಕಲ್ಪನೆಯಲ್ಲಿ, ಕಾರ್ಯವಿಧಾನಗಳಲ್ಲಿ ಗಮನಾರ್ಹ ಬದಲಾವಣೆಗಳಾಗಿರುವುದನ್ನು ಕಾಣಬಹುದು. ಹಿಂದೆ ರಾಷ್ಟ್ರೀಕರಣ ಪೂರ್ವದಲ್ಲಿ ಕೇವಲ ಸೀಮಿತ ವರ್ಗಕ್ಕೆ ಮಾತ್ರ (Class Banking) ಕಾರ್ಯನಿರ್ವಹಿಸುತ್ತಿದ್ದ ಈ ಉದ್ಯಮವಿಂದು ಸಾಮೂಹಿಕ (Mass Banking) ಸಾಮಾಜಿಕ ಬ್ಯಾಂಕಿಂಗ್ (Social Banking) ಉದ್ಯಮವಾಗಿ ಬೆಳೆದು ಕೆಳ ಸ್ತರದಲ್ಲಿ ಸಾಮಾಜಿಕ, ಆರ್ಥಿಕ ಬದಲಾವಣೆಯನ್ನು ತರುವ ಪ್ರಧಾನ ಪ್ರಭಾವಿ ಆರ್ಥಿಕ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತಿರುವುದು ಗಮನಾರ್ಹ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆರ್ಥಿಕ, ಸಾಮಾಜಿಕ, ಕೈಗಾರಿಕಾ ನೀತಿ ನಿರೂಪಣೆಗಳನ್ನು ಆರ್ಥಿಕ ಅಭಿವೃದ್ಧಿ ಯೋಜನೆಗಳನ್ನು ಆದ್ಯತಾನುಸಾರ ಅನುಷ್ಠಾನಗೊಳಿಸುವಲ್ಲಿ ಈ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಸಾಲ ನೀಡಿಕೆಯಲ್ಲಿ ವ್ಯಕ್ತಿಯ ಯೋಗ್ಯತೆಗಿಂತ ಸಾಲದ ಉದ್ದೇಶಕ್ಕೆ ಪ್ರಮುಖ ಆದ್ಯತೆ

ನೀಡುತ್ತಿದ್ದು, ಸಾಲ ನೀಡಿಕೆಯಲ್ಲಿ ವ್ಯಾಪಕ ಬದಲಾವಣೆಗಳನ್ನು ಅಳವಡಿಸಲಾಗುತ್ತಿದೆ. ಆ ಪ್ರಕಾರ ಈಗ ಸಾಲವನ್ನು ನಿಗದಿ ಮಾಡಿದ ಪ್ರಮಾಣದಲ್ಲಿ ಆದ್ಯತಾ ವಲಯಕ್ಕೆ ನೀಡಲಾಗುತ್ತಿದೆ. ಸರ್ಕಾರದ ಅತ್ಯಂತ ಜನಪ್ರಿಯ ಸಾರ್ವಜನಿಕ ಸಾಲ ಯೋಜನೆಯಾಗಿದ್ದ ಸಾಲಮೇಳ (Loan Mela) (೧೯೮೫–೧೯೮೭) ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ರಾಜ್ಯದ ಸರ್ಕಾರಿ ಬ್ಯಾಂಕುಗಳ ಜೊತೆಗೆ ಖಾಸಗಿ ವಲಯ ಮತ್ತು ಸಹಕಾರ ವಲಯದ ಬ್ಯಾಂಕುಗಳೂ ಸಹ ಕಡಿಮೆ ಇಲ್ಲದಂತೆ ಸಾಲ ನೀಡಿಕೆಯಲ್ಲಿ ಸ್ಪಂದಿಸಿವೆ. ಅದರಂತೆ ಗ್ರಾಮೀಣ ಬ್ಯಾಂಕುಗಳನ್ನು ಪ್ರಾಯೋಜಿಸುವಲ್ಲಿಯೂ ಕರ್ನಾಟಕದ ಬ್ಯಾಂಕುಗಳು ರಾಷ್ಟ್ರದಲ್ಲಿಯೇ ಮುನ್ನಡೆ ಸಾಧಿಸಿವೆ.

ಕರ್ನಾಟಕದ ಬ್ಯಾಂಕುಗಳು ಬದಲಾದ ಹೊಸ ಬಗೆಯ ಪ್ರಗತಿದಾಯಕ (Progressive) ಸಾಲ ನೀಡಿಕೆ ಯೋಜನೆಗಳಾದ ಮಾರ್ಗದರ್ಶಿ(ಲೀಡ್) ಬ್ಯಾಂಕ್ ಯೋಜನೆ, ವ್ಯತ್ಯಸ್ತ ಬಡ್ಡಿದರ ಸಾಲ (D.I.R.), ಸಮಗ್ರ ಗ್ರಾಮೀಣ ಅಭಿವೃದ್ಧಿ ಸಾಲ (IRDP), ಅಂತ್ಯೋದಯ, ಗ್ರಾಮಗಳ ದತ್ತು ಸ್ವೀಕಾರ ಯೋಜನೆ, ಸಮಗ್ರ ಅಭಿವೃದ್ಧಿಗೆ ಸಾಲ ಮುಂತಾದ ಹತ್ತು ಹಲವಾರು ಪ್ರಗತಿಪರ ಯೋಜನೆಗಳನ್ನು ರಾಜ್ಯದ ಬ್ಯಾಂಕಿಂಗ್ ವಲಯ ಸಂಪೂರ್ಣವಾಗಿ ಕಾರ್ಯರೂಪಕ್ಕೆ ತಂದಿರುವುದು ಗಮನಾರ್ಹ. ರಾಜ್ಯದ ಅನೇಕ ವಾಣಿಜ್ಯ ಬ್ಯಾಂಕುಗಳು ತಮ್ಮ ಹಿಂದಿನ ಸಾಂಪ್ರದಾಯಕ ಚಟುವಟಿಕೆಗಳನ್ನು 'ಮರ್ಚೆಂಟ್ ಬ್ಯಾಂಕಿಂಗ್' (Merchant Banking)ನತ್ತ ಬದಲಾಯಿಸಿ ಕೊಂಡಿದ್ದು, ಗೃಹಸಾಲ, ಅಡವು ಸಾಲ, ಲೀಸಿಂಗ್ (Leasing) ಮುಂತಾದ ಸೇವೆಗಳನ್ನು ಗ್ರಾಹಕರಿಗೆ ಸ್ಪರ್ಧಾತ್ಮಕವಾಗಿ ಒದಗಿಸುತ್ತಿವೆ.

೧೯೭೬–೭೭ರಲ್ಲಿ ವಿಶೇಷ ತಳಯ ಗ್ರಾಮೀಣ ವಿಕಾಸ ಬ್ಯಾಂಕುಗಳನ್ನು ಆರಂಭ ಮಾಡಿದ್ದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಸುಧಾರಿತ, ವ್ಯಾಪಕ ಮತ್ತು ಪರಿಣಾಮಕಾರಿ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುವಲ್ಲಿ ಸಹಕಾರಿಯಾಗಿದೆ. ಇಂದು ಗ್ರಾಮೀಣ ಪ್ರದೇಶಗಳು ಮೊದಲಿಗಿಂತಲೂ ಹೆಚ್ಚು ವ್ಯಾಪಕ ಬ್ಯಾಂಕಿಂಗ್ ಸೇವಾ ಸೌಲಭ್ಯಗಳನ್ನು ಹೊಂದಿದ್ದು, ರಾಜ್ಯದ ಎಲ್ಲಾ ಜಿಲ್ಲೆಗಳು ಗ್ರಾಮೀಣ ಬ್ಯಾಂಕುಗಳನ್ನು ಹೊಂದಿದ್ದು, ಗ್ರಾಮ ಮತ್ತು ನಗರ ಪ್ರದೇಶದ ಆರ್ಥಿಕ ಅಸಮತೋಲನವನ್ನು ತಕ್ಕಮಟ್ಟಿಗೆ ಕಡಿಮೆ ಮಾಡುವಲ್ಲಿ ಈ ಹೊಸ ತಳಯ ಆರ್ಥಿಕ ಸಂಸ್ಥೆಗಳು ಸಹಾಯಕವಾಗಿವೆ.

ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಇತರೇ ಬ್ಯಾಂಕುಗಳು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳನ್ನು ಒಳಗೊಂಡಂತೆ ಅನೇಕ ರಾಷ್ಟ್ರೀಯ ಮತ್ತು ರಾಜ್ಯ ಸರ್ಕಾರದ ಜನಪ್ರಿಯ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿವೆ. ವಿಶೇಷವಾಗಿ ಹಿಂದುಳಿದ ಸಮುದಾಯಗಳಿಗೆ, ವರ್ಗಗಳಿಗೆ, ರಿಯಾಯಿತಿ ದರದಲ್ಲಿ ವಿವಿಧ ಬಡತನ ನಿವಾರಣಾ ಯೋಜನೆ, ಸ್ವಯಂ ಉದ್ಯೋಗ, ಸ್ವಾವಲಂಬಿ ಯೋಜನೆ, ಮಹಿಳೆಯರ ಆರ್ಥಿಕ ಸಬಲೀಕರಣ, ಸಣ್ಣ, ಅತಿಸಣ್ಣ ಉದ್ಯೋಗಗಳಿಗೆ ಆರ್ಥಿಕ ನೆರವು ಯೋಜನೆ ರೂಪಿಸಿಕೊಂಡಿವೆ. ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಹಮ್ಮಿಕೊಂಡಿರುವ ವಿವಿಧ ಜನಪರ ಯೋಜನೆಗಳಾದ ಪ್ರಧಾನ ಮಂತ್ರಿ ಫಸಲು ವಿಮಾ ಯೋಜನೆ, ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಭರವಸೆ ಯೋಜನೆ (MGNREGA), ಪ್ರಧಾನಮಂತ್ರಿ ಜನಧನ ಯೋಜನೆ, ಮುದ್ರಾ ಯೋಜನೆ, ವಿವಿಧ ಗೃಹ ನಿರ್ಮಾಣ ಯೋಜನೆ, ಯುವ ಸಬಲೀಕರಣ, ಸ್ವಸಹಾಯ ಗುಂಪುಗಳಿಗೆ ಆರ್ಥಿಕ ನೆರವು, ಸ್ವಯಂ ಉದ್ಯೋಗ ಯೋಜನೆ, ರೈತರ ಸುರಕ್ಷಾ ಯೋಜನೆ, ಮುಂತಾದ ಹತ್ತು ಹಲವಾರು ಯೋಜನೆಗಳನ್ನು ಕಾರ್ಯರೂಪದಲ್ಲಿ ತರುವಲ್ಲಿ ಬ್ಯಾಂಕುಗಳು ಸಕ್ರೀಯ ಪಾತ್ರವನ್ನು ವಹಿಸುತ್ತಿವೆ. ವಿವಿಧ ಯೋಜನೆಯ ಫಲಾನುಭವಿಗಳಿಗೆ ಬ್ಯಾಂಕುಗಳ ಮೂಲಕವೇ ಸಹಾಯಧನ ವಿತರಣೆಯಾಗುತ್ತಿದ್ದು, ಫಲಾನುಭವಿಗಳು ಬ್ಯಾಂಕು ಖಾತೆಗಳನ್ನು ಹೊಂದುವುದು ಮತ್ತು ಆಧಾರ್ ಕಾರ್ಡ್ ಹೊಂದಿರುವುದನ್ನು ಕಡ್ಡಾಯ ಮಾಡಲಾಗಿದೆ.

ರಾಜ್ಯದಲ್ಲಿ ಇದ್ದ ಒಟ್ಟು ಬ್ಯಾಂಕ್ ಶಾಖೆಗಳ ಪೈಕಿ ಜೂನ್ ೧೯೬೯ರಲ್ಲಿ ಗ್ರಾಮೀಣ ಶಾಖೆಗಳ ಪ್ರಮಾಣ ಶೇ.೨೫ ಇದ್ದುದು ಮಾರ್ಚ್ ೧೯೮೯ರ ಕೊನೆಯಲ್ಲಿ ಶೇ.೫೫ಕ್ಕೆ ಹೆಚ್ಚಳಗೊಂಡಿತ್ತು. ಇದು ಮುಖ್ಯವಾಗಿ ರಾಜ್ಯಾದ್ಯಂತ ವ್ಯಾಪಿಸಿದ ಗ್ರಾಮೀಣ ಬ್ಯಾಂಕುಗಳಿಂದಾಗಿ ಸಾಧ್ಯವಾಗಿತ್ತು. ೧೯೯೦ರಲ್ಲಿ ರಾಜ್ಯದಲ್ಲಿ ಪ್ರತಿ ಒಂದು ಲಕ್ಷ ಜನಸಂಖ್ಯೆಗೆ ಸರಾಸರಿ ೯.೫ ಪ್ರಮಾಣದಲ್ಲಿ ಬ್ಯಾಂಕು ಶಾಖೆಗಳ ಸಂಖ್ಯೆ ಇದ್ದರೆ ರಾಷ್ಟ್ರಮಟ್ಟದಲ್ಲಿ ಈ ಪ್ರಮಾಣ ಸರಾಸರಿ ೭.೧ ಆಗಿತ್ತು. ಈ ಮಾನಕದಲ್ಲಿ ರಾಜ್ಯವು ದೇಶದಲ್ಲಿ ನಾಲ್ಕನೆಯ ಸ್ಥಾನವನ್ನು ಪಡೆದಿತ್ತು. ಕರ್ನಾಟಕವನ್ನು ಒಳಗೊಂಡಂತೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಿದ್ದ ರಾಜ್ಯಗಳ ಮಾಲಿಕೆಯಲ್ಲಿ ಗುಜರಾತ್, ಹರಿಯಾಣ, ಮಹಾರಾಷ್ಟ್ರ, ಪಂಜಾಬ ಮತ್ತು ಪಶ್ಚಿಮ ಬಂಗಾಳ ರಾಜ್ಯವನ್ನು ಸೇರಿಸ ಬಹುದಾಗಿದೆ. ಈ ಮಾಲಿಕೆಯಲ್ಲಿ ಕರ್ನಾಟಕ ಎರಡನೇ ಸ್ಥಾನವನ್ನು ಹೊಂದಿತ್ತು. ಬ್ಯಾಂಕಿಂಗ್ ವಲಯದಲ್ಲಿ ಇತರೇ ಅಭಿವೃದ್ಧಿ ಹೊಂದಿದ ರಾಜ್ಯಗಳ ಪೈಕಿ ಕರ್ನಾಟಕದಲ್ಲಿ ಇರುವ ಗ್ರಾಮೀಣ ಬ್ಯಾಂಕುಗಳ ವಿಸ್ತರಣಾ ಪ್ರಮಾಣ ಉತ್ತಮವಾಗಿತ್ತು. ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಪ್ರತಿ ಒಂದು ಲಕ್ಷ ಜನಸಂಖ್ಯೆಗೆ ಸರಾಸರಿ ಎಂಟು ಗ್ರಾಮೀಣ ಬ್ಯಾಂಕು ಶಾಖೆಗಳು ಸೇವೆ ಸಲ್ಲಿಸುತ್ತಿದ್ದರೆ, ಪಂಜಾಬ್‌ನಲ್ಲಿ ಈ ಪ್ರಮಾಣವು ಸರಾಸರಿ ೯ ಎಂದು ತಿಳಿದುಬರುವುದು.

ಕರ್ನಾಟಕದಲ್ಲಿ ಠೇವಣಿ ಮತ್ತು ಸಾಲ ನೀಡಿಕೆ ಅನುಪಾತ ಪ್ರಮಾಣ (C.D. Ratio) ರಾಷ್ಟ್ರಮಟ್ಟದಲ್ಲಿಯೇ ಅತಿ ಹೆಚ್ಚಾಗಿದ್ದು ಇದು ಜೂನ್ ೧೯೯೦ರಲ್ಲಿ ಶೇ.೧೦೭.೪ ಆಗಿದ್ದರೆ, ರಾಷ್ಟ್ರದಲ್ಲಿ ಅದರ ಅನುಪಾತ ಪ್ರಮಾಣ ಶೇ.೬೫.೨ ಆಗಿತ್ತು. ಕರ್ನಾಟಕದ ಅರೆನಗರ ಪ್ರದೇಶಗಳಲ್ಲಿ ಸಹ ಈ ಪ್ರಮಾಣ ಅತೀ ಹೆಚ್ಚಾಗಿದ್ದು (ಶೇ.೭೬.೯) ಭಾರತದಲ್ಲಿ ಈ ಪ್ರಮಾಣ ಶೇ.೫೦.೫ ಆಗಿತ್ತು ಎಂದು ವರದಿಯಾಗಿದೆ. ಕರ್ನಾಟಕದಲ್ಲಿ ವಾಣಿಜ್ಯ ಬ್ಯಾಂಕುಗಳು ನೀಡಿದ ಒಟ್ಟು ಸಾಲದಲ್ಲಿ ಆದ್ಯತಾವಲಯ ಮತ್ತು ದುರ್ಬಲ ವರ್ಗಗಳಿಗೆ ನೀಡಿದ ಸಾಲದ ಪ್ರಮಾಣ ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿ ಪಡಿಸಿದ ಪ್ರಮಾಣ ಶೇ.೪೦ಕ್ಕಿಂತ ಅಧಿಕವಾಗಿತ್ತು. ೧೯೯೧ರಲ್ಲಿ ರಾಜ್ಯದ ಬ್ಯಾಂಕುಗಳು ನೀಡಿದ ಆದ್ಯತಾವಲಯದ ಸಾಲ (ರೂ.೩,೪೮೭ ಕೋಟಿ) ಶೇ.೪೫ ಆಗಿತ್ತು. ರಾಷ್ಟ್ರದಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಪ್ರಮುಖ ರಾಜ್ಯಗಳ ಪೈಕಿ, ಸರಾಸರಿ ಠೇವಣಿ ಸಂಗ್ರಹಣೆಯಲ್ಲಿ ಕರ್ನಾಟಕ ಎಂಟನೇ ಸ್ಥಾನದಲ್ಲಿ (ರೂ.೨೩೬೨) ಇದ್ದರೆ, ಸರಾಸರಿ ಸಾಲ ವಿತರಣೆಯಲ್ಲಿ ರೂ.೧೮೪೪ ಇದ್ದು, ಇದು ರಾಷ್ಟ್ರದ ಸರಾಸರಿ ಪ್ರಮಾಣ ರೂ.೧೫೭೦ಕ್ಕಿಂತ ಅಧಿಕವಾಗಿತ್ತು. ಆದರೆ ಇದು ಮಹಾರಾಷ್ಟ್ರ (ರೂ.೩೮೦೧), ಪಂಜಾಬ್ (ರೂ.೨,೨೦೧), ತಮಿಳುನಾಡು (ರೂ.೨,೪೩೮)ಗಿಂತ

ಕಡಿಮೆ ಇತ್ತು ಎಂದು ವರದಿಯಾಗಿತ್ತು. ಆದರೂ, ರಾಜ್ಯದಲ್ಲಿ ಸಾಲ ವಿತರಣೆ ಪ್ರಮಾಣ ರಾಷ್ಟ್ರಕ್ಕೆ ಹೋಲಿಸಿದರೆ ಉತ್ತಮವಾಗಿತ್ತು. [ಈ ವಿಷಯಕ್ಕೆ ಸಂಬಂಧಪಟ್ಟಂತೆ ಇತ್ತೀಚಿನ ಅಂಕಿ ಅಂಶಗಳನ್ನು ಅಧ್ಯಾಯದ ಅನುಬಂಧ ೧, ೨ ಮತ್ತು ೩ರಲ್ಲಿ ಹಾಗೂ ವಿವಿಧ ಕೋಷ್ಟಕಗಳಲ್ಲಿ ನೋಡಬಹುದು.]

ರಾಜ್ಯದ ಬ್ಯಾಂಕಿಂಗ್ ವಲಯಕ್ಕೆ ಸಂಬಂಧಪಟ್ಟಂತೆ ೧೯೯೨ ಮಾರ್ಚ್‌ನಲ್ಲಿ ಇದ್ದಂತೆ ಕೆಲವು ಪ್ರಮುಖ ಸೂಚ್ಯಂಕಗಳು:- ಠೇವಣಿ ಸಾಲಾನುಪಾತ ಶೇ.೭೭.೨, ವ್ಯತ್ಯಸ್ಥ ಬಡ್ಡಿದರದ ಸಾಲ ರೂ.೭೧೬೭.೩ ಲಕ್ಷ, ೨೦ ಅಂಶ ಆರ್ಥಿಕ ಕಾರ್ಯಕ್ರಮದ ಅಡಿ ನೀಡಲಾದ ಸಾಲ ರೂ.೧,೨೧,೫೧೩ ಲಕ್ಷ, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಸಾಲ (IRDP) ರೂ.೨೬,೧೭೪ ಲಕ್ಷ, ಆದ್ಯತಾವಲಯ ಸಾಲ ರೂ.೩,೪,೦೦೫ ಲಕ್ಷ, ಒಟ್ಟು ಸಾಲದಲ್ಲಿ ಆದ್ಯತಾ ವಲಯದ ಸಾಲದ ಅನುಪಾತ ಶೇ.೪೨, ಶಾಖಾವಾರು ಸರಾಸರಿ ಠೇವಣಿ ರೂ.೨೫೧.೭೫ ಲಕ್ಷ, ಮುಂಗಡ ರೂ.೧೯೪.೨೪ ಲಕ್ಷ; ಗ್ರಾಮೀಣ ಠೇವಣಿ ಮತ್ತು ಮುಂಗಡಗಳು ಅನುಕ್ರಮವಾಗಿ ರೂ.೧,೫೭,೩೧೮ ಲಕ್ಷ ಮತ್ತು ರೂ.೧,೨೪,೭೪೨ ಲಕ್ಷ ಎಂದು ತಿಳಿದುಬರುವುದು.

### ವ್ಯಾಪಕ ಬ್ಯಾಂಕಿಂಗ್ ಶಾಖಾ ಜಾಲ (Banking Network)

ದೇಶದ ಇತರೇ ರಾಜ್ಯಗಳಿಗೆ ಹೋಲಿಸಿದಲ್ಲಿ ಕರ್ನಾಟಕದಲ್ಲಿ ಉತ್ತಮವಾದ ಮತ್ತು ವ್ಯಾಪಕವಾದ ಬ್ಯಾಂಕುಗಳ ಶಾಖಾ ಜಾಲವನ್ನು ಕಾಣಬಹುದು. ರಾಷ್ಟ್ರೀಕೃತ ೨೦ ಬ್ಯಾಂಕುಗಳಲ್ಲದೇ ಭಾರತೀಯ ಸ್ಟೇಟ್ ಬ್ಯಾಂಕ್ (SBI) ಮತ್ತು ಅದರ ಏಳು ಸಹವರ್ತಿ ಬ್ಯಾಂಕ್‌ಗಳು (Associate Banks-ಇವುಗಳ ಪೈಕಿ ಸ್ಟೇಟ್ ಬ್ಯಾಂಕ್ ಆಫ್ ಸೌರಾಷ್ಟ್ರ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂದೋರ್ ಈ ಎರಡು ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿ ವಿಲೀನಗೊಂಡಿರುತ್ತವೆ.) ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಅದೂ ಅಲ್ಲದೇ ರಾಜ್ಯದಲ್ಲಿ ೨೫ ಖಾಸಗಿ ವಲಯದ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳೂ ಕಾರ್ಯ ನಿರ್ವಹಿಸುತ್ತಿವೆ. ೧೯೬೯ರಲ್ಲಿ ಬ್ಯಾಂಕುಗಳು ರಾಷ್ಟ್ರೀಕರಣವಾದಾಗ ರಾಜ್ಯದಲ್ಲಿ ೭೫೫ ಬ್ಯಾಂಕ್ ಶಾಖೆಗಳಿದ್ದವು. ಅಲ್ಲಿಂದೀಚೆಗೆ ಬ್ಯಾಂಕ್ ಜಾಲ ವಿಸ್ತರಣೆಗೊಂಡು ೨೦೧೧ ಮಾರ್ಚ್ ಅಂತ್ಯದ ವೇಳೆಗೆ ಗ್ರಾಮೀಣ ಪ್ರದೇಶದಲ್ಲಿ ೨೮೦೬, ಅರೆಪಟ್ಟಣ ಪ್ರದೇಶದಲ್ಲಿ ೧೪೯೫, ಪಟ್ಟಣ ಪ್ರದೇಶದಲ್ಲಿ ೧೫೪೯ ಹಾಗೂ ಮೆಟ್ರೋಸಿಟಿ ಪ್ರದೇಶದಲ್ಲಿ ೧೪೧೮ ಶಾಖೆಗಳಿದ್ದು ಒಟ್ಟು ೭೨೬೮ ಬ್ಯಾಂಕ್ ಶಾಖೆಗಳಿದ್ದವು (ಸಹಕಾರಿ ಬ್ಯಾಂಕ್ ಶಾಖೆಗಳನ್ನೂ ಒಳಗೊಂಡಿವೆ.)

೨೦೧೧ರ ಮಾರ್ಚ್ ಕೊನೆಯಲ್ಲಿ ರಾಜ್ಯದಲ್ಲಿ ಸರಾಸರಿ ೮,೫೦೦ ಜನಸಂಖ್ಯೆಗೆ ಒಂದರಂತೆ ಬ್ಯಾಂಕ್ ಶಾಖೆಯು ಸೇವೆ ಸಲ್ಲಿಸುತ್ತಿತ್ತು. ಇದು ರಾಷ್ಟ್ರೀಯ ಸರಾಸರಿ ೧೪೦೦೦ಕ್ಕಿಂತ ಗಣನೀಯವಾಗಿ ಉತ್ತಮವಾಗಿತ್ತು. ಶಾಖಾವಾರು ಜನಸಂಖ್ಯೆಯ ವಿಚಾರದಲ್ಲಿ ತಲಾ ೮,೦೦೦ದಷ್ಟಿರುವ ಕೇರಳ, ಪಂಜಾಬ್ ಮತ್ತು ದೆಹಲಿಯ ನಂತರದ ಸ್ಥಾನ ಕರ್ನಾಟಕದ್ದಾಗಿರುತ್ತದೆ. ಇತರೆ ರಾಜ್ಯಗಳಿಗೆ ಹೋಲಿಸಿದಲ್ಲಿ ಸರಾಸರಿ ಠೇವಣಿ ಸಂಗ್ರಹ ಹಾಗೂ ಸಾಲ ನೀಡಿಕೆಯಲ್ಲಿ ರಾಜ್ಯವು ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನ ಹೊಂದಿರುತ್ತದೆ. ೨೦೧೧ ಮಾರ್ಚ್ ಅಂತ್ಯಕ್ಕೆ ವಾಣಿಜ್ಯ ಬ್ಯಾಂಕುಗಳು ಒಟ್ಟಾರೆ ಸಂಗ್ರಹಿಸಿದ ಸರಾಸರಿ ಠೇವಣಿ ಮೊತ್ತ (ಗ್ರಾಮೀಣ ಬ್ಯಾಂಕುಗಳೂ ಒಳಗೊಂಡಂತೆ) ರೂ.೩,೪೯,೦೦೯ ಕೋಟಿ; ಹಾಗೂ ಸಾಲ ನೀಡಿಕೆ ರೂ.೨,೫೩,೧೧೮ ಕೋಟಿ; ರಾಜ್ಯ ಠೇವಣಿ ಮತ್ತು ಸಾಲದ ಅನುಪಾತವು ಮಾರ್ಚ್ ೨೦೧೧ರಲ್ಲಿ ಶೇ.೭೫ರಷ್ಟಿತ್ತು. ಅದರಂತೆ ಆದ್ಯತಾವಲಯಕ್ಕೆ ನೀಡಿದ್ದ ಮುಂಗಡ ಮೊತ್ತ ರೂ.೧೦೫೭೪೬ ಕೋಟಿ, ಇದು, ಒಟ್ಟು ಮುಂಗಡದ ಶೇ.೪೧.೩ ರಷ್ಟಿದ್ದು, ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಪಡಿಸಿದ್ದ ಶೇ ೪೦ ಪ್ರಮಾಣಕ್ಕಿಂತ ಅಧಿಕವಾಗಿದೆ.

ಇತ್ತೀಚಿನ ವರದಿಯಂತೆ (೨೦೧೬), ಭಾರತದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಾಣಿಜ್ಯ ಬ್ಯಾಂಕಿಂಗ್ ಕಂಪನಿಗಳ ಸಂಖ್ಯೆ ೯೩ ಆಗಿದ್ದರೆ ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಬ್ಯಾಂಕಿಂಗ್ ಕಂಪನಿಗಳ ಸಂಖ್ಯೆ ೬೪. ಇವುಗಳು ರಾಜ್ಯದಲ್ಲಿ ಹೊಂದಿರುವ ಒಟ್ಟು ಬ್ಯಾಂಕಿನ ಶಾಖೆಗಳ ಸಂಖ್ಯೆ ೯೬೩೦. ಆದ್ಯತಾವಲಯಕ್ಕೆ ರಾಜ್ಯದಲ್ಲಿ ನೀಡಿದ ಸಾಲ ಮುಂಗಡದ ಪ್ರಮಾಣ ಮಾರ್ಚ್ ೨೦೧೬ರಲ್ಲಿ ರೂ. ೨೧೯೭೬೩ ಕೋಟಿ ಎಂದು RBI ವರದಿಯಿಂದ ತಿಳಿದು ಬರುವುದು. ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ೨೭ ಸಾರ್ವಜನಿಕ ವಲಯದ (Public Sector) ಬ್ಯಾಂಕುಗಳ ಪೈಕಿ ೧೯ ರಾಷ್ಟ್ರೀಕೃತ, ೬ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI) ಮತ್ತು ಅದರ ಸಹವರ್ತಿ (Associates) ಬ್ಯಾಂಕುಗಳು, IDBI (ಭಾರತೀಯ ಕೈಗಾರಿಕಾ ಬ್ಯಾಂಕ್) ಮತ್ತು ಇತ್ತೀಚಿಗೆ ೨೦೧೪ರಲ್ಲಿ ಆರಂಭಗೊಂಡ ಭಾರತೀಯ ಮಹಿಳಾ ಬ್ಯಾಂಕ್ (BMB) ಸೇರಿವೆ.

### ವ್ಯವಸಾಯ ಬ್ಯಾಂಕುಗಳು (Agriculture Banks)

ಮೈಸೂರು ಸಂಸ್ಥಾನದ ಎರಡನೇ ದಿವಾನರಾಗಿದ್ದ ಕೆ. ಶೇಷಾದ್ರಿ ಅಯ್ಯರ್ ಅವರ ಅಧಿಕಾರದ ಅವಧಿಯಲ್ಲಿ (೧೮೮೩-೧೯೦೧) ಅನೇಕ ಅಭಿವೃದ್ಧಿಪರ ಯೋಜನೆಗಳು ರೂಪುಗೊಂಡು ಅವುಗಳನ್ನು ಜಾರಿಗೊಳಿಸಲಾಯಿತು. ಅಂತಹ ಅನೇಕ ಪ್ರಗತಿಪರ ಯೋಜನೆಗಳಲ್ಲಿ ವ್ಯವಸಾಯ ನಿರತರ, ರೈತರಿಗೆ ಅದರಲ್ಲಿಯೂ ಚಿಕ್ಕಹಿಡುವಳಿದಾರರಿಗೆ ಅತೀ ಕಡಿಮೆ ಬಡ್ಡಿಯಲ್ಲಿ ಸುಲಭ ಸಾಲ ಒದಗಿಸುವ ಮೂಲಕ ಅವರನ್ನು ಖಾಸಗಿ ಸಾಹುಕಾರರು, ಶ್ರೀಮಂತರು, ಜಮೀನುದಾರರು, ಲೇವಾದೇವಿಗಾರರ ಶೋಷಣೆಯಿಂದ ಮುಕ್ತರಾಗಲು ಸಹಾಯಕ ವಾಗುವಂತೆ ಹಳೆಯ ಸಾಲ ತೀರಿಸಲು, ಸರ್ಕಾರದ ಪ್ರಾಯೋಜಕತ್ವದಲ್ಲಿ ಈ ಹೊಸ ತಳಿಯ ಬ್ಯಾಂಕುಗಳನ್ನು ಆರಂಭಿಸಲಾಯಿತು. ಅಂದಿನ ಕಾಲದಲ್ಲಿ ಈ ಹಣಕಾಸು ಸಂಸ್ಥೆಗಳನ್ನು ಆರ್ಥಿಕ-ಸಾಮಾಜಿಕ ಹೊಸ ಅವಿಷ್ಕಾರ ಎಂದು ಯುರೋಪ ದೇಶದ ಆರ್ಥಿಕ ಮತ್ತು ರಾಜಕೀಯ ಚಿಂತಕರಿಂದ ಪ್ರಶಂಸೆಗೆ ಒಳಗಾಯಿತು. ಅಂದಿನ ಕಾಲದಲ್ಲಿ ರೈತರಿಗೆ ಇಂತಹ ಬ್ಯಾಂಕುಗಳ ಮೂಲಕ ಸಹಾಯ ಮಾಡುವ ಪ್ರಯತ್ನವನ್ನು ಪಂಜಾಬ ಮತ್ತು ಮಹಾರಾಷ್ಟ್ರದಲ್ಲಿ ಆರಂಭಿಸಿದರೂ, ಅದು ಫಲಪ್ರದವಾಗಲಿಲ್ಲ. ಈ ಸಂಸ್ಥೆಗಳಿಗೆ ಸದಸ್ಯರ ಯಾವುದೇ ಷೇರು ಬಂಡವಾಳ ಇರಲಿಲ್ಲ. ಸದಸ್ಯರೇ ಪರಸ್ಪರ ಒಪ್ಪಿಕೊಂಡಂತೆ ನಷ್ಟವನ್ನು ಭರಿಸಬೇಕಾಗುತ್ತಿತ್ತು. ಸರ್ಕಾರವು ಈ ಸಂಸ್ಥೆಗಳಿಗೆ ಠೇವಣಿ ಮತ್ತು ಸಾಲದ ರೂಪದಲ್ಲಿ ಹಣಕಾಸಿನ ನೆರವು ನೀಡುತ್ತಿತ್ತು. ಈ ಸಂಸ್ಥೆಗಳು ತಮ್ಮ ಲಾಭಾಂಶದಲ್ಲಿ ಅಲ್ಪ ಭಾಗವನ್ನು ಕಾರ್ಯ ನಿರ್ವಹಣಾ ವೆಚ್ಚವಾಗಿ ಬಳಸಿ ಹೆಚ್ಚಿನ ಭಾಗವನ್ನು ಕಾಯ್ದ ನಿಧಿಗಳನ್ನಾಗಿ ಸೇರಿಸಿ, ಸಾರ್ವಜನಿಕ ಠೇವಣಿ ಸಂಗ್ರಹಿಸಿ

ದುಡಿಯುವ ಬಂಡವಾಳವಾಗಿ ಉಪಯೋಗಿಸುವಂತೆ ಹಣದ ನಿರ್ವಹಣೆ ಇತ್ತು. ಸಾಲಗಳನ್ನು ನಿರ್ದಿಷ್ಟ ಪಡಿಸಿದ ಉದ್ದೇಶಗಳಿಗೆ ಮಾತ್ರ ನೀಡಲಾಗುತ್ತಿತ್ತು.

ಈ ಬ್ಯಾಂಕುಗಳ ರಚನೆ ಮತ್ತು ಕಾರ್ಯವಿಧಾನದಲ್ಲಿ ಕೂಡುಬಂಡವಾಳ ಸಂಸ್ಥೆ (Joint Stock Co.) ಮತ್ತು ಕಾನೂನಿನ ಚೌಕಟ್ಟಿನಲ್ಲಿ ಇನ್ನೂ ಜಾರಿಯಲ್ಲಿ ಬಾರದ ಸಹಕಾರ ಸಂಘದ ಉದ್ದೇಶಗಳನ್ನು ಇವುಗಳ ಕಾರ್ಯ ವಿಧಾನದಲ್ಲಿ ಅಳವಡಿಸಲಾಗಿತ್ತು (Modus operandi). ಇವುಗಳನ್ನು ವ್ಯವಸಾಯಗಾರರ ಸಂಘ (Agriculturist Association) ಎಂದು ಕರೆಯಲಾಗುತ್ತಿತ್ತು.

ಈ ಸಂಘಟನೆಗಳು ಚಿಕ್ಕ ಹಿಡುವಳಿಯ ಬಡ ರೈತರ ಪರಸ್ಪರ ನಂಬುಗೆ ವಿಶ್ವಾಸದ ಸಂಘಟನೆಗಳಾಗಿದ್ದವು. ಈ ವ್ಯವಸಾಯ ಬ್ಯಾಂಕುಗಳಿಗೆ ಸರ್ಕಾರ ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ (ಶೇ.೪) ಸಾಲ ನೀಡುತ್ತಿತ್ತು. ಈ ಸಾಲವನ್ನು ಹಿಡುವಳಿದಾರರ ಜಮೀನ ಆಧಾರದ ಮೇಲೆ ಕೇವಲ ನಿಗದಿತ ಉದ್ದೇಶಗಳಿಗೆ. ಶೇ.೫-೬ರ ದರದಲ್ಲಿ ಸಾಲ ನೀಡಲಾಗುತ್ತಿತ್ತು. ಈ ಸಂಸ್ಥೆಗಳಿಗೆ ಸರ್ಕಾರ ಕೆಲವೊಂದು ರಿಯಾಯತಿಯನ್ನು ನೊಂದಣಿ ಶುಲ್ಕ ಇತ್ಯಾದಿ ನೀಡುತ್ತಿತ್ತು.

ಸದಸ್ಯರಿಗೆ ಯಾವುದೇ ಲಾಭಾಂಶವನ್ನು ನೀಡುತ್ತಿರಲಿಲ್ಲ ಮತ್ತು ಆಡಳಿತವನ್ನು ಮಂಡಳಿಯು ಯಾವುದೇ ಸಂಭಾವನೆ ಇಲ್ಲದೆ ಗೌರವ ಸೇವೆ ಎಂದು ನಡೆಸಬೇಕಾಗಿತ್ತು.

ರಾಜ್ಯದಲ್ಲಿ ಇಂತಹ ಪ್ರಥಮ ವ್ಯವಸಾಯ ಬ್ಯಾಂಕು ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿಯಲ್ಲಿ ಡಿಸೆಂಬರ್ ೧೮೯೪ರಲ್ಲಿ ೧೭ ಜನ ಸದಸ್ಯರೊಂದಿಗೆ (ಸಹಕಾರ ಸಂಘಗಳ ರಚನೆಗೆ ೧೦ ವರ್ಷ ಮುಂಚೆ) ಆರಂಭಿಸಲಾಯಿತು; ಇಂತಹ ಎರಡನೆಯ ಸಂಸ್ಥೆಯನ್ನು ದೇವಾಲಯ ನಗರ ನಂಜನಗೂಡಿನಲ್ಲಿ ೧೮೯೮ರಲ್ಲಿ ೫೬ ಸದಸ್ಯರೊಂದಿಗೆ ಆರಂಭಿಸಲಾಯಿತು. ಮುಂದಿನ ನಾಲ್ಕು ವರ್ಷಗಳಲ್ಲಿ ೧೯೦೧ರಲ್ಲಿ ರಾಜ್ಯಾದ್ಯಂತ ಇಂತಹ ೬೨ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದವು ಎಂದು ವರದಿಯಾಗಿದೆ. ಈ ಪೈಕಿ ಎರಡು ಬ್ಯಾಂಕುಗಳು, (ಕಡೂರು ಮತ್ತು ಸಕಲೇಶಪುರ) ಕಾಫಿ ಬೆಳೆಗಾರರ ಆರ್ಥಿಕ ನೆರವಿಗಾಗಿ ರಚನೆಗೊಂಡಿದ್ದವು ಎಂದು ವರದಿಯಿಂದ ತಿಳಿದು ಬರುವುದು. ಆದರೆ ಈ ಸಂಸ್ಥೆಗಳು ದೀರ್ಘಾಯುಷಿಗಳಾಗಲಿಲ್ಲ. ಕೇವಲ ಎರಡು ದಶಕಗಳ ಅವಧಿಯಲ್ಲಿ ಅವಸಾನ ಗೊಂಡವು. ದೊಡ್ಡ ರೈತರು ಕಡಿಮೆ ಬಡ್ಡಿಯಲ್ಲಿ ಪಡೆದ ಸಾಲವನ್ನು ಹೆಚ್ಚಿನ ಬಡ್ಡಿಗೆ ಲೇವಾದೇವಿಯಲ್ಲಿ ತೊಡಗಿಸುವ ಮೂಲಕ ಸಾಲದ ದುರುಪಯೋಗವಾಯಿತು. ಸದಸ್ಯರಿಂದ ಸಕಾಲದಲ್ಲಿ ಸಾಲ ಮರುಪಾವತಿಯಾಗದೇ ಸರ್ಕಾರದ ಸಾಲವನ್ನು ಈ ಸಂಸ್ಥೆಗಳು ಹಿಂದಕ್ಕೆ ನೀಡಲು ಅಸಮರ್ಥರಾಗಿದ್ದರಿಂದ ಸರ್ಕಾರ ಹೊಸ ಸಾಲ ನೀಡಲು ಸಾಧ್ಯವಾಗಲಿಲ್ಲ. ಆದ್ದರಿಂದ ೧೯೧೭ರ ಸುಮಾರಿಗೆ ಬಹುಪಾಲು ಸಂಸ್ಥೆಗಳು ಅವಸಾನಗೊಂಡವು. ಈ ಕುರಿತಂತೆ ವಿಚಾರಣೆಗೆ ನೇಮಕವಾದ ಸಮಿತಿಯ ವರದಿ ಪ್ರಕಾರ ಸರ್ಕಾರದಿಂದ ಇವುಗಳ ಮೇಲಿನ ನಿಯಂತ್ರಣ ಮತ್ತು ಪರಿಶೀಲನೆಯ ಕೊರತೆ ಇವುಗಳಿಗೆ ಸಾಲ ನೀಡಿಕೆಯಲ್ಲಿ ಸರ್ಕಾರ ಅನುಸರಿಸಿದ ಉದಾರ ಸಾಲ ಬಿಡುಗಡೆ ಇತ್ಯಾದಿ. ಈ ಒಂದು ಹೊಸ ವ್ಯವಸ್ಥೆ ಆಡಳಿತ ವೈಫಲ್ಯದಿಂದ ವಿಫಲವಾದರೂ ಅದರ ಹಿಂದಿನ ಉದ್ದೇಶ ನಿಜವಾಗಿಯೂ ಬಡ ಹಿಡುವಳಿದಾರರ ಮತ್ತು ವ್ಯವಸಾಯ ಅಭಿವೃದ್ಧಿಗೆ ಅತ್ಯಂತ ಪೂರಕವಾಗಿತ್ತು. ಅಂತೆಯೇ ಜಾಗತಿಕ ಮಟ್ಟದಲ್ಲಿ ಈ ವ್ಯವಸ್ಥೆ ಆರ್ಥಿಕ ಪಂಡಿತರ ಮೆಚ್ಚುಗೆಗೆ ಪಾತ್ರವಾಗಿತ್ತು. ಈ ಸಂಸ್ಥೆಗಳ ಮುಚ್ಚುವಿಕೆ ಮುಂದಿನ ದಿನಗಳಲ್ಲಿ (೧೯೨೯) ಜಮೀನು ಅಡಮಾನ (ಅಭಿವೃದ್ಧಿ) ಬ್ಯಾಂಕುಗಳ ಆರಂಭಕ್ಕೆ ನಾಂದಿಯಾಯಿತು ಎಂದು ಹೇಳಬಹುದು. ವಿವರಗಳಿಗೆ ಕೋಷ್ಟಕ ೬.೧ ಹಾಗೂ ೬.೨ ಅನ್ನು ನೋಡಿ.

**ಕೋಷ್ಟಕ ೬.೧: ರಾಜ್ಯದ ಬ್ಯಾಂಕಿಂಗ್ ಉದ್ಯಮದ ಪ್ರಮುಖ ಅಂಕಿ-ಅಂಶಗಳ ವಿಶ್ಲೇಷಣೆ (ಮಾರ್ಚ್, ೨೦೧೬)**

**(ಮೊತ್ತ ಕೋಟಿ ರೂ.ಗಳಲ್ಲಿ)**

| ವಿವರಣೆ | ಮಾರ್ಚ್, ೨೦೧೫ | ಮಾರ್ಚ್, ೨೦೧೬ | ವ್ಯತ್ಯಾಸ | ವಾರ್ಷಿಕ ಬೆಳವಣಿಗೆ |
|---|---|---|---|---|
| ಠೇವಣಿಗಳು | ೬೧೨೬೯೭ | ೬೮೭೯೩೫ | ೭೫೨೩೮ | ೧೨.೨೮ |
| ಮುಂಗಡಗಳು | ೪೫೮೦೩೭ | ೫೨೨೧೫೫ | ೬೪೧೧೮ | ೧೪.೦೦ |
| ಠೇವಣಿ ಸಾಲ ಪ್ರಮಾಣ | ೭೪.೭೬ | ೭೫.೯೦ | ೧.೧೪ | ೧.೫೩ |
| ಆದ್ಯತಾವಲಯದ ಒಟ್ಟು ಸಾಲ | ೧೮೪೫೦೩ | ೨೧೯೭೭೩ | ೩೫೨೭೦ | ೧೯.೧೧ |
| ಒಟ್ಟು ಸಾಲದ ಶೇಕಡ | ೪೦.೨೮ | ೪೨.೦೯ | ೧.೮೧ | |
| ವ್ಯವಸಾಯ ಸಾಲ | ೮೭೮೬೦ | ೧೦೬೩೬೮ | ೧೮೫೦೮ | ೨೧.೦೭ |
| ಒಟ್ಟು ಸಾಲದ ಶೇಕಡ | ೧೯.೧೮ | ೨೦೩೭ | ೧.೧೯ | |
| ದುರ್ಬಲ ವರ್ಗದ ಸಾಲ | ೬೭೭೬೫ | ೭೪೦೪೮ | ೬೨೮೩ | ೯.೨೭ |
| ಒಟ್ಟು ಸಾಲದ ಶೇಕಡ | ೧೪.೭೯ | ೧೪.೧೮ | -೦.೬೧ | |
| **ಶಾಖೆಗಳ ಜಾಲ** | | | | |
| ಗ್ರಾಮೀಣ | ೩೭೯೦ | ೩೯೪೧ | ೧೫೧ | |

| | | | | |
|---|---|---|---|---|
| ಅರೆನಗರ | ೨೩೫೯ | ೨೪೪೯ | ೯೦ | |
| ನಗರ | ೧೯೭೯ | ೨೦೪೬ | ೬೭ | |
| ಮಹಾನಗರ/ಬಂದರು ಪ್ರದೇಶ | ೧೯೪೬ | ೨೦೬೬ | ೧೨೦ | |
| ಒಟ್ಟು ಶಾಖೆಗಳು | ೧೦೦೭೪ | ೧೦೫೦೨ | ೪೨೮ | |
| ATM ಜಾಲ | | | | |
| ಗ್ರಾಮೀಣ | ೨೨೩೧ | ೨೩೮೯ | ೧೫೮ | |
| ಅರೆನಗರ | ೨೪೮೫ | ೨೮೬೦ | ೩೭೫ | |
| ನಗರ | ೩೨೪೭ | ೩೫೦೯ | ೨೬೨ | |
| ಮಹಾನಗರ/ಬಂದರು ಪ್ರದೇಶ | ೫೫೪೯ | ೫೯೮೦ | ೪೩೧ | |
| ಒಟ್ಟು ಶಾಖೆಗಳು | ೧೩೫೧೨ | ೧೪೭೩೮ | ೧೨೨೬ | |

**ಕೋಷ್ಟಕ ೬.೨: ಜೂನ್. ೨೦೧೬ರಲ್ಲಿ ಇದ್ದಂತೆ ವಾಣಿಜ್ಯ ಬ್ಯಾಂಕುಗಳ ಪ್ರಾದೇಶಿಕ ಹಂಚಿಕೆ ಮತ್ತು ಇತರ ಅವಶ್ಯಕ ಮಾಹಿತಿ**

**( ಕೋಟಿ ರೂಗಳಲ್ಲಿ)**

| ಗುಂಪು ಆಧಾರಿತ ಜನಸಂಖ್ಯೆ | ಶಾಖೆಗಳು | ಠೇವಣಿ | ಸಾಲ/ಮುಂಗಡ | ಠೇವಣಿ ಸಾಲ |
|---|---|---|---|---|
| ಗ್ರಾಮೀಣ | ೩೩೨೭ | ೪೯೬೮೮೫ | ೫೧೩೬೧೫ | ೧೦೩.೪ |
| ಅರೆನಗರ | ೨೨೪೬ | ೭೨೪೬೫೧ | ೫೬೮೬೬೦ | ೭೮.೫ |
| ನಗರ | ೧೯೭೦ | ೧೨೮೨೧೩೧ | ೭೭೪೩೮೨ | ೬೦.೪ |
| ಮಹಾನಗರ ಮೆಟ್ರೊ | ೨೦೮೭ | ೪೪೮೪೨೬೧ | ೨೯೬೦೭೧೩ | ೬೬.೦ |
| ರಾಜ್ಯದ ಒಟ್ಟು | ೯೬೩೦ | ೬೯೮೭೯೨೮ | ೪೮೧೭೩೭೦ | ೬೮.೯ |

## ಸಹಕಾರ ಸಂಸ್ಥೆಗಳನ್ನೊಳಗೊಂಡಂತೆ ಬ್ಯಾಂಕಿಂಗ್ ಮತ್ತು ಹಣಕಾಸು

ಕರ್ನಾಟಕವು ಭಾರತದಲ್ಲಿ ಉತ್ತಮ ಆರ್ಥಿಕ ಮೂಲಭೂತ ಸೌಕರ್ಯಗಳನ್ನು, ಮಾನವ ಸಂಪನ್ಮೂಲಗಳನ್ನು ಹೊಂದಿರುವ ರಾಜ್ಯವಾಗಿದೆ. ನಾಲ್ಕು ಪ್ರಮುಖ ರಾಷ್ಟ್ರೀಕೃತ ಬ್ಯಾಂಕುಗಳನ್ನು ಒಳಗೊಂಡಿದ್ದು, ದೇಶದಲ್ಲಿನ ವಿಸ್ತೃತ ವಾಣಿಜ್ಯ ಬ್ಯಾಂಕ್ ಶಾಖೆಗಳ ಜಾಲ ಹೊಂದಿರುವ ರಾಜ್ಯವಾಗಿದೆ. ರಾಜ್ಯದ ಬಹುತೇಕ ಬ್ಯಾಂಕಿಂಗ್ ವ್ಯವಹಾರವು ಭಾರತೀಯ ಸ್ಟೇಟ್ ಬ್ಯಾಂಕ್ ಒಳಗೊಂಡಂತೆ ಏಳು ವಾಣಿಜ್ಯ ಬ್ಯಾಂಕುಗಳಿಂದ ನಿರ್ವಹಿಸಲ್ಪಡುತ್ತಿದ್ದು. ಅವು ಒಟ್ಟು ವ್ಯವಹಾರದ ೩/೪ ಭಾಗವನ್ನು ಹೊಂದಿರುತ್ತದೆ. ಪ್ರಸ್ತುತ ರಾಜ್ಯದಲ್ಲಿ ಒಟ್ಟು ೨೬ ಸಾರ್ವಜನಿಕ ವಲಯದ ಬ್ಯಾಂಕುಗಳು. ೧೬ ಖಾಸಗಿ ವಲಯ ಬ್ಯಾಂಕುಗಳು ಮತ್ತು ಮೂರು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ವ್ಯವಹಾರ ನಡೆಸುತ್ತಿವೆ.

ರಾಜ್ಯದ ಗ್ರಾಮೀಣ ಭಾಗದಲ್ಲಿ ವಾಣಿಜ್ಯ, ಸಹಕಾರಿ ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಮುಖಾಂತರ ಸಾಲ ವಿತರಣೆ ಆಗುತ್ತದೆ. ಕರ್ನಾಟಕ ರಾಜ್ಯ ಸರ್ಕಾರಿ ಸಂಸ್ಥೆಯಾದ ಕರ್ನಾಟಕ ರಾಜ್ಯ ಹಣಕಾಸು ನಿಗಮವು (ಕೆ.ಎಸ್.ಎಫ್.ಸಿ.) ಕೈಗಾರಿಕೆ ಮತ್ತು ಸೇವಾ ವಲಯಗಳಿಗೆ ಸಾಲ ಮುಂಗಡಗಳನ್ನು ನೀಡುತ್ತದೆ. ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮವು (ಕೆ.ಎಸ್.ಐ.ಐ.ಡಿ.ಸಿ.) ರಾಜ್ಯದಲ್ಲಿನ ಮೂಲಭೂತ ಸೌಕರ್ಯದ ಯೋಜನೆಗಳ ಅನುಷ್ಠಾನಕ್ಕೆ ಬೇಕಾದ ಪ್ರಸ್ತಾವಗಳನ್ನು ರೂಪಿಸುತ್ತದೆ.

ಉನ್ನತ ಮಟ್ಟದ ಸಂಸ್ಥೆಯಾದ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು (ನಬಾರ್ಡ್) ಕೃಷಿ ಆಧಾರಿತ ಸಾಲ ಯೋಜನೆಗಳನ್ನು ಹಾಗೂ ತಳಮಟ್ಟದ ವಾರ್ಷಿಕ ಕ್ರಿಯಾ ಯೋಜನೆಗಳನ್ನು ತಯಾರಿಸುವ ಮುಖಾಂತರ ಕೃಷಿಯನ್ನು ಉತ್ತೇಜಿಸುವಲ್ಲಿ ಮತ್ತು ಗ್ರಾಮೀಣಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ.

ಸಾಂಸ್ಥಿಕ ಹಣಕಾಸಿಗೆ ಹೆಚ್ಚುತ್ತಿರುವ ಬೇಡಿಕೆಯಿಂದಾಗಿ ಹಣಕಾಸು ಸಂಸ್ಥೆಗಳು ತಮ್ಮ ಜಾಲವನ್ನು ಮತ್ತು ಸಾಲ ಸೌಲಭ್ಯಗಳನ್ನು ಹೆಚ್ಚಿಸುತ್ತಾ ಬರುತ್ತಿವೆ. ೧೯೬೯ರಲ್ಲಿ ಬ್ಯಾಂಕುಗಳು ರಾಷ್ಟ್ರೀಕರಣವಾದಾಗ ರಾಜ್ಯದಲ್ಲಿ ೭೯೫ ಬ್ಯಾಂಕ್ ಶಾಖೆಗಳಿದ್ದವು. ಅಲ್ಲಿಂದೀಚೆಗೆ ಮಾರ್ಚ್ ೨೦೧೫ರ ಅಂತ್ಯದವರೆಗೆ ೯೩೧೯ ಬ್ಯಾಂಕು ಶಾಖೆಗಳು ಸೇರಿಸಲ್ಪಡುವುದರ ಮೂಲಕ ಬ್ಯಾಂಕ್ ಶಾಖೆಗಳ ಒಟ್ಟು ಸಂಖ್ಯೆ ೧೦೦೭೪ ರಷ್ಟಾಗಿದೆ. ಬ್ಯಾಂಕ್ ಶಾಖಾ ಬ್ಯಾಂಕ್ ಜಾಲ ವಿಸ್ತರಣೆಯಿಂದ ನಗರ ಪ್ರದೇಶದ ಹಾಗೂ ಗ್ರಾಮೀಣ ಪ್ರದೇಶದ ಜನರಿಗೆ ಬ್ಯಾಂಕಿಂಗ್ ಸೇವೆಗಳ ಲಾಭ ಒದಗಿದೆ. ಅದಾಗ್ಯೂ, ಕಳೆದ ಕೆಲವು ವರ್ಷಗಳಲ್ಲಿ ಪಟ್ಟಣ ಮತ್ತು ಮಹಾನಗರ ಪ್ರದೇಶಗಳಿಗೆ ಹೋಲಿಸಿದರೆ ಗ್ರಾಮೀಣ ಮತ್ತು ಅರೆ ಪಟ್ಟಣ ಪ್ರದೇಶಗಳಲ್ಲಿ ಬ್ಯಾಂಕ್ ಶಾಖಾ ಜಾಲವು ಹೆಚ್ಚಳವಾಗಿದೆ. ವಿವರಗಳಿಗೆ ಕೋಷ್ಟಕ ೬.೩ ಹಾಗೂ ೬.೪ ಅನ್ನು ನೋಡಿ.

### ಕೋಷ್ಟಕ ೬.೩: ಪ್ರದೇಶವಾರು ಬ್ಯಾಂಕ್ ಶಾಖಾ ಜಾಲ

| ಕ್ರ.ಸಂ. | ಶಾಖಾ ಜಾಲ | ಮಾರ್ಚ್, ೨೦೧೩ | ಮಾರ್ಚ್, ೨೦೧೪ | ಮಾರ್ಚ್, ೨೦೧೫ | ಸರಾಸರಿ ಹೆಚ್ಚಳ ೨೦೧೪-೨೦೧೫ |
|---|---|---|---|---|---|
| ೧. | ಗ್ರಾಮೀಣ | ೩೨೯೫ | ೩೫೩೨ | ೩೭೯೦ | ೨೫೮ |
| ೨. | ಅರೆಪಟ್ಟಣ | ೧೮೨೮ | ೨೨೧೦ | ೨೩೫೯ | ೧೪೯ |
| ೩. | ಪಟ್ಟಣ | ೧೩೯೯ | ೧೮೪೫ | ೧೯೭೯ | ೧೩೯ |
| ೪. | ಮಹಾನಗರ | ೧೬೦೮ | ೧೭೭೯ | ೧೯೪೬ | ೧೬೭ |
| | ಒಟ್ಟು ಶಾಖೆಗಳು | ೮೪೩೦ | ೯೩೬೬ | ೧೦೦೭೪ | ೭೦೮ |

ಆಧಾರ: ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿ, ಕರ್ನಾಟಕ

### ಕೋಷ್ಟಕ ೬.೪: ವಿವಿಧ ಬ್ಯಾಂಕುಗಳ ಶಾಖಾ ಜಾಲದ ವಿವರ

| ಕ್ರ. ಸಂ. | ಬ್ಯಾಂಕ್ ವರ್ಗೀಕರಣ | ಮಾರ್ಚ್, ೨೦೧೩ | ಮಾರ್ಚ್, ೨೦೧೪ | ಮಾರ್ಚ್, ೨೦೧೫ |
|---|---|---|---|---|
| ೧. | ವಾಣಿಜ್ಯ ಬ್ಯಾಂಕ್‌ಗಳು | ೬೦೫೨ | ೬೮೭೬ | ೭೪೪೦ |
| ೨. | ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ | ೧೪೩೦ | ೧೫೪೭ | ೧೬೭೧ |
| ೩. | ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ. | ೪೦ | -- | -- |
| ೪. | ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ | ೧೭೮ | ೨೦೧ | ೨೦೧ |
| ೫. | ಡಿ.ಸಿ.ಸಿ. ಬ್ಯಾಂಕ್ | ೬೩೦ | ೬೭೨ | ೬೯೨ |
| ೬. | ಕರ್ನಾಟಕ ರಾಜ್ಯ ಕೈಗಾರಿಕಾ ಸಹಕಾರಿ ಬ್ಯಾಂಕ್ | ೩೮ | ೩೮ | ೩೮ |
| ೭. | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (K.S.F.C.) | ೩೨ | ೩೨ | ೩೨ |
| **ಒಟ್ಟು** | | **೮೪೩೦** | **೯೩೬೬** | **೧೦೦೭೪** |

ಆಧಾರ: ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿ, ಕರ್ನಾಟಕ

ಕರ್ನಾಟಕದಲ್ಲಿ ಪ್ರತಿ ಶಾಖೆಯು ಸರಾಸರಿ ೭೭೪೮ ಜನಸಂಖ್ಯೆಗೆ ಬ್ಯಾಂಕಿಂಗ್ ಸೇವೆಯನ್ನು ಒದಗಿಸಲಾಗುತ್ತಿದೆ. ಇದು ರಾಷ್ಟ್ರೀಯ ಮತ್ತು ಇತರೆ ರಾಜ್ಯಗಳ ಸರಾಸರಿಗಿಂತ ಕಡಿಮೆಯದ್ದಾಗಿರುತ್ತದೆ. ಸರಾಸರಿ ಠೇವಣಿ ಸಂಗ್ರಹ ಹಾಗೂ ಸಾಲ ನೀಡಿಕೆಯಲ್ಲಿ ರಾಜ್ಯವು ಕ್ರಮವಾಗಿ ೪ನೇ ಸ್ಥಾನ ಹೊಂದಿರುತ್ತದೆ. ವಿವರಗಳಿಗೆ ಕೋಷ್ಟಕ ೬.೫ರಲ್ಲಿ ನೋಡಿ.

### ಕೋಷ್ಟಕ ೬.೫: ಕರ್ನಾಟಕ ರಾಜ್ಯದ ಸರಾಸರಿ ಬ್ಯಾಂಕು ಠೇವಣಾತಿ ಮತ್ತು ಒಟ್ಟು ಮುಂಗಡಗಳ ಸ್ಥಿತಿಯನ್ನು ಇತರ ಆಯ್ದ ರಾಜ್ಯಗಳಿಗೆ ಹೋಲಿಸಿದ ಪಟ್ಟಿ

(ರೂ. ಕೋಟಿಗಳಲ್ಲಿ)

| ರಾಜ್ಯಗಳು | ೨೦೧೪-೧೫ | | | | |
|---|---|---|---|---|---|
| | ಶಾಖಾವಾರು ಜನಸಂಖ್ಯೆ | ಸರಾಸರಿ ಠೇವಣಿಗಳು | ಶ್ರೇಣಿ | ಒಟ್ಟು ಸಾಲ | ಶ್ರೇಣಿ |
| ಮಹಾರಾಷ್ಟ್ರ | ೧೧,೫೦೫ | ೨೦೨೩೩೮೦.೯೧ | ೧ | ೧೮೯೮೫೩೧.೩೦ | ೧ |
| ದೆಹಲಿ | ೩,೩೩೪ | ೯೨೮೧೫೮.೩೫ | ೨ | ೮೪೮೫೧೦.೧೭ | ೨ |
| ಉತ್ತರಪ್ರದೇಶ | ೧೫,೬೨೧ | ೬೮೩೩೬೩.೧೨ | ೩ | ೨೯೮೮೫೯.೫೪ | ೮ |
| ಕರ್ನಾಟಕ | ೯,೨೧೫ | ೬೪೦೮೬೬.೭೮ | ೪ | ೪೨೯೪೨೩.೧೯ | ೪ |
| ಪಶ್ಚಿಮ ಬಂಗಾಳ | ೭,೪೧೬ | ೫೬೬೫೮೦.೪೯ | ೫ | ೩೧೫೪೧೫.೪೭ | ೭ |
| ತಮಿಳುನಾಡು | ೯,೩೮೯ | ೫೫೬೩೨೭.೮೬ | ೬ | ೬೩೯೮೪೬.೫೪ | ೩ |
| ಗುಜರಾತ್ | ೭,೦೯೪ | ೪೮೬೨೭೨.೩೨ | ೭ | ೩೪೩೯೨೪.೯೯ | ೫ |

| | | | | | |
|---|---|---|---|---|---|
| ಕೇರಳ | ೬,೦೩೯ | ೩೩೫೧೩೩.೪೯ | ೮ | ೨೦೭೯೭೩.೮೭ | ೯ |
| ತೆಲಂಗಾಣ | ೪,೬೪೮ | ೩೨೮೧೦೫.೦೨ | ೯ | ೩೩೮೯೧೪.೫೨ | ೬ |
| ಮಧ್ಯಪ್ರದೇಶ | ೫,೯೪೧ | ೨೮೮೩೪೯.೪೮ | ೧೦ | ೧೫೭೨೨೩.೧೬ | ೧೪ |
| ಪಂಜಾಬ್ | ೫,೯೫೩ | ೨೬೮೨೭೪.೦೯ | ೧೧ | ೧೯೧೪೪೫.೭೧ | ೧೨ |
| ರಾಜಸ್ಥಾನ | ೬,೪೦೮ | ೨೪೦೬೯೧.೦೩ | ೧೨ | ೨೦೩೯೦೨.೦೫ | ೧೦ |
| ಹರಿಯಾಣ | ೪,೪೦೯ | ೨೩೦೨೬೦.೬೭ | ೧೩ | ೧೬೦೩೮೦.೮೬ | ೧೩ |
| ಬಿಹಾರ | ೬,೨೪೯ | ೨೨೧೫೧೭.೪೫ | ೧೪ | ೭೧೮೯೪.೭೩ | ೧೬ |
| ಒಡಿಷಾ | ೪,೩೮೭ | ೧೯೩೬೫೬.೫೨ | ೧೫ | ೭೪೫೮೦.೨೯ | ೧೫ |
| ಆಂಧ್ರಪ್ರದೇಶ | ೬,೨೭೪ | ೧೯೦೯೧೫.೨೯ | ೧೬ | ೧೯೬೮೯೬.೬೩ | ೧೧ |
| ಅಖಿಲ ಭಾರತ | ೧೨೯,೧೫೧ | ೮೯೪೦೨೫೦.೦೫ | | ೬೭೦೫೯೭೭.೨೪ | |

ಆಧಾರ: ಭಾರತೀಯ ರಿಸರ್ವ್ ಬ್ಯಾಂಕಿನ ತ್ರೈಮಾಸಿಕ ವರದಿ, ಸೆಪ್ಟೆಂಬರ್ ೨೦೧೫.

### ಠೇವಣಿಗಳು ಮತ್ತು ಮುಂಗಡಗಳು

ರಾಜ್ಯದ ಎಲ್ಲಾ ಬ್ಯಾಂಕುಗಳ (ವಾಣಿಜ್ಯ, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಮತ್ತು ಸಹಕಾರ ಬ್ಯಾಂಕುಗಳು ಸೇರಿ) ಒಟ್ಟು ಠೇವಣಿಯು ಒಂದು ವರ್ಷ ಹಿಂದಿದ್ದ ಮಟ್ಟವಾದ ರೂ.೬೧೨೬೯೭.೦೦ ಕೋಟಿಗಳಿಗೆ ಎದುರಾಗಿ ಮಾರ್ಚ್ ೨೦೧೫ರಲ್ಲಿ ರೂ.೮೭೨೭೨ ಕೋಟಿಗಳು ಹೆಚ್ಚಾಗಿರುತ್ತದೆ. ಪ್ರಸ್ತುಕ ವರ್ಷದ ಠೇವಣಿಯ ಬೆಳವಣಿಗೆಯು ಶೇ.೧೪.೪೯ರಷ್ಟಾಗಿದೆ. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳೂ ಸೇರಿದಂತೆ ರಾಜ್ಯದ ವಾಣಿಜ್ಯ ಬ್ಯಾಂಕುಗಳ ಒಟ್ಟು ಮುಂಗಡಗಳು ಮಾರ್ಚ್ ೨೦೧೫ರಲ್ಲಿ ರೂ.೩೯೫೩೨.೮೫ ಕೋಟಿ ರೂಪಾಯಿಗಳಾಗಿದ್ದು, ಶೇಕಡ ೧೪.೩೩ರ ಬೆಳವಣಿಗೆಯನ್ನು ಸೂಚಿಸುತ್ತದೆ. ರಾಜ್ಯದ ಸಾಲ-ಠೇವಣಿಯ ಅನುಪಾತವು ಮಾರ್ಚ್ ೨೦೧೫ರಲ್ಲಿ ಶೇ.೭೪.೭೬ ಇದ್ದು, ಕಳೆದ ವರ್ಷ ಇದೇ ಅನುಪಾತವು ಶೇ.೭೫.೨೪ರಷ್ಟಿದೆ. ವಿವರಣೆಯನ್ನು ಕೋಷ್ಟಕ ೬.೬ರಲ್ಲಿ ನೀಡಲಾಗಿದೆ.

**ಕೋಷ್ಟಕ ೬.೬: ವಾಣಿಜ್ಯ ಬ್ಯಾಂಕುಗಳ ಪ್ರಗತಿ (ಮಾರ್ಚ್ ಅಂತ್ಯಕ್ಕೆ)**

| ಕ್ರ.ಸಂ. | ಸೂಚಕ | ಘಟಕ | ೨೦೧೨-೧೩ | ೨೦೧೩-೧೪ | ೨೦೧೪-೧೫ |
|---|---|---|---|---|---|
| ೧. | ಬ್ಯಾಂಕ್ ಶಾಖೆಗಳು | | | | |
| | ಅ) ವಾಣಿಜ್ಯ ಬ್ಯಾಂಕುಗಳು | ಸಂಖ್ಯೆ | ೬೦೫೨ | ೬೮೭೬ | ೭೪೪೦ |
| | ಆ) ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು | ಸಂಖ್ಯೆ | ೧೪೬೦ | ೧೫೪೭ | ೧೬೭೧ |
| | ಇ) ಸಹಕಾರಿ ಬ್ಯಾಂಕುಗಳು | ಸಂಖ್ಯೆ | ೯೧೮ | ೯೪೩ | ೯೬೩ |
| | ಒಟ್ಟು | ಸಂಖ್ಯೆ | ೮೪೩೦ | ೯೩೬೬ | ೧೦೦೭೪ |
| ೨. | ಠೇವಣಿಗಳು | | | | |
| | ಅ) ವಾಣಿಜ್ಯ ಬ್ಯಾಂಕುಗಳು | ಕೋಟಿ ರೂ. | ೪೨೨೧೪೫.೫೦ | ೪೮೫೧೮೩.೩೨ | ೫೬೩೯೮೯.೧೬ |
| | ಆ) ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು | ಕೋಟಿ ರೂ. | ೧೭೭೨೭.೬೦ | ೨೨೦೦೯.೩೬ | ೨೫೯೨೬.೦೫ |
| | ಇ) ಸಹಕಾರಿ ಬ್ಯಾಂಕುಗಳು | ಕೋಟಿ ರೂ. | ೧೯೦೫೧.೯೦ | ೧೮೨೩೨.೬೯ | ೨೨೭೮೨.೧೬ |
| | ಒಟ್ಟು | ಕೋಟಿ ರೂ. | ೪೫೮೯೨೫.೦೦ | ೫೨೫೪೨೫.೩೭ | ೬೧೨೬೯೭.೩೭ |
| ೩. | ಮುಂಗಡಗಳು | | | | |
| | ಅ) ವಾಣಿಜ್ಯ ಬ್ಯಾಂಕುಗಳು | ಕೋಟಿ ರೂ. | ೨೯೬೧೨೩.೯೦ | ೩೫೫೪೧೫.೨೭ | ೪೦೮೫೧೧.೨೩ |
| | ಆ) ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು | ಕೋಟಿ ರೂ. | ೧೫೧೪೩.೧೦ | ೧೮೨೦೨.೩೪ | ೨೧೨೬೪.೩೮ |
| | ಇ) ಸಹಕಾರಿ ಬ್ಯಾಂಕುಗಳು | ಕೋಟಿ ರೂ. | ೩೩೬೦೩.೦೦ | ೨೧೭೧೦.೨೪ | ೨೮೨೬೧.೪೦ |
| | ಒಟ್ಟು | ಕೋಟಿ ರೂ. | ೩೪೪೮೭೦.೦೦ | ೩೯೫೩೨೭.೮೫ | ೪೫೮೦೩೭.೦೧ |
| ೪. | ಸಾಲ ಠೇವಣಿ ಪ್ರಮಾಣ | | | | |
| | ಅ) ವಾಣಿಜ್ಯ ಬ್ಯಾಂಕುಗಳು | ಶೇಕಡ | ೭೦.೧೫ | ೭೩.೨೫ | ೭೨.೪೩ |
| | ಆ) ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು | ಶೇಕಡ | ೮೫.೪೨ | ೮೨.೭೦ | ೮೨.೦೨ |
| | ಇ) ಸಹಕಾರಿ ಬ್ಯಾಂಕುಗಳು | ಶೇಕಡ | ೧೭೬.೩೮ | ೧೧೯.೦೭ | ೧೨೪.೦೫ |
| | ಒಟ್ಟು | ಶೇಕಡ | ೭೫.೧೫ | ೭೫.೨೪ | ೭೪.೭೬ |

ಆಧಾರ: ರಾಜ್ಯಮಟ್ಟದ ಬ್ಯಾಂಕರುಗಳ ಸಮಿತಿ, ಕರ್ನಾಟಕ

## ಆದ್ಯತಾವಲಯದ ಮುಂಗಡಗಳು

ಆದ್ಯತಾವಲಯಕ್ಕೆ ಸಾಲ ನೀಡುವ ಮುಖ್ಯ ಉದ್ದೇಶ ಸಾಮಾಜಿಕ ನ್ಯಾಯ ಒದಗಿಸುವುದು, ಸಮಗ್ರ ಗ್ರಾಮೀಣ ಅಭಿವೃದ್ಧಿ ಮುಂತಾದವುಗಳಿಗೆ ಬ್ಯಾಂಕುಗಳ ರಾಷ್ಟ್ರೀಕರಣದ ನಂತರದ ದಶಕಗಳಲ್ಲಿ ಭಾರತೀಯ ರಿಜರ್ವ್ ಬ್ಯಾಂಕಿನ ಮಾರ್ಗದರ್ಶಿ ಸೂತ್ರದ ಅನುಸಾರ ಸಾಲ ನೀಡಿಕೆಯಲ್ಲಿ ವ್ಯಾಪಕ ಬದಲಾವಣೆಯಾಗಿದ್ದು, ಇದುವರೆಗೆ ಸಾಲ ನೀಡಿಕೆಯಲ್ಲಿ ನಗಣ್ಯವಾಗಿದ್ದ ಹಲವು ವಲಯಗಳಿಗೆ, ಅಂದರೆ ಕೃಷಿ, ಗ್ರಾಮೀಣ ಕೈಗಾರಿಕೆ, ಸ್ವಂತ ಉದ್ಯೋಗ, ನೀರಾವರಿ, ಹಿಂದುಳಿದ ವರ್ಗ ಅಲ್ಪಸಂಖ್ಯಾತರು ಮುಂತಾದವರಿಗೆ ಆದ್ಯತೆ ಮೇಲೆ ಸಾಲ ನೀಡಲಾಗುತ್ತಿದೆ. ದೇಶೀಯ ಬ್ಯಾಂಕುಗಳು ಅವುಗಳ ನಿವ್ವಳ ಬ್ಯಾಂಕು ಸಾಲದ ಶೇ ೪೦ ರಷ್ಟನ್ನು ಆದ್ಯತಾವಲಯಕ್ಕೆ ಒದಗಿಸಬೇಕಾಗಿರುತ್ತದೆ. ರಾಜ್ಯದ ವಾಣಿಜ್ಯ ಬ್ಯಾಂಕುಗಳು ನೀಡಿರುವ ಆದ್ಯತಾ ವಲಯದ ಮುಂಗಡಗಳು ಮಾರ್ಚ್ ೨೦೧೫ರ ಅಂತ್ಯಕ್ಕೆ ೧೮೪೫೦೩ ಕೋಟಿ ರೂಪಾಯಿಗಳಾಗಿದ್ದು, ಹಿಂದಿನ ವರ್ಷದ ಆದ್ಯತಾ ವಲಯದ ಮುಂಗಡಗಳು ರೂ.೧೫೮೪೫೫ ಕೋಟಿಗಳಾಗಿದ್ದು ರೂ.೨೬೦೪೮ ಕೋಟಿಗಳಷ್ಟು ಹೆಚ್ಚಾಗಿರುತ್ತದೆ. ಇದು ಶೇ ೪೦.೨೮ರಷ್ಟಿದ್ದು, ಭಾರತೀಯ ರಿಸರ್ವ್ ಬ್ಯಾಂಕ್ ನಿಗದಿಪಡಿಸಿದ ಶೇ.೪೦ರಷ್ಟು ಮಟ್ಟಕ್ಕಿಂತ ಅಧಿಕವಾಗಿದೆ.

ನೇರ ಕೃಷಿ ವಲಯದ ಮುಂಗಡಗಳು ಮಾರ್ಚ್ ೨೦೧೫ರಲ್ಲಿ ರೂ.೮೭,೮೬೦ ಕೋಟಿಗಳಾಗಿದ್ದು, ವಾಣಿಜ್ಯ ಬ್ಯಾಂಕುಗಳ ಒಟ್ಟು ಮುಂಗಡದ ಶೇ.೧೯.೧೮ರಷ್ಟಿದೆ. ಇದ್ದು ಬ್ಯಾಂಕುಗಳು ನಿಗದಿಪಡಿಸಿರುವ ಶೇ.೧೮ಕ್ಕಿಂತ ಮೇಲ್ಪಟ್ಟಿದೆ. ಅದರಲ್ಲಿ ನೇರ ಕೃಷಿ ವಲಯದ ಮುಂಗಡದಲ್ಲಿ ರೂ.೮೦೨೨೩ ಕೋಟಿಗಳಾಗಿದ್ದು, ಇದು ಶೇ.೧೭.೫೧ಕ್ಕೆ ಇರುತ್ತದೆ. ಸಣ್ಣ ಮತ್ತು ಅತಿ ಸಣ್ಣ ರೈತ ಮುಂಗಡಗಳಿಗೆ ರೂ.೪೪೭೬೩ ಕೋಟಿಗಳಾಗಿದ್ದು, ಶೇ.೫೦.೯೧ರಷ್ಟು, ಒಟ್ಟಾರೆ ಕೃಷಿ ಸಾಲಕ್ಕೆ ಮತ್ತು ನೇರ ಕೃಷಿ ಸಾಲಕ್ಕೆ ಶೇ.೫೫.೭೬ರಷ್ಟು ಇರುತ್ತದೆ. ಇದು ಒಟ್ಟು ೫೦.೪೦ ಲಕ್ಷ ಖಾತೆಗಳಿಗೆ ಒಳಗೊಂಡಿರುತ್ತದೆ.

ಅಲ್ಪಸಂಖ್ಯಾತ ವರ್ಗಗಳಿಗೆ ನೀಡಲಾಗಿರುವ ಮುಂಗಡವು ರೂ.೧೯೮೦೧ ಕೋಟಿಗಳಾಗಿದ್ದು ಕಳೆದ ವರ್ಷಕ್ಕಿಂತ ರೂ.೨೮೩೩ ಕೋಟಿ ಹೆಚ್ಚಾಗಿರುತ್ತದೆ. ಸಣ್ಣ ಮತ್ತು ಮಧ್ಯಮ ಕೈಗಾರಿಕೆ ವಲಯದಲ್ಲಿ ವಿತರಿಸಲಾಗಿರುವ ಮುಂಗಡಗಳು ಕಳೆದ ವರ್ಷದಲ್ಲಿದ್ದ ರೂ.೫೭೦೫೧ ಕೋಟಿಗಳಿಂದ ಮಾರ್ಚ್ ೨೦೧೫ರಲ್ಲಿ ರೂ.೬೬೯೨೫ ಕೋಟಿಗಳಾಗಿರುತ್ತದೆ. ಪರಿಶಿಷ್ಟ ಜಾತಿ/ಪಂಗಡಗಳಿಗೆ ನೀಡಲಾದ ಮುಂಗಡಗಳು ಮಾರ್ಚ್ ೨೦೧೪ರಲ್ಲಿದ್ದ ರೂ.೯೯೬೬ ಕೋಟಿಗಳಿಗೆ ಪ್ರತಿಯಾಗಿ ಮಾರ್ಚ್ ೨೦೧೫ರಲ್ಲಿ ರೂ.೧೨೪೮೦ ಕೋಟಿಗಳಾಗಿದ್ದು, ಇದು ರೂ.೨೫೧೪.೦೦ ಕೋಟಿಗಳಿಗೆ ವರ್ಧಿಸಿದೆ. ಇದೇ ರೀತಿ ಮಹಿಳೆಯರಿಗೆ ನೀಡಲಾದ ಮುಂಗಡಗಳು ಮಾರ್ಚ್ ೨೦೧೫ರಲ್ಲಿ ರೂ.೩೩೨೦೬ ಕೋಟಿಗೆ ತಲುಪಿದ್ದು, ಉತ್ತಮ ಬೆಳವಣಿಗೆಯನ್ನು ದಾಖಲಿಸಿದೆ. ೨೦೧೩ರಿಂದ ೨೦೧೫ನೇ ಸಾಲಿನಲ್ಲಿ ಕರ್ನಾಟಕದ ಬ್ಯಾಂಕುಗಳಲ್ಲಿನ ಆದ್ಯತಾ ವಲಯದ ಮುಂಗಡಗಳ ವಿವರ ಕೋಷ್ಟಕ ೬.೭ರಲ್ಲಿ ನೀಡಲಾಗಿದೆ.

**ಕೋಷ್ಟಕ ೬.೭ : ಆದ್ಯತಾ ವಲಯದ ಮುಂಗಡಗಳ ಹಂಚಿಕೆ (ರೂ. ಕೋಟಿಗಳಲ್ಲಿ)**

| ಕ್ರ. ಸಂ. | ಸೂಚಕ | ಮಾರ್ಚ್ ೨೦೧೩ | | ಮಾರ್ಚ್ ೨೦೧೪ | | ಮಾರ್ಚ್ ೨೦೧೫ | |
|---|---|---|---|---|---|---|---|
| | | ಮುಂಗಡ | ಒಟ್ಟು ಮುಂಗಡಕ್ಕೆ ಶೇಕಡವಾರು | ಮುಂಗಡ | ಒಟ್ಟು ಮುಂಗಡಕ್ಕೆ ಶೇಕಡವಾರು | ಮುಂಗಡ | ಒಟ್ಟು ಮುಂಗಡಕ್ಕೆ ಶೇಕಡವಾರು |
ಲಭ್ಯವಿರುವ ದಾಖಲೆಗಳ ಪ್ರಕಾರ, ಕರ್ನಾಟಕವು ದೇಶದಲ್ಲಿಯೇ ಪ್ರಪ್ರಥಮ ಎಂದು ಹೇಳಲಾಗುವ ಪ್ರಾಥಮಿಕ ವ್ಯವಸಾಯ ಪತ್ತಿನ ಸಂಘವನ್ನು ಆರಂಭಿಸಿದ ಹಿರಿಮೆಯನ್ನು ಹೊಂದಿದೆ. ಈ ಸಂಘವು ೧೯೦೫, ಮೇ ೮ರಂದು, ಇಂದಿನ ಗದಗ ಜಿಲ್ಲೆಯ 'ಕಣಗಿನಹಾಳ' ಗ್ರಾಮದಲ್ಲಿ (ಗದಗದಿಂದ ಸುಮಾರು ೧೮ ಕಿ.ಮೀ. ದೂರ) ೧೩ ಜನ ಸದಸ್ಯರಿಂದ ಆರಂಭವಾಯಿತು. ಇದರ ಮೂಲ ಸಂಸ್ಥಾಪಕರು, ಸಿದ್ಧನಗೌಡ ಸಣ್ಣರಾಮನಗೌಡ ಪಾಟೀಲ (೧೮೪೩-೧೯೩೩) ಎಂಬ ಹಿಂದುಳಿದ ಸಮುದಾಯದ (ಕುರುಬ) ಪ್ರಜ್ಞಾವಂತ ಜಮೀನುದಾರ ಎಂಬುದು ಗಮನಾರ್ಹ. ಇವರನ್ನು ಕರ್ನಾಟಕದ ಸಹಕಾರ ಚಳವಳಿಯ ಪಿತಾಮಹ ಎಂದು ಪರಿಗಣಿಸಲಾಗಿದೆ. ಕಣಗಿನಹಾಳದ ಸಹಕಾರ ಸಂಘವನ್ನು ದೇಶದ ಪ್ರಪ್ರಥಮ Registrar of Co-op Societies ಮತ್ತು ಧಾರವಾಡ ಜಿಲ್ಲೆಯ ಉಸ್ತುವಾರಿ ಕಲೆಕ್ಟರ್ ಆಗಿದ್ದ ಸರ್ ಆರ್.ಜೆ. ಮೆಕಾನಿಯಲ್ ಅವರೇ ಸ್ವತಃ ನೊಂದಾಯಿಸಿದರು. ಅದೇ ಸಂದರ್ಭದಲ್ಲಿ ಕಣಗಿನಹಾಳ ರೈಲುನಿಲ್ದಾಣಕ್ಕೆ ಮತ್ತು ಕುಡಿಯುವ ನೀರಿನ ಬಾವಿಗೆ ಶಿಲಾನ್ಯಾಸ ಮಾಡಲಾಯಿತು ಎಂದು ಹೇಳಲಾಗುವುದು. ಅದೇ ತಿಂಗಳ ೨೪ರಂದು ಗದಗ ಬಳಿಯ ಹುಲಕೋಟಿಯಲ್ಲಿ ವಿವಿಧ ಉದ್ದೇಶ ಸಹಕಾರ ಸಂಘವು ಆರಂಭವಾಯಿತು. ಮುಂದಿನ ತಿಂಗಳು (ಜೂನ್ ೧೯೦೫ರಲ್ಲಿ) ಗದಗ ತಾಲೂಕಿನ ವಿವಿಧ ಸ್ಥಳಗಳಲ್ಲಿ ನಾಲ್ಕು ಸಹಕಾರ ಪತ್ತಿನ ಸಂಘಗಳು ಆರಂಭಗೊಂಡವು. ವರ್ಷ ೨೦೦೫ರಲ್ಲಿ ರಾಜ್ಯದಲ್ಲಿ ಸಹಕಾರ ಚಳವಳಿಯ ಶತಮಾನೋತ್ಸವ ಆಚರಣೆಯ ಸಂದರ್ಭದಲ್ಲಿ ಸದರಿ ಗ್ರಾಮವನ್ನು ಆದರ್ಶ ಗ್ರಾಮವೆಂದು (Model Village) ಘೋಷಣೆ ಮಾಡಲಾಯಿತು. ಸಿದ್ಧನಗೌಡರ ಮೂರ್ತಿಯನ್ನು ಸ್ಥಾಪಿಸುವದಲ್ಲದೇ ಸಮಾರಂಭದ ಸ್ಮರಣೆಯ ಅಂಚೆ ಚೀಟಿಯನ್ನು ಬಿಡುಗಡೆ ಮಾಡಲಾಯಿತು.

ನಮ್ಮ ರಾಜ್ಯದಲ್ಲಿ ಗದಗ ಜಿಲ್ಲೆಯನ್ನು ಸಹಕಾರ ಸಂಸ್ಕೃತಿಯ ಪ್ರಯೋಗಶಾಲೆ ಎಂದು ಹೇಳಬಹುದು. ಗದಗಿಗೆ ಸಮೀಪ ಇರುವ ಹುಲಕೋಟಿಯಲ್ಲಿ ರೈತರು ಮತ್ತು ಕೃಷಿಗೆ ಸಂಬಂಧ ಪಟ್ಟಂತೆ ನೇರ ಸಂಪರ್ಕ ಕಲ್ಪಿಸುವ ಹಲವಾರು ಸಹಕಾರ ಸಂಸ್ಥೆಗಳು ಇಂದಿಗೂ ಕಾರ್ಯ ನಿರ್ವಹಿಸುತ್ತಿವೆ. ಈ ವ್ಯವಸ್ಥೆಗಳ ಹಿಂದಿನ ಪ್ರೇರಕಶಕ್ತಿ ಸಹಕಾರಿ ಭೀಷ್ಮ ಎಂದೇ ಪ್ರಸಿದ್ಧರಾಗಿದ್ದ ದಿ|| ಕೆ.ಎಚ್. ಪಾಟೀಲರು. ಅದರಂತೆ ಗದಗ-ಬೆಟಗೇರಿ ನಗರಪಾಲಿಕೆಯ ಬೆಟಗೇರಿಯಲ್ಲಿ ದಿನಾಂಕ ೧೯೦೫, ಅಕ್ಟೋಬರ್ ೧೮ರಂದು ಬಾಸೆಲ್ ಮಿಶನ್ ಕ್ರೈಸ್ತ ಮಿಶನರಿ ರೆವರೆಂಡ್ ಫಾದರ್ ರಿವಿಂಗ್‌ಟನ್‌ ಅವರಿಂದ ಸ್ಥಳೀಯ ನೇಕಾರರ ಅನುಕೂಲಕ್ಕೆ ಸ್ಪಂದಿಸಲು ಸಹಾಯಕವಾಗುವಂತೆ Urban Credit ಸಂಘವನ್ನು ನೋಂದಾಯಿಸಲಾಯಿತು. (ನಂತರ ಈ ಸಂಘ ಸಮಾಪನಗೊಂಡಿತು). ಕರ್ನಾಟಕದಲ್ಲಿ ಆರಂಭಗೊಂಡ ಇದು ಪ್ರಥಮ ವ್ಯವಸಾಯೇತರ (Non-Agricultural Credit) ಸಂಘ ಎಂದು ದಾಖಲೆಗಳಿಂದ ತಿಳಿದು ಬರುವುದು.

ಭಾರತದಲ್ಲಿ ಪ್ರಪ್ರಥಮ Urban Credit ಪರಿಕಲ್ಪನೆ ಆರಂಭವಾದದ್ದು ೧೮೮೯ರಲ್ಲಿ ಗುಜರಾತಿನ ಬರೋಡಾ ನಗರದಲ್ಲಿ ಆರಂಭವಾದ 'ಪರಸ್ಪರ ಸಹಕಾರ ಮಂಡಳಿ' (Mutual Aid Society) ಎಂಬ ಹೆಸರಿನಿಂದ ಆರಂಭವಾಯಿತು. ಅದರ ರೂವಾರಿ ವಿಠ್ಠಲಲಕ್ಷ್ಮಣ ಕವರೇಕರ. ಅದರಂತೆ ೧೯೦೪ರಲ್ಲಿ ಮದ್ರಾಸ ಪ್ರಾಂತ್ಯದ ಕಾಂಜೀವರಂನಲ್ಲಿ ಪಟ್ಟಣ ಸಹಕಾರಿ ಸೊಸೈಟಿ ನೊಂದಾಯಿಸಲ್ಪಟ್ಟಿತು ಎಂದು ದಾಖಲೆಗಳಿಂದ ತಿಳಿದುಬರುವುದು.

ಮೇಲಿನ ಸಹಕಾರ ಸಂಘಗಳು ಅಲ್ಲದೇ ಬೊಂಬಾಯಿ ಕರ್ನಾಟಕದಲ್ಲಿ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳದಲ್ಲಿ (೨೬-೧೦-೧೯೦೫), ಉ.ಕ. ಜಿಲ್ಲೆಯ ಶಿರಸಿಯಲ್ಲಿ (೨೦-೧೨-೧೯೦೫) ಬೆಲ್ಲದ ಬಾಗೇವಾಡಿ (ಬೆಳಗಾವಿ ಜಿಲ್ಲೆ)ಯಲ್ಲಿ (೩೦-೧೨-೧೯೦೫) ರಲ್ಲಿ ವ್ಯವಸಾಯೇತರ ಸಹಕಾರ ಸಂಘಗಳು ಆರಂಭಗೊಂಡವು. ಈ ಮೇಲಿನ ಎಲ್ಲಾ ಸಹಕಾರ ಸಂಘಗಳು ಇಂದಿಗೂ ಕಾರ್ಯ ನಿರ್ವಹಿಸುತ್ತಿವೆ. ಕರ್ನಾಟಕದ ಸಹಕಾರ ಚಳವಳಿಯ ಆರಂಭದ ವರ್ಷಗಳ ದಾಖಲೆಗಳನ್ನು ಪರಿಶೀಲಿಸಿದಲ್ಲಿ ಏಕೀಕೃತ ಕರ್ನಾಟಕ ವಿವಿಧ ಭಾಗಗಳಲ್ಲಿ ಕೊಡಗು ಸೇರಿದಂತೆ ೧೯೦೫-೧೯೧೫ರ ಒಂದು ದಶಕದ ಅವಧಿಯಲ್ಲಿ ಸಹಕಾರ ಚಳವಳಿಯ ವ್ಯಾಪಕತೆಯನ್ನು ಗುರುತಿಸಬಹುದು. ಆದರೆ ಆರಂಭಗೊಂಡ ಹಂತದ ಎಲ್ಲವೂ ಊರ್ಜಿತವಾಗಲಿಲ್ಲ. ಅದಕ್ಕೆ ಬೇರೆ ಬೇರೆ ಸಕಾರಣಗಳು ಉಂಟು.

### ಹಳೇ ಮೈಸೂರು ಸಂಸ್ಥಾನ

"ಮಾದರಿ ಮೈಸೂರು" ಎಂದೇ ಪ್ರಚಲಿತವಾಗಿದ್ದ ಸಂಸ್ಥಾನದಲ್ಲಿ ೧೯೦೫ರಲ್ಲಿ ಅಂದಿನ ದಿವಾನ ಪಿ.ಎನ್. ಕೃಷ್ಣಮೂರ್ತಿಯವರ ಕಾಲದಲ್ಲಿ (ದಿವಾನ್ ಪೂರ್ಣಯ್ಯನವರ ಮೊಮ್ಮಗ) Mysore Co-op Societies Regulation III ಕಾಯಿದೆಯನ್ನು ೧೯೦೫ರಲ್ಲಿ, ಜೂನ್ ೫ರಂದು ಜಾರಿಯಲ್ಲಿ ತರುವ ಮೂಲಕ ರಾಜ್ಯದಲ್ಲಿ ಸಹಕಾರ ಚಳುವಳಿಗೆ ಚಾಲನೆಯನ್ನು ನೀಡಲಾಯಿತು. ಮೈಸೂರು ಸಹಕಾರಿ ಅಧಿನಿಯಮವು ಭಾರತದ ಸಹಕಾರಿ ಕಾನೂನು ೧೯೦೪ಕ್ಕೆ ಹೋಲಿಸಿದರೆ 'ಮೈಸೂರು ಕಾನೂನು ಹೆಚ್ಚು ವ್ಯಾಪಕ ಮತ್ತು ವ್ಯವಸಾಯ ಪತ್ತಿನ ಸಂಘಗಳ ಜೊತೆ ಜೊತೆಯಲ್ಲಿ ನಗರ ಮತ್ತು ಅರೆನಗರ ಪ್ರದೇಶಗಳಲ್ಲಿ ವ್ಯವಸಾಯೇತರ, (Non agricultural) ಮತ್ತು ಸಾಲೇತರ (Non credit) ಸಂಘಗಳ ಆರಂಭಕ್ಕೆ ಅವಕಾಶ ಮಾಡಲಾಗಿತ್ತು. ಆದ್ದರಿಂದ ಗ್ರಾಮೀಣ ಪ್ರದೇಶದಲ್ಲಿ ವ್ಯವಸಾಯ ಸಾಲ ಸಂಘಗಳೊಂದಿಗೆ, ನಗರ, ಅರೆನಗರ ಪ್ರದೇಶದಲ್ಲಿ ಮಾರಾಟ, ಗೃಹನಿರ್ಮಾಣ, ಗ್ರಾಹಕರ, ನೇಕಾರರ ಮತ್ತು ಇತರೇ ಸಹಕಾರ ಸಂಘಗಳು ಆರಂಭಗೊಂಡವು. ೧೯೦೫ರಲ್ಲಿ ಚಿಕ್ಕಮಗಳೂರು ಜಿಲ್ಲೆಯ (ತರೀಕೆರೆ ತಾಲೂಕಿನ) ಕೂಡಲೂರು ಗ್ರಾಮದಲ್ಲಿ 'ಆದಿ ಕರ್ನಾಟಕ'ಜನಾಂಗದ ಆರ್ಥಿಕ, ಸಾಮಾಜಿಕ ಅಭಿವೃದ್ಧಿಗೆ ಸಹಾಯಕವಾಗುವಂತೆ ರಾಜ್ಯದಲ್ಲಿಯೇ ಪ್ರಥಮ ಎಂದು ಹೇಳಬಹುದಾದ ನಿಮ್ನವರ್ಗದವರ ಸಹಕಾರ ಸಂಘವನ್ನು ಆರಂಭಿಸಿದ್ದು ಉಲ್ಲೇಖನೀಯ. ಸರ್ಕಾರವು ಸಹಕಾರ ವ್ಯವಸ್ಥೆಯನ್ನು ಬಲಗೊಳಿಸುವಲ್ಲಿ ಸಕ್ರಿಯವಾಗಿತ್ತು. ಅಂತೆಯೇ ೧೯೦೬ರಲ್ಲಿ ಸಹಕಾರ ಇಲಾಖೆ ಮತ್ತು ಕೃಷಿ ಇಲಾಖೆಯನ್ನು ಆರಂಭಿಸಿತು.

ಸಹಕಾರ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಲು ಸಹಾಯಕವಾಗುವಂತೆ ೧೯೦೭ರಲ್ಲಿ ಇಂಗ್ಲೆಂಡ್ ಮತ್ತು ಯೂರೋಪಿನಲ್ಲಿ ಸಹಕಾರ ಚಳವಳಿಯ ಅಧ್ಯಯನ ಮತ್ತು ರಾಜ್ಯದಲ್ಲಿ ಅದರ ಅಳವಡಿಕೆ ಕುರಿತಂತೆ ಅಧ್ಯಯನ ಮಾಡಲು ಆರ್.ರಂಗರಾವ್ ಎಂಬ ಅಧಿಕಾರಿಯನ್ನು ನಿಯೋಜಿಸಲಾಯಿತು. ಇವರ ಹೆಸರನ್ನು ಶಂಕರಪುರಂನ ಒಂದು ರಸ್ತೆಗೆ ಇಡಲಾಗಿದೆ. ಮುಂಬರುವ ದಿನಗಳಲ್ಲಿ ಚಳವಳಿಯನ್ನು ಗ್ರಾಮೀಣ ಪ್ರದೇಶದಲ್ಲಿ ವ್ಯಾಪಕಗೊಳಿಸಲು ಮತ್ತು ಹೊಸದಾಗಿ ಸಂಘ ಸ್ಥಾಪನೆಗೆ ಮಾರ್ಗದರ್ಶನ ನೀಡಲು ಸಹಾಯಕವಾಗುವಂತೆ ೧೯೧೦ರಲ್ಲಿ ಕಂದಾಯ ಇಲಾಖೆಯ ನಿವೃತ್ತ ನೌಕರರ ಸೇವೆಯನ್ನು (ಗೌರವ ಸೂಪರ ವೈಜರ್) ಎಂದು ನೇಮಿಸಿಕೊಂಡು ದಿನದ ಸಹಕಾರಿ ಕೆಲಸಕ್ಕೆ ಒಂದು ರೂಪಾಯಿ ಗೌರವ ಸಂಭಾವನೆ ನೀಡಲಾಗುತ್ತಿತ್ತು.

ಮೈಸೂರು ಸಂಸ್ಥಾನದಲ್ಲಿ ೧೯೦೫-೦೬ರಲ್ಲಿ ಐದು ಸಹಕಾರ ಸಂಘಗಳು, ೩೬೨ ಜನ ಸದಸ್ಯರು, ರೂ.೧೧,೦೮೭ ಷೇರು ಬಂಡವಾಳ, ರೂ.೧೪,೨೪೩ ದುಡಿಯುವ ಬಂಡವಾಳವನ್ನು ಹೊಂದಿದ್ದವು ಎಂದು ಸಮಕಾಲೀನ ದಾಖಲೆಗಳಿಂದ ತಿಳಿದು ಬರುವುದು. ಬೆಂಗಳೂರು ಒಳಗೊಂಡಂತೆ ಮೈಸೂರು ಸಂಸ್ಥಾನದಲ್ಲಿ ಆರಂಭಗೊಂಡ ಪ್ರಥಮ ಸಹಕಾರ ಸಂಘ ಎಂದರೆ Bangalore City Consumer Society ಇದು ೮-೧೨-೧೯೦೫ರಂದು ಹೊಸ ತರಗು ಪೇಟೆಯಲ್ಲಿ (N.T. Pete) ಅಂದಿನ ಮೈಸೂರಿನ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಜಸ್ಟೀಸ್ ಕೆ.ಎಸ್. ಚಂದ್ರಶೇಖರ ಅಯ್ಯರ್ ಮತ್ತು ಅಂದಿನ ಸಹಕಾರ ಸಂಘಗಳ ರಿಜಿಸ್ಟ್ರಾರ್ ಆಗಿದ್ದ ಎಂ. ಶಾಮರಾವ ಅವರ ನಾಯಕತ್ವದಲ್ಲಿ ಕಾರ್ಯಾರಂಭ ಮಾಡಿತು. ೧೯೧೫ರಲ್ಲಿ ಬೆಂಗಳೂರಿನಲ್ಲಿ ರಾಜ್ಯವ್ಯಾಪ್ತಿಯ Mysore Provenrcial Co-op Bank ಸ್ಥಾಪಿಸುವ ಮೂಲಕ ಚಳವಳಿಗೆ ಆರ್ಥಿಕ ಭದ್ರತೆ ಒದಗಿಸಲಾಯಿತು. ಮುಂದೆ ೧೯೨೫ರಲ್ಲಿ ಇದೇ ಸಂಸ್ಥೆಯನ್ನು ಉನ್ನತಿಕರಿಸಿ State Co-op Apex Bank ರಚಿಸಲಾಯಿತು. ಸಂಸ್ಥಾನದಲ್ಲಿ ಅವಶ್ಯಕತೆಗೆ ಸ್ಪಂದಿಸಲು ಪೂರಕವಾಗುವಂತೆ ೧೯೦೫ ಕಾನೂನಿನ ಬದಲಿಗೆ ೧೯೧೮ರಲ್ಲಿ ಹೊಸ ಸಹಕಾರ ಕಾನೂನನ್ನು ಜಾರಿಯಲ್ಲಿ ತರಲಾಯಿತು. ಅದರ ಅನ್ವಯ ತಾಲ್ಲೂಕು ಮಟ್ಟದಲ್ಲಿ ಸಹಕಾರಿ ಯುನಿಯನ್, ಜಿಲ್ಲಾಮಟ್ಟದಲ್ಲಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳ ಆರಂಭಗೊಂಡವು. ಜಿಲ್ಲೆಗೆ ಒಂದರಂತೆ ಪ್ರತಿ ಜಿಲ್ಲೆಯಲ್ಲಿ ಸಹಕಾರ ಸಂಘಗಳ ಸಹಾಯಕ ರಿಜಿಸ್ಟ್ರಾರ್ (ARCS) ಕಛೇರಿಗಳು ಆರಂಭಗೊಂಡು ಪರಿಣಾಮಕಾರಿ ಆಡಳಿತ ಮತ್ತು ಸಮನ್ವಯಕ್ಕೆ ಅನುಕೂಲವಾಯಿತು. ಮುಂದುವರೆದು, ಕಮಿಶನರ್ ಆಳ್ವಿಕೆಯ ನಂತರದ ದಿವಾನರುಗಳ (೧೮೮೧-೧೯೪೮) ಆಳ್ವಿಕೆಯ ಕಾಲದಲ್ಲಿ ವಿಶೇಷವಾಗಿ ಸರ್ ಎಂ. ವಿಶ್ವೇಶ್ವರಯ್ಯ (೧೯೧೩-೧೯) ಮತ್ತು ನಂತರದ ಸರ್ ಮಿರ್ಜಾ ಇಸ್ಮಾಯಿಲ್ (೧೯೨೬-೧೯೪೧) ಅವರ ಆಳ್ವಿಕೆಯಲ್ಲಿ ಸಹಕಾರ ಚಳವಳಿಯ ವಿಸ್ತರಣೆಗೆ ಮತ್ತು ಚಳವಳಿಯ ಗುಣಾತ್ಮಕ ಬೆಳವಣಿಗೆಗೆ ಹೆಚ್ಚು ಒತ್ತು ನೀಡಲಾಯಿತು. ಸರ್ಕಾರಿ, ಖಾಸಗಿ ಮತ್ತು ಸಹಕಾರ ವಲಯಗಳನ್ನು ಪರಸ್ಪರ ಪೂರಕವಾಗಿ ಬೆಳೆಯಲು ಉತ್ತೇಜಿಸಲಾಯಿತು. ಮಿರ್ಜಾರವರ ಕಾಲದಲ್ಲಿ K.R.S. ಯೋಜನೆ ಪೂರ್ಣ (೧೯೩೨ರಲ್ಲಿ) ಪೂರ್ಣಗೊಂಡ ನಂತರ ಹೆಚ್ಚು ಹೆಚ್ಚು ಪ್ರದೇಶಗಳನ್ನು ನೀರಾವರಿಗೆ ಒಳಪಡಿಸಲಾಯಿತು. ಹೊಸದಾಗಿ ನೀರಾವರಿಗೆ ಒಳಪಟ್ಟ ಪ್ರದೇಶಗಳಲ್ಲಿ ಸಣ್ಣ ಸಣ್ಣ ಹಿಡುವಳಿಗಳನ್ನು ಆರ್ಥಿಕವಾಗಿ ಸಶಕ್ತಗೊಳಿಸಲು ಸಹಾಯಕವಾಗುವಂತೆ ಒಗ್ಗೂಡಿಸಿ ವ್ಯವಸಾಯ ಮಂಡಳಿ (Agricultural Board)ಗಳನ್ನು ರಚಿಸಿ ಸಹಕಾರಿ ಬೇಸಾಯ ಪದ್ಧತಿಯನ್ನು (Co-op Farming) ಪಂಜಾಬ ಮಾದರಿಯಲ್ಲಿ ಪ್ರಾಯೋಗಿಕವಾಗಿ ವಿಶೇಷವಾಗಿ 'ಆದಿ ಕರ್ನಾಟಕ' ಕುಟುಂಬಗಳಿಗಾಗಿ, ಸಹಕಾರಿ ವ್ಯವಸಾಯ ಕಾಲೋನಿಗಳನ್ನಾಗಿ ರಚಿಸಲಾಯಿತು ಮತ್ತು ಇವುಗಳಿಗೆ ಹಣಕಾಸಿನ ನೆರವು ಒದಗಿಸಲಾಯಿತು. ಇವರ ಕಾಲದಲ್ಲಿ ಮಾರಾಟ ಮತ್ತು ಪೂರೈಸುವ (Sales and supply) ವಿವಿಧ ಉದ್ದೇಶ ಸಹಕಾರ ಸಂಘಗಳನ್ನು ಆರಂಭಿಸಲಾಯಿತು.

ಕೃಷಿಗೆ ಸಂಬಂಧಪಟ್ಟಂತೆ ೧೯೨೮ರ ರಾಯಲ್ ಕಮಿಷನ್ ಶಿಫಾರಸ್ಸಿನಂತೆ ಜಮೀನಿನಲ್ಲಿ ಶಾಶ್ವತ ಅಭಿವೃದ್ಧಿಗೆ ದೀರ್ಘಕಾಲದ

ಹಣಕಾಸು ನೆರವು ನೀಡಲು ಸಹಾಯಕವಾಗುವಂತೆ ೧೯೨೯ರಲ್ಲಿ ಜಮೀನು ಅಡಮಾನು ಬ್ಯಾಂಕುಗಳನ್ನು ಪ್ರಾಯೋಗಿಕವಾಗಿ ಮಲೆನಾಡು ಪ್ರದೇಶದಲ್ಲಿ ಆರಂಭಿಸಿ ನಂತರ ಅವುಗಳನ್ನು ರಾಜ್ಯಾದ್ಯಂತ ಮುಂದುವರೆಸಲಾಯಿತು.

ಬೆಂಗಳೂರು ನಗರವು ದೇಶದಲ್ಲಿಯೇ ೧೯೦೯ರಲ್ಲಿ ಪ್ರಪ್ರಥಮ ಗೃಹ ನಿರ್ಮಾಣ ಸಹಕಾರ ಸಂಘವನ್ನು ಆರಂಭಿಸುವ ಮೂಲಕ ಗೃಹನಿರ್ಮಾಣ ಸಹಕಾರ ಸಂಘಗಳಲ್ಲಿ ರಾಷ್ಟ್ರದಲ್ಲಿಯೇ ಮೊದಲನೆಯದಾಗಿದೆ. ಈ ಸಂಘವು ಇಂದಿಗೂ ಎನ್.ಆರ್. ಕಾಲೋನಿಯಲ್ಲಿ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದೆ. ಮೈಸೂರು ಸರ್ಕಾರವು ಸಹಕಾರ ಚಳವಳಿಯನ್ನು ಪ್ರೋತ್ಸಾಹಿಸಲು ಸಹಾಯಕವಾಗುವಂತೆ ಸಹಕಾರ ಸಂಸ್ಥೆಗಳಿಗೆ ಉದಾರವಾದ ಆರ್ಥಿಕ ನೆರವನ್ನು ಠೇವಣಿಗಳ ಮೂಲಕ, ನಿರ್ವಹಣಾ ವೆಚ್ಚದ ಅನುದಾನ ನೀಡುವದು. ಸಹಕಾರದ ಬಗ್ಗೆ ಸದಸ್ಯರಿಗೆ ಸೂಕ್ತ ತರಬೇತಿ, ಶಿಕ್ಷಣ, ನಾಯಕತ್ವ ಮುಂತಾದವು, ಉಚಿತ ನಿವೇಶನ ಮಂಜೂರು ಮಾಡುವುದು ಮತ್ತು ರಾಜ್ಯಮಟ್ಟದ ಸಹಕಾರಿ ಶೃಂಗ (Apex) ಸಂಸ್ಥೆಗಳನ್ನು ಸ್ಥಾಪಿಸಲು ಸಹಾಯ ಹಸ್ತ ಅಲ್ಲದೇ ಪ್ರತಿವರ್ಷ "ದಸರಾ ದರಬಾರ" ಸಮಯದಲ್ಲಿ ರಾಜ್ಯಮಟ್ಟದ ಆಯ್ದ ಸಹಕಾರ ಸಂಸ್ಥೆಗಳಿಗೆ ಬಹುಮಾನ ನೀಡುವ ಮೂಲಕ ಗೌರವಿಸಲಾಗುತ್ತಿತ್ತು.

## ಪ್ರಥಮ ಮಹಿಳಾ ಸಹಕಾರ ಸಂಘ

ಮಹಿಳೆಯರ ಸಬಲೀಕರಣಕ್ಕೋಸರ ಅದರಲ್ಲಿಯೂ ಮೈಸೂರು ನಗರದಲ್ಲಿ ಮನೆಗೆಲಸದಲ್ಲಿ ತೊಡಗಿದ್ದ ಬೆರಣಿ ಮಾರಿ ಜೀವನ ನಡೆಸುತ್ತಿದ್ದ ಬಡ ಕುಟುಂಬದ ಮಹಿಳೆಯರಿಗೆ ಹಣದ ಸಹಾಯ ಮಾಡುವ ಉದ್ದೇಶದಿಂದ "ಆರ್ಯಭಗಿನಿ ಪರಸ್ಪರ ಸಹಕಾರ ಸಂಘವನ್ನು" ೧೯೨೯ರಲ್ಲಿ ೧೭ ಜನ ಮಹಿಳೆಯರಿಂದ ಆರಂಭಿಸಲಾಯಿತು. ಇದರ ರೂವಾರಿ ಸಹಕಾರ ಇಲಾಖೆಯ ನಿವೃತ್ತ ಅಧಿಕಾರಿ ಶ್ರೀನಿವಾಸರಾಯರು. ಈ ಸಂಘವನ್ನು ರಾಜ್ಯದ ಪ್ರಥಮ ಮಹಿಳಾ ಸಹಕಾರ ಸಂಘ ಎಂದು ಪರಿಗಣಿಸಲಾಗಿದೆ. ಇಂದು ಈ ಸಂಘವು ನಗರದ ಅತ್ಯಂತ ಪ್ರಮುಖವಾದ ಪ್ರತಿಷ್ಠಿತರಿಂದ ಕೂಡಿದ ಮಹಿಳಾ ಸಹಕಾರಿ ಸಂಸ್ಥೆಯಾಗಿದೆ. ಈ ಸಂಘವನ್ನು ೧೯೫೭ರಲ್ಲಿ ರಾಜ್ಯದಲ್ಲಿ ಮಹಿಳಾ ಸಂಘಗಳಲ್ಲಿ, ಉತ್ತಮ ಸಂಘವೆಂದು ಪರಿಗಣಿಸಿ ಸುವರ್ಣ ಪದಕ ನೀಡುವ ಮೂಲಕ ಸನ್ಮಾನಿಸಲಾಯಿತು. (ಇವು ಕೆಲವು ಆಯ್ದ ಉದಾಹರಣೆಗಳು). ರಾಜ್ಯದಲ್ಲಿ ಇಂದು ಸುಮಾರು ೧೩೪೭ಕ್ಕಿಂತ ಹೆಚ್ಚು ವಿವಿಧ ಮಹಿಳಾಸಂಘಗಳಿದ್ದು, ಆ ಪೈಕಿ ೧೦೬೩ ಕಾರ್ಯ ನಿರ್ವಹಿಸುತ್ತಿವೆ ಎಂದು ವರದಿಯಾಗಿವೆ.

ರಾಜ್ಯ ಪುನರ್ ರಚನೆಯ ನಂತರದ ದಶಕಗಳಲ್ಲಿ ಸಹಕಾರ ವಲಯವು ಸರ್ಕಾರಿ ಮತ್ತು ಖಾಸಗಿ ವಲಯದಂತೆ ಒಂದು ಪ್ರಮುಖ ಆರ್ಥಿಕ, ವಾಣಿಜ್ಯಕ ವಲಯವಾಗಿ ರೂಪುಗೊಂಡಿದ್ದು, ಸರ್ಕಾರವು ಪಾಲು ಬಂಡವಾಳ ಮತ್ತು ಇತರೇ ರೀತಿಯಲ್ಲಿ ಹಣಕಾಸಿನ ನೆರವು ನೀಡುವ ಮೂಲಕ ರಾಜ್ಯದಲ್ಲಿ ಸಹಕಾರ ವಲಯದಲ್ಲಿ ಅನೇಕ ಮಧ್ಯಮ ಮತ್ತು ದೊಡ್ಡ ಪ್ರಮಾಣದ ಕೈಗಾರಿಕೆಗಳು ವಿಶೇಷವಾಗಿ ನೂಲಿನ ಗಿರಣಿಗಳು, ಹೆಂಚು ತಯಾರಿಕೆ, ಸಕ್ಕರೆ ಕೈಗಾರಿಕೆಗಳು ಆಹಾರ ಮತ್ತು ಎಣ್ಣೆ ಸಂಸ್ಕರಣಾ ಘಟಕಗಳು ರಾಜ್ಯ ಮಟ್ಟದಲ್ಲಿ ಮತ್ತು ಹೊರ ರಾಜ್ಯಗಳಲ್ಲಿ ತಮ್ಮ ಚಟುವಟಿಕೆಗಳನ್ನು ವಿಸ್ತರಿಸಿಕೊಂಡಿರುವ ವಿಶೇಷ ಬೆಳೆಗಳ ತೆಂಗು ಅಡಿಕೆ ರಬ್ಬರ ಕೋಕೋ ಮಾರಾಟ ಸಂಘಗಳು, ಕೈಗಾರಿಕಾ ಬಡಾವಣೆಗಳು, ವ್ಯವಸಾಯ ಆಧಾರಿತ ಕೈಗಾರಿಕೆಗಳು, ಬಟ್ಟೆ ಗಿರಣಿಗಳು ಈ ವಲಯದಲ್ಲಿ ಆರಂಭ ಗೊಂಡಿವೆ. ಹಿಂದುಳಿದವರ, ಅಸಂಘಟಿತರ, ಅಭಿವೃದ್ಧಿಗೆ ಸಹಾಯಕವಾಗುವಂತೆ ವಿಶೇಷವಾಗಿ ಹರಿಜನರು, ಗಿರಿಜನರು, ಆದಿವಾಸಿಗಳು, ಮುಂತಾದವರು ಸಹಕಾರ ಸಂಘಗಳ ಸದಸ್ಯತ್ವವನ್ನು ಪಡೆಯಲು ಆಯಾ ವರ್ಗದ ಜನರಿಗೆ ಸದಸ್ಯತ್ವದ ಶುಲ್ಕ ಅಲ್ಲದೇ ಈ ಸಂಘಗಳಿಗೆ ಆಡಳಿತ ನಡೆಸಲು ಸರ್ಕಾರ ಸಹಾಯಧನ ನೀಡುತ್ತಿದೆ ಮತ್ತು ಪಾಲು ಬಂಡವಾಳವನ್ನು ಒದಗಿಸುತ್ತದೆ.

## ಸಹಕಾರ ಸ್ಪಂದನ

ಸಹಕಾರ ಚಳವಳಿಯು ಇಂದಿಗೂ ಪ್ರಸ್ತುತವಾಗಿರುವುದು ಕಾರಣ ಆರಂಭದಿಂದಲೂ ಇದು ಜನಪರ ಸ್ನೇಹಿ ವ್ಯವಸ್ಥೆಯಾಗಿದ್ದು, ಜನಸಾಮಾನ್ಯರು ತಮ್ಮ ದಿನನಿತ್ಯದ ಅವಶ್ಯಕತೆಗಳನ್ನು ಪೂರೈಸಲು ಅವರದೇ ಆದ ಸಂಘವನ್ನು ರಚಿಸಿಕೊಂಡು ಆ ಮೂಲಕ ಅನುಕೂಲಗಳನ್ನು ಪಡೆದಿರುವರು. ಈ ವ್ಯವಸ್ಥೆಯು ಒಂದು ಅರ್ಥದಲ್ಲಿ ಉಳ್ಳವರ ಮತ್ತು ಇಲ್ಲದವರ (haves and have nots) ಮಧ್ಯದ ಘರ್ಷಣೆರಹಿತ, ಸ್ವಯಂ ಪ್ರೇರಣೆಯಿಂದ ಸಾಮೂಹಿಕ ಹೊಣೆಗಾರಿಕೆಯ ಮೇಲೆ ರಚಿಸಿಕೊಂಡ ಕಾನೂನಿನ ಚೌಕಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ವ್ಯವಸ್ಥೆಯಾಗಿರುವುದು.

ಕರ್ನಾಟಕದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ೧೯೨೦-೧೯೩೦ರ ದಶಕದಲ್ಲಿ ರಾಜ್ಯದ ಮಲೆನಾಡಿನ ಅರಣ್ಯ ವ್ಯಾಪ್ತಿ ಪ್ರದೇಶದಲ್ಲಿ ಸಹಕಾರ ಸಂಘಗಳ ಮೂಲಕ ಸಾಮೂಹಿಕವಾಗಿ ಗದ್ದೆಗಳಿಗೆ ಬೇಲಿ ಹಾಕುವ (Fencing), ಒಡ್ಡು ಹಾಕುವ (bunding) ಮತ್ತು ಕಾಡುಮಿಕಗಳನ್ನು ಬೇಟೆಯಾಡಿ ಬೆಳೆಗಳನ್ನು ರಕ್ಷಿಸುವದು ಮುಂತಾದ ಕೆಲಸ ಕಾರ್ಯಗಳನ್ನು ಸಹಕಾರ ಸಂಘಗಳನ್ನು ರಚಿಸಿಕೊಳ್ಳುವ ಮೂಲಕ ಮಾಡಲಾಯಿತು. ಮಲೆನಾಡು ಪ್ರದೇಶದಲ್ಲಿ ವಿಶೇಷವಾಗಿ ಕೋತಿಗಳು, ಕಾಡುಹಂದಿ, ಕಾಡು ಕೋಣ ಮುಂತಾದವುಗಳ ಬೇಟೆಯಾಡಿ ಅವುಗಳ ಬಾಲವನ್ನು ತಂದು ತೋರಿಸಿದರೆ. ಪ್ರತಿ ಬಾಲಕ್ಕೆ ಒಂದು ರೂಪಾಯಿಯಂತೆ ಬೇಟೆಗಾರರಿಗೆ ನೀಡಲಾಗುತ್ತಿತ್ತು. ಧಾರವಾಡ ಜಿಲ್ಲೆಯಲ್ಲಿ ವ್ಯವಸಾಯ ಉಪಯೋಗಿ ವಿವಿಧ ಸಲಕರಣೆಗಳ ತಯಾರಿಕೆಗೆ ಸಹಕಾರ ಸಂಸ್ಥೆಗಳು ಆರಂಭಿಸಲ್ಪಟ್ಟವು. ಸ್ವಾತಂತ್ರ್ಯ ಪೂರ್ವದಲ್ಲಿಯೇ ಕೋಳಿಸಾಕಣೆ, ಕುರಿಸಾಕಣೆ, ಬೆಳೆವಿಮೆ, ಹಾಲು ಉತ್ಪಾದನೆ, ಮೀನುಗಾರಿಕೆ, ಮಾರಾಟ, ವಿವಿಧ ನೇಯ್ಗೆ ಉದ್ಯೋಗಗಳು ಮುಂತಾದವುಗಳ ಸಹಕಾರ ವಲಯದಲ್ಲಿ ಆರಂಭಗೊಂಡಿದ್ದವು. ಇವು ಕೇವಲ ಆಯ್ದ ಉದಾಹರಣೆಗಳು.

ಧಾರವಾಡ ವಿಭಾಗದಲ್ಲಿ ರಾಜ್ಯ ಪುನರ್ ರಚನೆಗೆ ಪೂರ್ವದಲ್ಲಿ ಗ್ರಾಮೀಣ ಸಮುದಾಯಗಳಲ್ಲಿ ಸಹಕಾರ ತತ್ವ ಸಿದ್ಧಾಂತ ಮುಂತಾದವುಗಳನ್ನು ಪ್ರಚುರಪಡಿಸಲು ಸಹಾಯಕವಾಗುವಂತೆ "ಸಹಕಾರ ನಾಟಕ ಮಂಡಳಿ"ಗಳನ್ನು ಆರಂಭಿಸಲಾಗಿತ್ತು. ಅದರಂತೆ ಅದೇ ಭಾಗದಲ್ಲಿ ೧೯೨೦-೩೦ರ ದಶಕದಲ್ಲಿ ಸಹಕಾರ ವಲಯದಲ್ಲಿ "ಹೆಚ್ಚು ಆಹಾರ ಧಾನ್ಯ ಬೆಳೆಯಿರಿ" ಸಂಘಗಳು ಆರಂಭಗೊಂಡವು. ಅವುಗಳ ಉದ್ದೇಶ ರೈತರು ಹೆಚ್ಚು ಹೆಚ್ಚು ಆಹಾರ ಧಾನ್ಯ ಬೆಳೆಯಲು ಬೇಕಾದ ಸಹಾಯ ಸೌಲಭ್ಯ ಒದಗಿಸುವುದು ಆಗಿತ್ತು.

ಇಂದು ಹುಬ್ಬಳ್ಳಿ ನಗರದ ಪ್ರತಿಷ್ಠಿತ City Co-op Bank ಅನ್ನು ೧೯೦೬ರಲ್ಲಿ ನಗರಸಭೆಯ ನೌಕರರು, ಸಫಾಯಿ ಕರ್ಮಚಾರಿಗಳು

(ಭಂಗಿಗಳನ್ನು), ಪಠಾಣರ ಸಾಲದಿಂದ ಮುಕ್ತ ಮಾಡಲು ಅಂದು ನಗರಸಭಾ ಸದಸ್ಯರಾಗಿದ್ದ ರಾ.ಬ.ವಾಳ್ವೇಕರ್ ಕೃಷ್ಣರಾಯರು ಆರಂಭಿಸಿದರು. ೧೯೨೯-೩೦ರ ಜಾಗತಿಕ ಆರ್ಥಿಕ ಹಿನ್ನಲೆಯಲ್ಲಿ ಸಹಕಾರ ಬ್ಯಾಂಕುಗಳು ವಿಶೇಷವಾಗಿ ಕೊಡಗು ಮತ್ತು ಉತ್ತರಕನ್ನಡ ಜಿಲ್ಲೆಯಲ್ಲಿ ತೋಟದ ಬೆಳೆಗಾರರ ಸಾಲವನ್ನು ವಹಿಸಿಕೊಂಡು ಅವರ ಆಸ್ತಿ ಸಾಲಕ್ಕೆ ಮಾರಾಟವಾಗುವದನ್ನು ತಪ್ಪಿಸಿ ಪುನಃ ಸಾಲಗಾರರು ಅವರ ಆಸ್ತಿಯನ್ನು ಮರಳಿ ಪಡೆಯುವಲ್ಲಿ ಸಹಾಯಕವಾಗಿದೆ.

ಕೊಡಗು ಜಿಲ್ಲೆಯಲ್ಲಿ ೧೯೨೦ರ ಸುಮಾರಿಗೆ ವಿಶೇಷವಾದ ದೇಶದಲ್ಲಿಯೇ ಪ್ರಪ್ರಥಮ ಎಂದು ಹೇಳಲಾಗುವ, ಎಲ್ಲ ವ್ಯವಹಾರ ವನ್ನು ಧಾನ್ಯ ರೂಪದಲ್ಲಿ (Grains (paddy)) ನಿರ್ವಹಿಸುವ, ದವಸ ಬ್ಯಾಂಕುಗಳು Grain Banks ಆರಂಭಗೊಂಡವು. ಈ ಸಂಸ್ಥೆಗಳು ಹಣದ ಬದಲಾಗಿ ಕೇವಲ ಧಾನ್ಯದ ರೂಪದಲ್ಲಿ, ಕಾರ್ಯ ನಿರ್ವಹಿಸುತ್ತಿವೆ. ಮತ್ತು ತಮ್ಮ ಲೆಕ್ಕಪತ್ರಗಳನ್ನು ಸಹ ಇಂದಿಗೂ ಧಾನ್ಯರೂಪದಲ್ಲಿ ನಮೂದಿಸುತ್ತಿವೆ. ಇವು ಬಡರೈತರಿಗೆ ಬ್ಯಾಂಕುಗಳಂತೆ, ಸಂಕಷ್ಟದಲ್ಲಿ ವಿಮೆ (Insurance) ಕಂಪನಿಯಂತೆ ಸಹಾಯಕವಾಗಿವೆ. ಇಂದಿಗೂ ಕೊಡಗು ಜಿಲ್ಲೆಯಲ್ಲಿ ಇವು ಅಸ್ತಿತ್ವದಲ್ಲಿ ಇರುವುವು. ಇವು ಒಂದು ರೀತಿಯಲ್ಲಿ ವಿಶೇಷ ಸಹಕಾರ ಸಂಘಗಳು.

೧೯೭೫-೭೭ರ ರಾಷ್ಟ್ರೀಯ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ (National Emergency) ವಿಶೇಷ ಸಹಕಾರ ಸಂಸ್ಥೆಗಳು 'ಗರೀಬಿ ಹಟಾವೋ' ಸಹಕಾರ ಸಂಘಗಳು ಉದಯಿಸಿದವು. ಇತ್ತೀಚೆಗೆ ಮಹಾನಗರಗಳಲ್ಲಿ ಸರ್ಕಾರವು ಅಸಂಘಟಿತ ವಲಯದ ಅತೀ ಸಣ್ಣ, ಸಣ್ಣ, ವರ್ತಕರು ಅಂದರೆ ಬೀದಿ ಮಾರಾಟಗಾರರು, ತಳ್ಳುಗಾಡಿ ಮಾರಾಟಗಾರರು, ಪಾದಚಾರಿ ಮಾರ್ಗದಲ್ಲಿ ವ್ಯಾಪಾರ ಮಾಡುವವರು, ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವ್ಯಾಪಾರಕ್ಕೆ ಅಲೆಯುವವರು ಮುಂತಾದವರು. ತಮ್ಮದೇ ಆದ ಸಹಕಾರ ಸಂಘ ರಚಿಸಿಕೊಳ್ಳಲು ಸಹಾಯ ಮಾಡುತ್ತಿದೆ. ಇತ್ತೀಚೆಗೆ ನೀರಾವರಿ ಪ್ರದೇಶಗಳಲ್ಲಿ ನೀರಾವರಿ ಸೌಲಭ್ಯ ಪಡೆಯುವ ರೈತರು ತಮ್ಮದೇ ನೀರು ಬಳಕೆದಾರರು, ಮರ ಬೆಳೆಸುವವರು, ಹೆಂಡ ಇಳಿಸುವವರು, ಕೂಲಿಕಾರರು, ಹಮಾಲರು, ತಮ್ಮದೇ ಆದ ಸಹಕಾರ ಸಂಘಗಳನ್ನು ರಚಿಸಿಕೊಂಡಿದ್ದಾರೆ, ಅಲ್ಲದೇ ಸಮಾಜದಲ್ಲಿ ಶೋಷಣೆಗೆ ಒಳಗಾದ ದೇವದಾಸಿ ಮಹಿಳೆಯರು; ನಿತ್ಯಸುಮಂಗಲಿಯರು, ತೃತೀಯ ಲಿಂಗಿಗಳು (Transgender), ಮುಂತಾದ ವಿಶೇಷ ಶೋಷಿತರು ಸಹಕಾರ ಸಂಘಗಳ ಮೂಲಕ ಸಮರ್ಥರಾಗಿರುವರು. ಈ ದಿಶೆಯಲ್ಲಿ ಸಹಕಾರ ವಲಯವು ಇನ್ನು ಹೆಚ್ಚಿನ ಕಾರ್ಯಕ್ಷಮತೆಯನ್ನು ತೋರಿಸಬೇಕಾಗಿದೆ.

**ಕರ್ನಾಟಕದ ವಿಶೇಷತೆ**

ಕರ್ನಾಟಕವು ಕೆಲವು ವಿಶೇಷ ಸಹಕಾರಿ ಸಂಘಗಳನ್ನು ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಪ್ರಪ್ರಥಮವಾಗಿ ಆರಂಭಿಸುವ ಮೂಲಕ, ರಾಷ್ಟ್ರೀಯ ಸಹಕಾರ ನಕ್ಷೆಯಲ್ಲಿ ಒಂದು ವಿಶೇಷ ಸ್ಥಾನವನ್ನು ಹೊಂದಿರುವುದು. ಈ ಕುರಿತಂತೆ ಕೆಲವು ಸಂಘಗಳನ್ನು ಪರಿಚಯಿಸುವದಾದರೆ, ಹುಬ್ಬಳ್ಳಿಯಲ್ಲಿ ೧೯೧೫ರಲ್ಲಿ ಆರಂಭವಾದ ಇಂದಿಗೂ ಸಕ್ರಿಯವಾಗಿರುವ ಹತ್ತಿ ಮಾರಾಟ ಸಹಕಾರ ಸಂಘ (Cotton Sales Society) ರಾಷ್ಟ್ರದಲ್ಲಿಯೇ ಮೊದಲನೆಯದು. ೧೯೧೯ರಲ್ಲಿ ಗದಗ ಸಮೀಪದ ಹುಲಕೋಟಿಯಲ್ಲಿ ಯುನಿಯನ್ ಸೊಸಾಯಿಟಿಯಿಂದ ಆರಂಭವಾದ ಆಂಗ್ಲೋ ವರ್ನಾಕುಲರ (A.V.School) ಶಿಕ್ಷಣ ಸಂಸ್ಥೆ ರಾಜ್ಯದ ಪ್ರಥಮ ಸಹಕಾರ ವಲಯದ ಶಿಕ್ಷಣ ಸಂಸ್ಥೆಯಾಗಿದೆ. ಬೆಳಗಾವಿ ಜಿಲ್ಲೆಯ ಹುಕ್ಕೇರಿಯಲ್ಲಿ ೧೯೬೯ರಲ್ಲಿ ಆರಂಭಗೊಂಡ ಗ್ರಾಮೀಣ ವಿದ್ಯುದ್ದೀಕರಣ ಸಂಘವು ರಾಜ್ಯದಲ್ಲಿಯೇ ಪ್ರಪ್ರಥಮವಾಗಿದ್ದು ಇದು ಮಿನಿ ಕೆ.ಈ.ಬಿ. (KEB) ಯಂತೆ ಕಾರ್ಯ ನಿರ್ವಹಿಸುತ್ತಿದೆ. ಇದೇ ಜಿಲ್ಲೆಯ ರಾಮದುರ್ಗ ಬಳಿಯ ಚಂದರಗಿಯಲ್ಲಿ ೧೯೮೪ರಲ್ಲಿ ಆರಂಭಗೊಂಡ ಕ್ರೀಡಾ ಉತ್ತೇಜಕ (Sports Promotion) ವಸತಿ ಶಿಕ್ಷಣ ಸಂಸ್ಥೆಯು ರಾಷ್ಟ್ರಮಟ್ಟದ ಸಂಸ್ಥೆಯಾಗಿದೆ. ಬೆಳಗಾವಿ ಜಿಲ್ಲೆಯ ಗೋಕಾಕ ಸಮೀಪದ ಘಟಪ್ರಭದಲ್ಲಿ ೧೯೫೧ರಲ್ಲಿ ಆರಂಭವಾದ ಗುರುಸಿದ್ದೇಶ್ವರ ಸಹಕಾರಿ ಆಸ್ಪತ್ರೆ ಈ ವಲಯದ ಪ್ರಪ್ರಥಮ ಆರೋಗ್ಯ ಸೇವೆ ಒದಗಿಸುವ ಸಹಕಾರಿ ಸಂಸ್ಥೆಯಾಗಿದೆ.

೧೯೮೪ರಲ್ಲಿ ಆರಂಭಗೊಂಡ ಕರ್ನಾಟಕ ರಾಜ್ಯ ಹಾಲು ಉತ್ಪಾದಕರ ಸಹಕಾರ ಮಹಾಮಂಡಳ ಇಂದು ರಾಜ್ಯದಲ್ಲಿ ಕ್ಷೀರ ಕ್ರಾಂತಿಯನ್ನು ನನಸಾಗಿಸಿದ ರಾಷ್ಟ್ರಮಟ್ಟದ ಪ್ರಮುಖ ಸಂಸ್ಥೆಯಾಗಿದೆ. ಹಾಲು ಉತ್ಪಾದನೆಯಲ್ಲಿ ಈ ಸಂಸ್ಥೆಯು ರಾಷ್ಟ್ರಮಟ್ಟದಲ್ಲಿ ಎರಡನೆಯ ದೊಡ್ಡ ಸಂಸ್ಥೆಯಾಗಿದ್ದು, ದಕ್ಷಿಣ ಭಾರತದಲ್ಲಿ ಮೊದಲನೆಯದಾಗಿದೆ.

ಸಹಕಾರ ಸಾರಿಗೆ ಸಂಸ್ಥೆ ಕೊಪ್ಪ, (ಚಿಕ್ಕಮಗಳೂರು ಜಿಲ್ಲೆ) ಇದು ಭಾರತದಲ್ಲಿ ನೌಕರರಿಂದಲೇ ನಡೆಸಲ್ಪಡುತ್ತಿರುವ ಏಕೈಕ ಸಹಕಾರ ಸಂಸ್ಥೆ. ಇಲ್ಲಿ ನೌಕರರೇ ಮಾಲೀಕರು. ಈ ಸಂಸ್ಥೆ ೧೯೯೧ರಲ್ಲಿ ರಚನೆಯಾಗಿದೆ. ಈ ಸಂಸ್ಥೆಯಲ್ಲಿ ಸುಮಾರು ೧೩೦ ನೌಕರರು ಇದ್ದು ಇದು ೬೫ ಬಸ್ಸುಗಳನ್ನು ಹೊಂದಿರುವುದು ಎಂದು ತಿಳಿದು ಬರುವದು. ಮಲೆನಾಡು ಪ್ರದೇಶದಲ್ಲಿ ಈ ಸಂಸ್ಥೆ ಉತ್ತಮ ಸಂಚಾರ ಸೌಲಭ್ಯಗಳನ್ನು ಒದಗಿಸುವ ಮೂಲಕ ಜನಪ್ರಿಯವಾಗಿದೆ.

ಪಟ್ಟಣ ಸಹಕಾರ ಬ್ಯಾಂಕುಗಳನ್ನು (Urban Co-op Banks) ದೊಡ್ಡ ಪ್ರಮಾಣದಲ್ಲಿ ಹೊಂದಿರುವ ರಾಜ್ಯಗಳಲ್ಲಿ ಮತ್ತು ಈ ವಲಯದ ಪ್ರಗತಿಯಲ್ಲಿ ರಾಜ್ಯವು ಗುಜರಾತ್, ಮಹಾರಾಷ್ಟ್ರದ ನಂತರದ ಮೂರನೆಯ ಸ್ಥಾನದಲ್ಲಿ ಇರುವುದು. ಆದರೆ ರಾಜ್ಯಮಟ್ಟದ ಅರ್ಬನ್ ಬ್ಯಾಂಕುಗಳ ಮಹಾಮಂಡಳ (Federation) ರಚಿಸಿಗೊಂಡ ದೇಶದ ಮೊದಲನೆಯ ರಾಜ್ಯವಾಗಿದೆ (೧೯೬೫). ೨೦೧೫ರಲ್ಲಿ ರಾಜ್ಯದಲ್ಲಿ ೨೭೨ ಪಟ್ಟಣ ಸಹಕಾರಿ ಬ್ಯಾಂಕುಗಳು ಇದ್ದು, ಆ ಪೈಕಿ ೫೩ ಬೆಂಗಳೂರು ನಗರದಲ್ಲಿವೆ. ಆ ಪೈಕಿ ೪ ಮಹಿಳಾ ಪಟ್ಟಣ ಸಹಕಾರಿ ಬ್ಯಾಂಕ್‌ಗಳಿದ್ದವು. ೨೦೧೭ರಲ್ಲಿ ೧೦ ಬ್ಯಾಂಕ್‌ಗಳ ಠೇವಣಿ ರೂ. ೩೦೦ ಕೋಟಿ ಗಳಿಗೆ ಹೆಚ್ಚಿದ್ದು ಆ ಪೈಕಿ ೬ ಬೆಂಗಳೂರು ನಗರದಲ್ಲಿವೆ. ರಾಜ್ಯದಲ್ಲಿ ೧೪ ಬ್ಯಾಂಕ್‌ಗಳು ಶತಮಾನದ ಸೇವೆ ಪೂರೈಸಿವೆ.

ರಾಜ್ಯ ಸರ್ಕಾರವು ೧೯೭೬-೭೭ರಲ್ಲಿ ಆರ್ಥಿಕವಾಗಿ ಸಬಲವಲ್ಲದ ಬಹುಪಾಲು ಪ್ರಾಥಮಿಕ ಸಹಕಾರ ಸಂಘಗಳನ್ನು ನೇಕಾರರ ಸಹಕಾರ ಸಂಘಗಳನ್ನು ಇತರೇ ದುರ್ಬಲ ಮತ್ತು ಸ್ಥಗಿತ ಸಂಘಗಳನ್ನು ದೊಡ್ಡ ಪ್ರಮಾಣದಲ್ಲಿ ವಿಲೀನಗೊಳಿಸಲಾಯಿತು ಇಲ್ಲವೇ ಸಬಲಗೊಳಿಸಲಾಯಿತು. ಈ ಪ್ರಕ್ರಿಯೆಯಿಂದ ಪ್ರಾಥಮಿಕ ಸಹಕಾರ ಸಂಘಗಳ ಸಂಖ್ಯೆ ಗಣನೀಯವಾಗಿ ಕಡಿಮೆ ಆಯಿತು. ಆದರೆ ಈ ಸಂಸ್ಥೆಗಳು ಸುಭದ್ರವಾದ ಆರ್ಥಿಕ ಬುನಾದಿಯ ಮೇಲೆ ನಿಲ್ಲಲು ಸಹಾಯಕವಾಯಿತು. ರಾಜ್ಯದ ಸಹಕಾರ ವಲಯದ

ಪ್ರಾಮುಖ್ಯತೆಯನ್ನು ಗಮನಿಸಿ ೧೯೬೨ರಲ್ಲಿ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯನ್ನು Regional Co-op Management Institute ಬೆಂಗಳೂರಿನಲ್ಲಿ ಆರಂಭಿಸಲಾಯಿತು. ಮುಂದೆ ೧೯೯೦ರಲ್ಲಿ ಬ್ಯಾಂಕಿಂಗ್ ಮತ್ತು ಸಹಕಾರ ವಲಯದ ಸಿಬ್ಬಂದಿಗಳಿಗೆ ತರಬೇತಿಗೆ ಅನುಕೂಲವಾಗುವಂತೆ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ತರಬೇತಿ (National Agricultural and Rural Development Training Institute) ಸಂಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಯಿತು (ಪದ್ಮನಾಭನಗರ).

### ಕರ್ನಾಟಕ ಸಹಕಾರ ಕಾನೂನು ೧೯೫೯

ರಾಜ್ಯ ಪುನರ್ ರಚನೆಯ ಪೂರ್ವದಲ್ಲಿ (೧೯೫೬) ವಿಲೀನಗೊಂಡ ಪ್ರದೇಶಗಳಲ್ಲಿ, ಐದು ಬೇರೆ ಬೇರೆ ಪ್ರತ್ಯೇಕವಾದ ಸಹಕಾರಿ, ಕಾನೂನು ಮತ್ತು ನಿಯಮಗಳು ಜಾರಿಯಲ್ಲಿ ಇದ್ದವು ಮತ್ತು ಸಹಕಾರದ ಒಟ್ಟಾರೆ ಬೆಳವಣಿಗೆ ಸಮರ್ಪಕವಾಗಿರಲಿಲ್ಲ. ಆಯಾ ಪ್ರದೇಶಗಳಲ್ಲಿ ಬೇರೆ ಬೇರೆ ವಿವಿಧ ಸಹಕಾರ ಸಂಸ್ಥೆಗಳು ಕೇಂದ್ರೀಕೃತವಾಗಿದ್ದವು. ಇದನ್ನು ಸರಿಪಡಿಸಲು ಸಹಾಯಕವಾಗುವಂತೆ ಇಡೀ ರಾಜ್ಯಕ್ಕೆ ಅನ್ವಯವಾಗುವ ಸಮಗ್ರ, ಸಂಪೂರ್ಣ, ಏಕೀಕೃತ ಸಹಕಾರ ಕಾನೂನು ೧೯೫೯ರನ್ನು ಜಾರಿಯಲ್ಲಿ ತರಲಾಯಿತು. ಮುಂದಿನ ವರ್ಷ ೧೯೬೦ ಸಮಗ್ರವಾದ ನಿಯಮಾವಳಿಗಳನ್ನು (Rules) ಜಾರಿಯಲ್ಲಿ ತರಲಾಯಿತು. ಸದ್ಯದ ಸಹಕಾರ ಕಾನೂನು ಇದುವರೆಗೂ ಸಾಕಷ್ಟು ಸಾರಿ (ಸುಮಾರು ೨೪) ಅವಶ್ಯಕತೆಗೆ ತಕ್ಕಂತೆ ತಿದ್ದುಪಡಿಗೆ ಒಳಪಟ್ಟಿದೆ. ಅತ್ಯಂತ ಮಹತ್ವದ ತಿದ್ದುಪಡಿಗಳನ್ನು ೧೯೭೦, ೧೯೭೬, ೧೯೮೪, ೧೯೯೮ರಲ್ಲಿ ಅಳವಡಿಸಲಾಯಿತು. ಸಹಕಾರ ಇಲಾಖೆಯು ಇತ್ತೀಚಿನ ಕರ್ನಾಟಕ ಸೌಹಾರ್ದ ಸಹಕಾರ ಕಾನೂನು ೨೦೦೧ ಒಳಗೊಂಡಂತೆ ೧೦ ವಿವಿಧ ಕಾನೂನು ಮತ್ತು ಅವುಗಳಿಗೆ ಸಂಬಂಧಪಟ್ಟ ನಿಯಮಾವಳಿಗಳನ್ನು ಜಾರಿಯಲ್ಲಿ ತರುವ ಅಧಿಕಾರದತ್ತವಾಗಿರುವುದು.

### ಕರ್ನಾಟಕ ಸೌಹಾರ್ದ ಸಹಕಾರ ಕಾನೂನು ೨೦೦೧

ಸಹಕಾರ ಚಳವಳಿಯ ಪ್ರಾರಂಭದಿಂದಲೂ ಬಹು ಚರ್ಚಿತ ವಿಷಯವಾಗಿರುವ ಸರ್ಕಾರದ ಅತಿಯಾದ ಹಸ್ತಕ್ಷೇಪ, ಆಡಳಿತ ಮಂಡಳಿಯ ಮೇಲಿನ ಸರ್ಕಾರದ ನಿಯಂತ್ರಣ, ಸದಸ್ಯರ ನಾಮಕರಣ, ಸಂಘಗಳನ್ನು ಸ್ವಯಂ ಹಿತಾಸಕ್ತಿಗೆ ಸೂಪರಸೀಡ್ ಮಾಡುವುದು, ರದ್ದು ಮಾಡುವುದು ಇನ್ನು ಮುಂತಾದ ಸರ್ಕಾರದ ಅನವಶ್ಯಕ ಸ್ವಹಿತಾಸಕ್ತಿಯ ಕ್ರಮಗಳು ಸಹಕಾರದ ಮುಕ್ತ ಬೆಳವಣಿಗೆಗೆ ಅಡಚಣೆಯನ್ನು ಮಾಡುತ್ತಿದ್ದ ಅನಪೇಕ್ಷಿತ, ಅನವಶ್ಯಕ ಚಟುವಟಿಕೆಗಳನ್ನು ನಿಯಂತ್ರಿಸುವ ಮೂಲಕ, ಸಹಕಾರ ವ್ಯವಸ್ಥೆಯ ಮುಕ್ತ ಬೆಳವಣಿಗೆ, ಸ್ವಾಯತ್ತತೆ, ಸ್ವಂತಿಕೆಯಿಂದ ಕಾರ್ಯನಿರ್ವಹಿಸಲು ಸಹಾಯಕವಾಗುವಂತೆ ಕೇಂದ್ರ ಸರ್ಕಾರವು "ಸೌಹಾರ್ದ ಸಹಕಾರಿ" ಎಂಬ ಮಾದರಿ ಕಾನೂನನ್ನು ೧೯೯೭ರಲ್ಲಿ ರೂಪಿಸಿತು. ಭಾರತದಲ್ಲಿ ಅನೇಕ ರಾಜ್ಯಗಳು ಈ ಮಾದರಿ ಕಾಯಿದೆಯನ್ನು ಒಪ್ಪಿ ಅವರವರ ರಾಜ್ಯದಲ್ಲಿ ಸೂಕ್ತ ಬದಲಾವಣೆಯೊಂದಿಗೆ ಜಾರಿಯಲ್ಲಿ ತಂದವು. ಕರ್ನಾಟಕ ಸರ್ಕಾರವೂ ಸಹ ಸೌಹಾರ್ದ ಕಾಯಿದೆಯನ್ನು ೨೦೦೧ ಜನವರಿಯಿಂದ ಜಾರಿಯಲ್ಲಿ ತಂದಿರುವದು. ಈ ಕಾನೂನಿಗೆ (Rules) ನಿಯಮಾವಳಿಗಳನ್ನು ೨೦೦೪ರಲ್ಲಿ ತರಲಾಗಿದ್ದು ೨೦೧೫ರಲ್ಲಿ ಕೆಲವು ತಿದ್ದುಪಡಿಗಳನ್ನು ಅಳವಡಿಸಲಾಗಿದೆ.

ಈ ಕಾಯಿದೆಯು ೧೯೫೯ರ ಕಾಯಿದೆಗೆ ಪರ್ಯಾಯವಾಗಿದ್ದು, ಸದ್ಯ ಎರಡೂ ಅಧಿನಿಯಮಗಳೂ ಪ್ರಚಲಿತ ಇರುವುವು. ಹಳೆಯ ಕಾನೂನಿನ ಅನ್ವಯ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಸ್ಥೆಗಳು ಕೆಲ ಒಂದು ನಿಯಮಗಳನ್ನು, ಕಾನೂನಿನ ವಿಧಿವಿಧಾನಗಳನ್ನು ಅನುಸರಿಸುವ ಮೂಲಕ ಹೊಸ ಕಾನೂನಿನ ಪರಿಧಿಯೊಳಗೆ ಬರಬಹುದು. ಸಹಕಾರ ಇಲಾಖೆಯ ಆಡಳಿತ ವರದಿಯ ಪ್ರಕಾರ ೨೦೧೫-೧೬ ಸಾಲಿನ ಅಂತ್ಯಕ್ಕೆ ಸೌಹಾರ್ದ ಕಾಯಿದೆಯ ಅನ್ವಯ ರಾಜ್ಯದಲ್ಲಿ ಒಟ್ಟು ೩೫೮೦ ಸೌಹಾರ್ದ ಸಹಕಾರ ಸಂಸ್ಥೆಗಳು ನೊಂದಣಿಯಾಗಿದ್ದು ಅವುಗಳ ವಿವರಣೆ ಈ ರೀತಿ ಇರುವುದು, ಸೌಹಾರ್ದ ಪಟ್ಟಣ ಸಹಕಾರ ಬ್ಯಾಂಕುಗಳು ೧೮, ಕ್ರೆಡಿಟ್ ಸೌಹಾರ್ದ ಸಹಕಾರಿಗಳು ೨೦೦೬, ವಿವಿಧೋದ್ದೇಶ ಸಹಕಾರ ಸಂಘಗಳು ೧೨೭೮, ಇತರೇ ಸಂಘಗಳು ೨೭೮.

ರಾಜ್ಯಾದಂತ ಇ-ಸ್ಟಾಂಪಿಂಗ್ ಮಾರಾಟ ನೊಂದಣಿ ಮತ್ತು ಇತರೇ ವ್ಯವಹಾರಗಳಿಗೆ ಬೇಕಾಗುವ ಸ್ಟಾಂಪ್ ಪೇಪರುಗಳು ಸುಲಭವಾಗಿ ದೊರೆಯುವಲ್ಲಿ ಸಹಾಯಕವಾಗುವಂತೆ, ಕೆಲವು ಸಹಕಾರ ಸಂಘಗಳು ಈ-ಸ್ಟಾಂಪಿಂಗ್ ವ್ಯವಹಾರವನ್ನೂ ನಿರ್ವಹಿಸುತ್ತಿವೆ. ಇದರಿಂದ ಗ್ರಾಮೀಣ ಮತ್ತು ಅರೆನಗರ ಪ್ರದೇಶಗಳ ಗ್ರಾಹಕರಿಗೆ ಅನುಕೂಲವಾಗಿದೆ ಮತ್ತು ಬ್ಯಾಂಕುಗಳಿಗೂ ಇದರಿಂದ ಕಮಿಶನ್ ರೂಪದಲ್ಲಿ ಹೆಚ್ಚಿನ ಆದಾಯ ಬರುವದು. ರಾಜ್ಯಾದ್ಯಂತ ೮೯೧ ಸಹಕಾರ ಸಂಘಗಳು ಈ-ಸ್ಟಾಂಪಿಂಗ್ ಪೂರೈಸುವ ಸೇವೆಯಲ್ಲಿ ತೊಡಗಿರುವವು.

### ಸಹಕಾರ ರತ್ನ ಪ್ರಶಸ್ತಿ

ರಾಜ್ಯಸರ್ಕಾರವು ೨೦೦೩ರಿಂದ ಈ ವಿಶೇಷ ಪ್ರಶಸ್ತಿಯನ್ನು ನೀಡುವ ಮೂಲಕ ಸಹಕಾರಿ ವಲಯದ ಧುರೀಣರನ್ನು ಗೌರವಿಸುವ ಮೂಲಕ ಸಹಕಾರ ಚಳವಳಿಯು ಇನ್ನೂ ಹೆಚ್ಚು ಗುಣಾತ್ಮಕವಾಗಿ ಬೆಳೆಯಲು ಸಹಕಾರಿಯಾಗಿದೆ. ಅನುಪಮ ಸೇವೆ ಸಲ್ಲಿಸಿರುವ ಹಿರಿಯ ಸಹಕಾರಿಗಳನ್ನು ಗುರುತಿಸಿ ವಿಭಾಗ ಮಟ್ಟದಲ್ಲಿ ಒಬ್ಬರಂತೆ, ಮತ್ತು ಬೆಂಗಳೂರು ನಗರ ವಿಭಾಗದಿಂದ ಒಬ್ಬರು ಸೇರಿದಂತೆ, ಒಟ್ಟು ಐವರು ಸಹಕಾರಿ ನಾಯಕರನ್ನು ಆಯ್ಕೆ ಮಾಡಿ, ತಲಾ ರೂ.೫೦,೦೦೦/- ನಗದು, ಪ್ರಶಸ್ತಿ ಫಲಕಗಳ ಮೂಲಕ ಪ್ರತಿ ವರ್ಷ ನವೆಂಬರ್ ೧೪ರಿಂದ ಒಂದು ವಾರ ಆಚರಿಸುವ ಸಹಕಾರಿ ಸಪ್ತಾಹದಲ್ಲಿ ಗೌರವಿಸಲಾಗುವುದು. ಇದು ಒಂದು ಉತ್ತಮ ಬೆಳವಣಿಗೆ.

### ಸಹಕಾರ ವ್ಯವಸ್ಥೆಯ ಇತಿಮಿತಿಗಳು

ಭಾರತದಲ್ಲಿ ಕಳೆದ ಸುಮಾರು ೧೧೩ ವರ್ಷಗಳಿಂದ ಅಸ್ತಿತ್ವದಲ್ಲಿ ಇರುವ ಈ ಸಹಕಾರ ವ್ಯವಸ್ಥೆ ಆರಂಭದಿಂದಲೂ ಇತರೇ ವ್ಯವಸ್ಥೆಗಳಂತೆ ತನ್ನದೇ ಆದ ಅನೇಕ ಇತಿಮಿತಿಗಳಿಂದ ಕೂಡಿದ್ದರೂ, ತನ್ನದೇ ಆದ ಅಸ್ತಿತ್ವವನ್ನು ಅಸ್ಮಿತೆಯನ್ನು ಕಾಯ್ದುಕೊಂಡಿರುವುದು ಈ ಜನಾಂದೋಲನದ ಪ್ರಮುಖ ಗುಣಲಕ್ಷಣ.

ಸಹಕಾರ ವ್ಯವಸ್ಥೆಯಲ್ಲಿಯೂ, ಸರ್ಕಾರದಲ್ಲಿ ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿ ಇತ್ತಿಚಿನ ವರ್ಷಗಳಲ್ಲಿ ಹೆಚ್ಚಾಗಿ ಸರ್ವೇಸಾಮಾನ್ಯವಾಗಿ ಕಂಡು ಬರುತ್ತಿರುವ ಅವ್ಯವಹಾರ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಪ್ರಾಮಾಣಿಕತೆಯ ಕೊರತೆ, ಬದ್ಧತೆ ಮತ್ತು ವೃತ್ತಿ ಪರತೆಗಳು ಪಾರದರ್ಶಕ ವ್ಯವಹಾರದ ಕೊರತೆ ಎದ್ದು

ಕಾಣುತ್ತಿದ್ದು, ಚಳವಳಿಯು ಗಾತ್ರದಲ್ಲಿ ಬೆಳೆದಂತೆ ಗುಣಾತ್ಮಕವಾಗಿ ಬೆಳೆಯುತ್ತಿಲ್ಲ. ಕೇವಲ ಸರ್ಕಾರದ ಪೋಷಣೆಗಳಿಂದ ಪ್ರತಿವರ್ಷ ಸಂಪ್ರದಾಯದಂತೆ ಆಚರಿಸುವ ಸಹಕಾರ ಸಪ್ತಾಹದಿಂದ ಸಹಕಾರದ ನಿಜವಾದ ಉದ್ಧಾರವಾಗುವುದಿಲ್ಲ. ರಾಷ್ಟ್ರಪಿತ ಗಾಂಧೀಜಿಯವರ ಮಾತಿನಲ್ಲಿ ಹೇಳುವುದಾದರೆ "ಸಹಕಾರಸಂಘಗಳು ಅತ್ಯಂತ ಪ್ರಾಮಾಣಿಕ ಮತ್ತು ನಿಷ್ಠಾವಂತ (Mem of Character and Integrity) ಜನರಿಂದ ನಡೆಸಲ್ಪಡಬೇಕು ಸ್ವಾರ್ಥ ಸಾಧಕರಿಂದಲ್ಲ. ಪರಸ್ಪರ ವಿಶ್ವಾಸ ಗೌರವ ಇಲ್ಲದೇ ಹೋದರೆ ಸಹಕಾರ ಒಂದು ಅಪರಾಧ ಎನಿಸುತ್ತದೆ. ಜನರು ಆಹಾರದ ಕೊರತೆಯಿಂದ ಉಪವಾಸ ಇರುವದಿಲ್ಲ. ಆದರೆ ಸಹಕಾರ ಮನೋಭಾವದ ಕೊರತೆಯಿಂದ ಉಪವಾಸದಿಂದ ಬಳಲುತ್ತಾರೆ".

ವಿದೇಶಿ ಸಹಕಾರವನ್ನು ಭಾರತ ಅಂಧಾನುಕರಣವಾಗಿ ನಕಲು ಮಾಡುವುದಕ್ಕೆ ಗಾಂಧೀಜಿ ಪ್ರಬಲ ವಿರೋಧ ವ್ಯಕ್ತಪಡಿಸಿದ್ದರು. ಅದರಿಂದ ಚಳವಳಿ ಅತೀ ದುಃಖವಾದ ಅಪ ಜಯದಲ್ಲಿ ಕೊನೆಗೊಳ್ಳುತ್ತದೆ ಎಂದು ಎಚ್ಚರಿಸಿದ್ದರು. ಅನೇಕ ಸಂಸ್ಥೆಗಳು ಪಕ್ಷ ರಾಜಕೀಯದಿಂದ ಮುಕ್ತವಾಗಿಲ್ಲ. "ಸಂಘಗಳಲ್ಲಿ ರಾಜಕೀಯ ಇರಬಾರದು, ಆದರೆ ರಾಜಕೀಯದಲ್ಲಿ ಸಹಕಾರ ಇರಬೇಕು". ಸಹಕಾರ ಸಂಘಗಳು ಎಂದರೆ ಅನನುಭವಿ ರಾಜಕಾರಣಿಗಳ ಆಟದ ಮೈದಾನ ಮತ್ತು ರಾಜಕೀಯದಲ್ಲಿ ಸೋತವರಿಗೆ ಪುನರ್ ವಸತಿ ಕಲ್ಪಿಸುವ ಕೇಂದ್ರಗಳು ಎಂಬ ಭಾವನೆ ಬರಬಾರದು, ಸಹಕಾರಿಗಳಲ್ಲಿಯೂ ಸಹಕಾರ ಮನೋಭಾವನೆ ಇಲ್ಲದೇ ಸಹಕಾರದ ಬದಲಿಗೆ ಸ್ವಾಹಾಕಾರ ಪ್ರವೇಶವಾಗಿರುವುದರಿಂದ ಈ ಸಂಸ್ಥೆಗಳು ಸೊರಗುತ್ತಿವೆ ಎಂದು ತಜ್ಞರು ಅಭಿಪ್ರಾಯ ಪಡುತ್ತಾರೆ. ನಮ್ಮ ದೇಶದ ಪ್ರತಿ ರೈತನು, ಸಹಕಾರ ಸಂಘದ ಸಾಮಾನ್ಯ ಸದಸ್ಯನು ಜಾಗೃತನಾಗಿ ಸಹಕಾರ ರಂಗದಲ್ಲಿ ಸ್ವಾಹಾಕಾರಿಗಳು ನುಸುಳದಂತೆ ಬಲವಾದ ಬೇಲಿಯನ್ನು ಹಾಕಬೇಕು.

"ಭಾರತದಲ್ಲಿ ಸಹಕಾರ ಚಳವಳಿ ವಿಫಲಗೊಂಡಿದೆ, ಅದು ಯಶಸ್ವಿಯಾಗಲೇಬೇಕು"(All India Rural credit survey Report 1951) ಎಂದು ಹೇಳುವ ಮೂಲಕ, ಸಹಕಾರ ಕ್ಷೇತ್ರದ ಅನಿವಾರ್ಯತೆಯನ್ನು ಗುರುತಿಸಿದ ಕೇಂದ್ರ ಸರ್ಕಾರ ಮತ್ತು ಭಾರತೀಯ ರಿಜರ್ವ ಬ್ಯಾಂಕ್ ನೇಮಿಸಿದ ಅನೇಕ ಸಮಿತಿಗಳು ಸಹಕಾರ ಕ್ಷೇತ್ರವನ್ನು ಬಲಪಡಿಸಬೇಕಾದ ಅಗತ್ಯ ಕ್ರಮಗಳ ಬಗ್ಗೆ ಶಿಫಾರಸ್ಸು ಮಾಡಿವೆ. ಅಲ್ಪಾವಧಿ ಸಹಕಾರ ಪತ್ತಿನ ವ್ಯವಸ್ಥೆಯನ್ನು ಪುನಶ್ಚೇತನ ಗೊಳಿಸುವ ವಿಷಯಕ್ಕೆ ಸಂಬಂಧ ಪಟ್ಟಂತೆ ವೈದ್ಯನಾಥನ್ ಸಮಿತಿಯ ವರದಿಯಲ್ಲಿ "ಶೇ.೪೮ ರೈತರಿಗೆ ಯಾವ ಮೂಲದಿಂದಲೂ ಸಾಲ ಸಿಗುತ್ತಿಲ್ಲ. ಒಂದು ವೇಳೆ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳನ್ನು ಪುನಶ್ಚೇತನ ಗೊಳಿಸದಿದ್ದರೆ ೧೯೦೪ರಲ್ಲಿದ್ದ ರೈತರ ಶೋಚನೀಯಸ್ಥಿತಿ ಮರುಕಳಿಸುತ್ತದೆ" ಎಂದುಹೇಳಲಾಗಿದೆ. ಮುಂದುವರೆದು ವೈಎಚ್. ಮಾಲೇಗಾಂವ್ ಸಮಿತಿ ನೀಡಿರುವ ವರದಿಯಲ್ಲಿ"ಎಲ್ಲಿ ಬ್ಯಾಂಕಿಂಗ್ ವ್ಯವಸ್ಥೆ ಇಲ್ಲವೋ ಅಲ್ಲಿ ಸಹಕಾರ ಬ್ಯಾಂಕಿಂಗ್ ಆರಂಭವಾಗಬೇಕು ಎಂದು ಹೇಳುವ ಮೂಲಕ ಸಹಕಾರ ಕ್ಷೇತ್ರದ ಮಹತ್ವವನ್ನು ಎತ್ತಿ ಹಿಡಿಯುತ್ತಿದೆ. ರೈತರಿಗೆ ಲಾಭದಾಯಕವಾದ ಉಪ ಜೀವನದ ಸಾಧ್ಯತೆಯನ್ನು ತೋರಿಸಲು ಆದಾಯದ ಹೊಸ ಮೂಲವನ್ನೂ ದೊರಕಿಸಿ ಕೊಡಲು ಮತ್ತು ಮಹಿಳಾ ಸಬಲೀಕರಣಕ್ಕೆ ಪೂರಕವಾಗಲು ಹಾಲು ಉತ್ಪಾದಕರ ಸಂಘಗಳನ್ನು ಬಲಪಡಿಸಬೇಕೆಂದು ಡಾ॥ ವರ್ಗಿಸ್ ಕುರಿಯನ್ ಹೇಳುತ್ತಾರೆ. ಭಾರತದಲ್ಲಿ ಸಹಕಾರ ಕ್ಷೇತ್ರ ಬಹಳ ವಿಸ್ತಾರವಾಗಿ ಬೆಳೆದಿದೆ. ನೂರಕ್ಕೆ ನೂರು ಗ್ರಾಮೀಣ ವ್ಯಾಪ್ತಿಯನ್ನು ಹೊಂದಿರುವ ಈ ಕ್ಷೇತ್ರದಲ್ಲಿ ಆರು ಲಕ್ಷಕ್ಕೂ ಹೆಚ್ಚು ಸಹಕಾರ ಸಂಘಗಳು ೩೦ ಕೋಟಿಗೂ ಹೆಚ್ಚು ಸದಸ್ಯತ್ವ ಅಂದಾಜು ರೂ ೭೦ ಲಕ್ಷ ಕೋಟಿ ದುಡಿಯುವ ಬಂಡವಾಳವನ್ನು ಹೊಂದಿದೆ. ಖಾಸಗೀಕರಣದ ವ್ಯವಸ್ಥೆಯಲ್ಲಿಯೂ ದೇಶದ ಅರ್ಥವ್ಯವಸ್ಥೆಗೆ ಸಹಕಾರ ಕ್ಷೇತ್ರದ ಕೊಡುಗೆ ಶೇ.೩೫ರಷ್ಟು ಇರುವುದು. [ಕರ್ನಾಟಕದಲ್ಲಿ ವಿವಿಧ ವಲಯಗಳಲ್ಲಿನ ಸಹಕಾರ ಪ್ರಗತಿಯ ಪರಿಚಯವನ್ನು ವಿಷಯಕ್ಕೆ ಸಂಬಂಧಪಟ್ಟಂತೆ ನೀಡಿರುವ ಕೋಷ್ಟಕಗಳಲ್ಲಿ ಮತ್ತು ಅನುಬಂಧಗಳಲ್ಲಿ ವಿವರಿಸಲಾಗಿದೆ.]

## ಹಣದ ದುರ್ಬಳಕೆ

ಇತ್ತೀಚಿನ ೨೦೧೬ರ ಸಹಕಾರ ಇಲಾಖೆಯ ಆಡಳಿತ ವರದಿಯಲ್ಲಿ ಪ್ರಕಟವಾಗಿರುವಂತೆ ವರ್ಷ ೨೦೧೫-೧೬ರ ಅವಧಿಯಲ್ಲಿ ೫೧ ವಿವಿಧ ಪ್ರಕರಣದಲ್ಲಿ ರೂ. ೧೪೨೬.೧೯ಲಕ್ಷದ ಅವ್ಯವಹಾರವನ್ನು ಕಂಡು ಹಿಡಿಯಲಾಗಿದೆ. ಹಿಂದಿನ ಮೂರು ವರ್ಷದಲ್ಲಿ, ೨೦೧೨-೧೩ರಲ್ಲಿ ೯೯ ಪ್ರಕರಣಗಳಲ್ಲಿ ರೂ ೧೮೭೬.೨೬ಲಕ್ಷ ಅದರ ಮುಂದಿನ ವರ್ಷ ೧೬ ವಿವಿಧ ಪ್ರಕರಣಗಳಲ್ಲಿ ರೂ ೮೧೮.೧೬ ಲಕ್ಷ, ೨೦೧೪-೧೫ನೇ ಸಾಲಿನಲ್ಲಿ ೫೧ ಪ್ರಕರಣಗಳಲ್ಲಿ ದುರುಪಯೋಗವಾದ ಹಣದ ಮೊತ್ತ ರೂ.೨೬೮೫.೧೨ ಲಕ್ಷ ಎಂದು ಇಲಾಖೆಯ ವರದಿಯಿಂದ ತಿಳಿದು ಬರುವುದು.

ಇಲಾಖೆಯಲ್ಲಿ ೧೯೯೫ರಿಂದ ಪ್ರತ್ಯೇಕವಾದ ತನಿಖೆ ಮತ್ತು ಪರಿಶೀಲನಾ ಘಟಕ ಕಾರ್ಯನಿರ್ವಹಿಸುತ್ತಿದ್ದು ಪ್ರಮುಖವಾಗಿ ಸಹಕಾರಿ ಸಂಘಗಳಲ್ಲಿನ ಹಣ ದುರುಪಯೋಗ ಅವ್ಯವಹಾರಗಳ ದೂರು ಬಂದರೆ ಅವಶ್ಯಕ ಪರಿಶೀಲನೆ ಮಾಡುವುದು ಮತ್ತು ಸೂಕ್ತ ಕ್ರಮಕ್ಕೆ ಸರ್ಕಾರಕ್ಕೆ ವರದಿ ಮಾಡುವುದು ಈ ಘಟಕದ ಮುಖ್ಯ ಕೆಲಸ.

## ರಾಜ್ಯ ಮಟ್ಟದ ಶೃಂಗ (Apex) ಸಹಕಾರಿ ಸಂಸ್ಥೆಗಳು

ನಮ್ಮ ರಾಜ್ಯದಲ್ಲಿ ಸುಮಾರು ೪೦ ವಿವಿಧ ಬಗೆಯ ಸಹಕಾರ ಸಂಸ್ಥೆಗಳು ಹಾಲಿ ಕಾರ್ಯನಿರ್ವಹಿಸುತ್ತಿದ್ದು ಅವುಗಳಲ್ಲಿ ಕೆಲವು ಪ್ರಮುಖ ಸಹಕಾರ ಸಂಸ್ಥೆಗಳು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ತಮ್ಮದೇ ಆದ ಒಕ್ಕೂಟಗಳನ್ನು ರಚಿಸಿಕೊಂಡಿವೆ. ಪ್ರಾಥಮಿಕ ಸಂಘಗಳು ಜಿಲ್ಲಾಮಟ್ಟದ ಸಂಘಗಳ ಸದಸ್ಯತ್ವ ಹೊಂದಿ ನೊಂದಾಯಿತವಾಗಿದ್ದರೆ ಜಿಲ್ಲಾ ಮಟ್ಟದ ಸಂಸ್ಥೆಗಳು ರಾಜ್ಯಮಟ್ಟದಲ್ಲಿ ತಮ್ಮದೇ ಆದ ಸ್ವಾಯತ್ತತೆ ಹೊಂದಿದ್ದ ಮಹಾಮಂಡಳ/ ಯೂನಿಯನ್/ ಫೆಡರೇಷನ್ ರಚಿಸಿಕೊಂಡು ಸದಸ್ಯರಿಂದ ಆಯ್ಕೆಯಾದ ಆಡಳಿತ ಮಂಡಳಿಯಿಂದ ಕಾರ್ಯ ನಿರ್ವಹಿಸುತ್ತಿರುವವು. ಈ ಶೃಂಗ ಸಂಸ್ಥೆಗಳ ಮೂಲ ಉದ್ದೇಶ ತಮ್ಮ ವಲಯದ ಅಂಗೀಕೃತ ಸಂಸ್ಥೆಗಳಿಗೆ, ಅಗತ್ಯವಾದ ಮಾರ್ಗದರ್ಶನ ಹಣಕಾಸಿನ ಸಹಾಯ, ಮಾರುಕಟ್ಟೆ ಒದಗಿಸುವುದು, ಸರ್ಕಾರದೊಂದಿಗೆ ವಿಚಾರ ವಿನಿಮಯ ನೀತಿ ನಿರೂಪಣೆ ಮಾಡುವುದು ಮುಂತಾದವುಗಳು. ರಾಜ್ಯದ ಕೆಲವು ಸಂಸ್ಥೆಗಳು ಕಳೆದ ೭/೮ ದಶಕಗಳಿಂದ ಕಾರ್ಯ ನಿರ್ವಹಿಸುತ್ತಿದ್ದು, ರಾಜ್ಯ ಪುನರ್ ವಿಂಗಡಣೆಯ ನಂತರ ಅವುಗಳ ರಚನೆಯಲ್ಲಿ ಕಾರ್ಯ ನಿರ್ವಹಣೆಯಲ್ಲಿ ಬದಲಾವಣೆಯಾಗಿದ್ದು, ಕಾರ್ಯವ್ಯಾಪ್ತಿಯೂ ವಿಸ್ತಾರಗೊಂಡಿದೆ. ಈ ಸಂಸ್ಥೆಗಳ ಬಹುಪಾಲು ಕೇಂದ್ರ ಆಡಳಿತ ಕಛೇರಿಗಳು ಬೆಂಗಳೂರಿನಲ್ಲಿ ಕೇಂದ್ರಿಕೃತವಾಗಿದ್ದು, ಸಂಸ್ಥೆಗಳ

ಪಟ್ಟಿ ಈ ಕೆಳಗಿನಂತೆ ಇರುವದು: -(ಈ ಸಂಸ್ಥೆಗಳ ಪೈಕಿ ಕೆಲವು ಸಕ್ರೀಯವಾಗಿಲ್ಲ)

೧. ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ (೧೯೧೫)
೨. ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (೧೯೨೯)
೩. ಕರ್ನಾಟಕ ರಾಜ್ಯ ಸಹಕಾರಿ ಯೂನಿಯನ್ (ಮಹಾಮಂಡಳ) (೧೯೨೪)
೪. ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ (೧೯೪೩)
೫. ಕರ್ನಾಟಕ ರಾಜ್ಯ ವಸತಿ ಮಹಾಮಂಡಳ (೧೯೫೦)
೬. ಕರ್ನಾಟಕ ರಾಜ್ಯ ಪ.ಜಾ/ಪ.ಪಂ.ಗಳ ಗೃಹನಿರ್ಮಾಣ ನಿಗಮ (೧೯೬೬)
೭. ಕರ್ನಾಟಕ ರಾಜ್ಯ ಹತ್ತಿ, ಕೈಮಗ್ಗ ನೇಕಾರರ ಮಹಾಮಂಡಳ (ಕಾವೇರಿ ಹ್ಯಾಂಡ್ ಲೂಮ್ಸ್)
೮. ಕರ್ನಾಟಕ ರಾಜ್ಯ ಉಣ್ಣೆ, ಕೈಮಗ್ಗ ನೇಕಾರರ ಸಹಕಾರ ಸಂಘ
೯. ಕರ್ನಾಟಕ ರಾಜ್ಯ ಗ್ರಾಹಕರ ಸಹಕಾರ ಮಹಾಮಂಡಳ (೧೯೬೪)
೧೦. ಕರ್ನಾಟಕ ರಾಜ್ಯ ಸಹಕಾರ ಬೀಜ ನಿಗಮ
೧೧. ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ (೧೯೬೫)
೧೨. ಕರ್ನಾಟಕ ರಾಜ್ಯ ಔದ್ಯೋಗಿಕ ಸಹಕಾರ ಬ್ಯಾಂಕ್ (೧೯೭೨)
೧೩. ಕೇಂದ್ರ ಅಡಿಕೆ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘ (AMCO), ಮಂಗಳೂರು
೧೪. ಕರ್ನಾಟಕ ರಾಜ್ಯ ಕೇಂದ್ರ ನಾರಿನ ಮಾರಾಟ ಸಹಕಾರ ಸಂಘ
೧೫. ಕರ್ನಾಟಕ ರಾಜ್ಯ ಸಹಕಾರಿ ನೂಲಿನ ಗಿರಣಿಗಳ ಮಹಾಮಂಡಳ
೧೬. ಕರ್ನಾಟಕ ರಾಜ್ಯ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ (KMF)
೧೭. ಕರ್ನಾಟಕ ರಾಜ್ಯ ಸಹಕಾರ ಎಣ್ಣೆಕಾಳು ಬೆಳೆಗಾರರ ಮಹಾಮಂಡಳ (KOF)
೧೮. ಕರ್ನಾಟಕ ರಾಜ್ಯ ಸಹಕಾರ ಚಲನಚಿತ್ರ ಮತ್ತು ಲಲಿತಕಲಾ ಮಹಾಮಂಡಳ
೧೯. ಅಖಿಲ ಭಾರತ ಕೈಗಾರಿಕಾ ಸಹಕಾರಿ ಬ್ಯಾಂಕುಗಳ ಮಹಾಮಂಡಳ
೨೦. ಕರ್ನಾಟಕ ರಾಜ್ಯ ಮಹಿಳಾ ಸಹಕಾರ ಮಹಾಮಂಡಳ (೧೯೯೨)
೨೧. ಕರ್ನಾಟಕ ರಾಜ್ಯ ಸಹಕಾರ ಸಕ್ಕರೆ ಕಾರ್ಖಾನೆಗಳ ಮಹಾಮಂಡಳ
೨೨. ಕರ್ನಾಟಕ ರಾಜ್ಯ ಸಹಕಾರಿ ಕೈಗಾರಿಕೆ ಮಹಾಮಂಡಳ
೨೩. ಕರ್ನಾಟಕ ರಾಜ್ಯ ಸಹಕಾರ ತೋಟಗಾರಿಕೆ ಮಹಾಮಂಡಳ (೧೯೯೬)
೨೪. ಕರ್ನಾಟಕ ರಾಜ್ಯ ಸಹಕಾರ ಟೈಲರಿಂಗ ಮಹಾಮಂಡಳ
೨೫. ಕರ್ನಾಟಕ ರಾಜ್ಯ ಸಹಕಾರ ಲ್ಯಾಂಪ್ಸ್ (LAMPS) ಮಹಾಮಂಡಳ (ದೊಡ್ಡ ಪ್ರಮಾಣದ ಆದಿವಾಸಿ ವಿವಿಧ ಉದ್ದೇಶ ಸಹಕಾರ ಸಂಘ)
೨೬. ಕರ್ನಾಟಕ ರಾಜ್ಯ ಸಹಕಾರ ರೇಷ್ಮೆ ಮಾರಾಟ ಮಹಾಮಂಡಳ
೨೭. ಕರ್ನಾಟಕ ರಾಜ್ಯ ಸಹಕಾರ ಮೀನುಗಾರ ಮಹಾಮಂಡಳ (೧೯೮೯), ಮೈಸೂರು
೨೮. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಮಹಾಮಂಡಳ, ಬೆಂಗಳೂರು
೨೯. ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳ (೨೦೦೪) (Credit societies)
೩೦. ಕರ್ನಾಟಕ ರಾಜ್ಯ ಕುಕ್ಕಟ (Poultry) ಸಹಕಾರ ಮಹಾಮಂಡಳ (೧೯೯೫)
೩೧. ಕರ್ನಾಟಕ ರಾಜ್ಯ ಮಹಿಳಾ ಸಹಕಾರ ಮಹಾಮಂಡಳ (೧೯೯೨)
೩೨. ಕರ್ನಾಟಕ ಸಹಕಾರ ಕುರಿ ಮತ್ತು ಮೇಕೆ ಸಾಕಾಣೆದಾರರ ಸಂಘಗಳ ಮಹಾಮಂಡಳ (೨೦೧೭)

**೧೯೯೧-೨೦೧೨-೧೩ರ ವರೆಗೆ ರಾಜ್ಯದಲ್ಲಿದ್ದ ಸಹಕಾರಿ ಸಂಘಗಳ ಸಂಖ್ಯೆ ಸದಸ್ಯತ್ವ, ಷೇರು ಬಂಡವಾಳನ್ನು ಈ ಮುಂದಿನ ಕೋಷ್ಠಕಗಳಲ್ಲಿ ನೀಡಲಾಗಿದೆ.**

| ವರ್ಷ | ಸ.ಸ ಸಂಖ್ಯೆ | ಸದಸ್ಯತ್ವ | ಷೇರು ಬಂಡವಾಳ | ದುಡಿಯುವ ಬಂಡವಾಳ |
|---|---|---|---|---|
| ೧೯೯೧-೯೧ | ೨೫,೦೮೩ | ೧,೧೮,೦೦,೦೦೦ | ೪೩,೧೦೮.೦೦ | ೩,೧೫,೮೩೩.೦೦ |
| ೧೯೯೪-೯೫ | ೨೫,೯೦೩ | ೧,೩೩,೨೬.೦೦೦ | ೭೦,೪೧೧.೦೨ | ೬,೮೬,೦೯೧.೦೦ |
| ೧೯೯೫-೯೬ | ೨೬,೪೧೧ | ೧,೩೫,೫೮,೪೮೦ | ೭೬,೫೬೫.೭೬ | ೧೦,೨೬,೫೫೦.೮೬ |
| ೨೦೦೦-೦೧ | ೨೯,೯೩೦ | ೧,೬೨,೦೦,೦೦೦ | ೧,೪೭,೩೧೬.೦೦ | ೨೧,೧೯,೮೬೭.೦೦ |
| ೨೦೦೧-೦೨ | ೩೦,೮೬೨ | ೧,೮೬,೦೦,೦೦೦ | ೧,೪೯,೯೯೦.೦೦ | ೨೧,೫೭,೫೪೩.೦೦ |
| ೨೦೦೨-೦೩ | ೩೧,೯೦೮ | ೧,೯೫,೦೦,೦೦೦ | ೧,೬೨,೭೪೦.೦೦ | ೨೨,೬೫,೪೨೦.೦೦ |
| ೨೦೦೩-೦೪ | ೩೨,೮೦೪ | ೧,೯೭,೦೦,೦೦೦ | ೧,೭೦,೮೭೭.೦೦ | ೨೩,೭೮,೬೯೦.೦೦ |
| ೨೦೧೦-೧೧ | ೩೫,೫೦೨ | ೨,೧೫,೩೪,೦೦೦ | ೩,೪೭,೯೦೦.೦೦ | ೪೧,೩೫,೫೦೦.೦೦ |
| ೨೦೧೧-೧೨ | ೩೬,೪೫೭ | ೨,೬೩,೯೯,೦೦೦ | ೩,೦೨,೨೨೦.೦೦ | ೫೧,೮೬,೩೫೩.೦೦ |
| ೨೦೧೨-೧೩ | ೩೭,೪೬೮ | ೨,೧೮,೧೧,೦೦೦ | ೩,೧೨,೯೦೦.೦೦ | ೫೮,೬೯,೨೦೦.೦೦ |

ಮೂಲ: ಸಹಕಾರ ಸಂಘಗಳ ರಿಜಿಸ್ಟ್ರಾರ್, ಬೆಂಗಳೂರು

## ರಾಜ್ಯದಲ್ಲಿ ಇತ್ತೀಚಿನ ಕೆಲವು ವರ್ಷಗಳ ಸಹಕಾರ ಪ್ರಗತಿಯ ಪಕ್ಷಿನೋಟ
## (೨೦೦೮-೦೯ ರಿಂದ ೨೦೧೫-೧೬ ರವರೆಗೆ)

| ಕ್ರ. ಸಂ. | ವಿವರಣೆ | ವರ್ಷ | | | |
|---|---|---|---|---|---|
| | | ೨೦೦೮-೦೯ | ೨೦೦೯-೧೦ | ೨೦೧೦-೧೧ | ೨೦೧೨-೧೩ |
| ೧. | ಒಟ್ಟು ಸ.ಸ. ಸಂಖ್ಯೆ | ೩೪,೦೨೫ | ೩೪,೮೬೩ | ೩೫,೫೦೨ | ೩೭,೪೬೮ |
| | ಕಾರ್ಯ ನಿರ್ವಹಿಸುತ್ತಿರುವ ಸ.ಸ. | ೨೯,೨೯೮ | ೩೦,೧೧೨ | ೩೦,೯೬೩ | ೩೩,೧೭೨ |
| | ಕಾರ್ಯ ಸ್ಥಗಿತಗೊಂಡ ಸ.ಸ (Defunct) | ೨,೫೮೯ | ೨,೫೮೮ | ೨,೧೮೩ | ೨,೦೧೪ |
| | ಸಮಾಪನಗೊಂಡ ಸ.ಸ (Liquidated) | ೨,೧೩೮ | ೨,೧೬೩ | ೨,೩೫೬ | ೨,೨೮೨ |
| ೨. | ಷೇರು ಬಂಡವಾಳ (ರೂ.ಕೋಟಿಗಳಲ್ಲಿ) | ೨,೭೮೬ | ೩,೧೭೧ | ೩,೪೮೦ | ೩,೧೨೯ |
| | ಸರ್ಕಾರದ ಪಾಲು | ೨೦೭ | ೧೯೮ | ೨೦೬ | ೧೯೩ |
| | ಸದಸ್ಯರ ಪಾಲು | ೨,೫೭೯ | ೨,೯೭೩ | ೩ ೨೭೪ | ೨,೯೩೬ |
| ೩. | ಸದಸ್ಯರ ಸಂಖ್ಯೆ | ೧,೮೭,೮೮,೭೪೧ | ೧,೯೯,೦೪,೭೩೦ | ೨,೧೫,೩೩,೬೫೧ | ೨,೧೮,೧೧,೬೮೭ |
| ೪. | ದುಡಿಯುವ ಬಂಡವಾಳ (ರೂ.ಕೋಟಿಗಳಲ್ಲಿ) | ೩೨,೬೯೩.೫೦ | ೩೮,೨೪೯ | ೪೧,೩೫೫ | ೫೮,೬೯೨ |
| ೫. | ಠೇವಣಿ (ರೂ.ಕೋಟಿಗಳಲ್ಲಿ) | ೮,೨೬೦ | ೧೧,೫೪೮ | ೨೦೩೬೦ | ೨೭,೭೦೧ |
| ೬. | ಸಹಕಾರ ವ್ಯವಸ್ಥೆಗೆ ಒಳಪಟ್ಟ ಗ್ರಾಮಗಳ ಶೇಕಡಾ ಪ್ರಮಾಣಾ. | ೧೦೦% | ೧೦೦% | ೧೦೦% | ೧೦೦% |
| ೭. | ವ್ಯವಸಾಯ ನಿರತ ಕುಟುಂಬಗಳು (೨೦೦೧ ಗಣತಿ ಪ್ರಕಾರ) | ೫೯.೧೫% | ೫೯.೧೫% | ೫೯.೧೫% | ೫೯.೧೫% |
| ೮. | ಸಹಕಾರಕ್ಕೆ ಒಳಪಟ್ಟ ವಯಸ್ಕರ ಶೇ.ಪ್ರಮಾಣ | ೭೭.೬೦ | ೭೭.೬೦ | ೭೭.೬೦ | ೭೭.೬೦ |
| ೯. | ಲಾಭದಲ್ಲಿರುವ ಸ.ಸ.ಗಳು | ೧೮,೮೬೬ | ೧೯,೩೧೮ | ೧೭,೭೩೨ | ೧೯,೯೬೩ |
| ೧೦. | ನಷ್ಟದಲ್ಲಿರುವ ಸ.ಸ.ಗಳು | ೧೫,೧೫೯ | ೧೫,೫೪೫ | ೧೬,೫೧೮ | ೧೬,೪೫೧ |

## ಇತ್ತೀಚಿನ ಮೂರು ವರ್ಷಗಳ ಸಹಕಾರ ಪ್ರಗತಿಯ ಚಿತ್ರಣ

| ಕ್ರ.ಸಂ. | ವಿವರ | ೨೦೧೩-೧೪ | ೨೦೧೪-೧೫ | ೨೦೧೫-೧೬ (ತಾತ್ಕಾಲಿಕ) |
|---|---|---|---|---|
| ೧ | ಸಹಕಾರ ಸಂಘಗಳ ಸಂಖ್ಯೆ | ೩೮,೪೫೯ | ೩೯,೬೨೭ | ೪೦,೬೪೩ |
| | ಈ ಪೈಕಿ<br>ಅ) ಕಾರ್ಯನಿರ್ವಹಿಸುತ್ತಿರುವ ಸಂಘಗಳು<br>ಆ) ನಿಷ್ಕ್ರಿಯ ಸಂಘಗಳು<br>ಇ) ಸಮಾಪನೆಗೊಂಡ ಸಂಘಗಳು | <br>೩೩,೭೧೭<br>೨,೩೮೯<br>೨,೩೫೩ | <br>೩೪,೬೬೪<br>೧,೬೬೫<br>೩,೨೯೮ | <br>೩೫,೫೮೯<br>೧,೭೪೬<br>೩,೩೦೮ |
| ೨ | ಷೇರು ಬಂಡವಾಳ (ಕೋಟಿ ರೂ.ಗಳಲ್ಲಿ) ಇದರಲ್ಲಿ<br>ಅ) ಸರ್ಕಾರದ್ದು<br>ಆ) ಸದಸ್ಯರಿಂದ | ೪೧೧೬.೧೮<br>೧೭೫.೪೩<br>೩೯೪೦೭೫ | ೪೦೨೫.೨೬<br>೨೫೦.೩೯<br>೩೭೭೪.೮೭ | ೪೬೪೪.೧೮<br>೨೩೮೯೧<br>೪೪೦೫.೨೭ |
| ೩ | ಸದಸ್ಯತ್ವ (ಲಕ್ಷಗಳಲ್ಲಿ) | ೨೧೫.೫೨ | ೨೨೩.೯೯ | ೨೩೪೬೫ |
| ೪. | ದುಡಿಯುವ ಬಂಡವಾಳ (ರೂ.ಕೋಟಿಗಳು) | ೬೫.೦೫೨ | ೬೯.೩೫೩ | ೮೬.೨೧೨ |
| ೫. | ಠೇವಣಿಗಳು (ರೂ.ಕೋಟಿಗಳು) | ೩೫,೨೩೦ | ೪೪,೬೯೮ | ೬೨,೫೮೭ |
| ೬. | ಸಹಕಾರ ಸಂಘಗಳಿಗೆ ಒಳಪಟ್ಟಿರುವ ಗ್ರಾಮಗಳು (%) | ೧೦೦% | ೧೦೦% | ೧೦೦% |
| ೭. | ಲಾಭದಲ್ಲಿರುವ ಸಹಕಾರ ಸಂಘಗಳು<br>ನಷ್ಟದಲ್ಲಿರುವ ಸಹಕಾರ ಸಂಘಗಳು<br>ಲಾಭ/ನಷ್ಟ ಇಲ್ಲದೆ ಇರುವ ಸಹಕಾರ ಸಂಘಗಳು | ೨೨,೨೦೯<br>೧೬,೨೫೦<br>--- | ೨೧,೬೩೧<br>೧೩,೬೨೪<br>೪,೩೭೨ | ೨೩,೩೦೭<br>.೧೩,೫೧೪<br>೩,೮೨೨ |

### ಸಹಕಾರ ವಲಯದ ಸಾಲ ವ್ಯವಸ್ಥೆ

ಗ್ರಾಮೀಣ ಮತ್ತು ನಗರ ಅರೇನಗರ ಪ್ರದೇಶಗಳಲ್ಲಿ ತನ್ನ ಸದಸ್ಯರಿಗೆ ಸಾಲ ಸೌಲಭ್ಯಗಳನ್ನು ಸಹಕಾರಿ ವ್ಯವಸ್ಥೆಯ ಮೂಲಕ ಒದಗಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯವು ತನ್ನದೇ ಆದ ಸ್ಥಾನವನ್ನು ಹೊಂದಿದೆ. ಪಟ್ಟಣ ಸಹಕಾರ ಬ್ಯಾಂಕುಗಳಲ್ಲದೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ/ಬ್ಯಾಂಕುಗಳು ಗ್ರಾಮೀಣ ಪ್ರದೇಶದಲ್ಲಿಯೂ ಸಹ ಕಾರ್ಯ ನಿರ್ವಹಿಸುತ್ತಿವೆ. ಕರ್ನಾಟಕ ರಾಜ್ಯದಲ್ಲಿ ಎರಡು ಹಂತದ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳಲ್ಲಿ ಒಂದು ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಕ್ಕೆ ಸಂಬಂಧಿಸಿದ್ದು, ಇನ್ನೊಂದು ದೀರ್ಘಾವಧಿ ಸಾಲ ಸೌಲಭ್ಯಗಳನ್ನು ನೀಡುತ್ತಿವೆ.

### ಅಲ್ಪಾವಧಿ ಸಾಲದ ಸಹಕಾರಿ ಸಾಲ ವ್ಯವಸ್ಥೆ

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ (೧೯೧೫) ತನ್ನ ಅಂಗ ಸಂಸ್ಥೆಗಳಾದ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ (ಡಿಸಿಸಿಬಿ) ಮೂಲಕ ಗ್ರಾಮೀಣ ಮಟ್ಟದಲ್ಲಿ ಅಲ್ಪಾವಧಿ ಸಾಲವನ್ನು ರೈತರಿಗೆ ಮತ್ತು ಇತರ ಜನರಿಗೆ ನೀಡುತ್ತಿದೆ. ರಾಜ್ಯದಲ್ಲಿ ೨೧ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ೬೮೦ ಶಾಖೆಗಳನ್ನು ಹೊಂದಿದ್ದು ಹಾಗೂ ೫೦೫೧ ಪ್ರಾಥಮಿಕ ವ್ಯವಸಾಯ ಸಹಕಾರ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ. ಈ ಸಂಸ್ಥೆಗಳು ನಬಾರ್ಡ್ ಮಾರ್ಗಸೂಚಿಯನ್ವಯ ತಮ್ಮ ಮೂಲನಿಧಿಯನ್ನು ಆರ್ಥಿಕವಾಗಿ ಮತ್ತು ಸಂಘಟನಾತ್ಮಕವಾಗಿ ಬಲಪಡಿಸುವ ಪ್ರಕ್ರಿಯೆಯಲ್ಲಿ ವ್ಯಾಪಾರ ಅಭಿವೃದ್ಧಿ ಯೋಜನೆಯನ್ನು (ಬಿ.ಡಿ.ಪಿ.) ಸಿದ್ಧಪಡಿಸಿವೆ. ಎಲ್ಲಾ ಜಿಲ್ಲಾ ಬ್ಯಾಂಕುಗಳಿಂದ ಅಭಿವೃದ್ಧಿ ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ. ನಬಾರ್ಡ್ ಮಾರ್ಗಸೂಚಿಯನ್ವಯ ಸಹಕಾರ ಸಾಲ ಸಂರಚನೆಯ ಬಲವರ್ಧನೆಗಾಗಿ ಜೂನ್ ೧೯೯೫ರಲ್ಲಿ ರಾಜ್ಯ ಸರ್ಕಾರ ಹಾಗೂ ಅಪೆಕ್ಸ್ ಬ್ಯಾಂಕ್ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಿದ್ದು ಅದನ್ನು ಕಾಲಕಾಲಕ್ಕೆ ನವೀಕರಿಸಲಾಗುತ್ತಿದೆ.

ದಿನಾಂಕ ೩೧-೩-೨೦೧೪ರಲ್ಲಿದ್ದಂತೆ ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕುಗಳ ದುಡಿಯುವ ಬಂಡವಾಳವು ರೂ.೨೧೪೨೯.೨೪ ಕೋಟಿಗಳಾಗಿತ್ತು. ಮಾರ್ಚ್ ೨೦೧೫ರ ಅಂತ್ಯಕ್ಕೆ ಪ್ರಗತಿಯು ರೂ.೨೪೯೪೦.೦೧ ಕೋಟಿಯಾಗಿದ್ದು, ಶೇಕಡ ೧೬.೩೮ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ. ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಲ್ಲಿ ೩೧-೩-೨೦೧೪ರಲ್ಲಿ ಠೇವಣಿಗಳು ರೂ. ೧೩೦೨೨.೮೯ ಕೋಟಿಗಳಾಗಿದ್ದು, ಅದು ದಿನಾಂಕ ೩೧-೩-೨೦೧೫ರಲ್ಲಿ ರೂ.೧೫೦೭೨.೯೩ ಕೋಟಿಗಳಿಗೆ ತಲುಪಿದ್ದು, ಶೇಕಡ ೧೫.೭೪ರ ಬೆಳವಣಿಗೆಯನ್ನು ದಾಖಲಿಸಿದೆ. ೨೦೧೪-೧೫ರಲ್ಲಿ ರಾಜ್ಯದ ೨೧ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳ ಪೈಕಿ ೨೦ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು ಪ್ರಸಕ್ತ ಸಾಲಿನಲ್ಲಿ ಲಾಭಾಂಶವನ್ನು ದಾಖಲಿಸಿದ್ದವು. ಈ ಸಾಲ ಸಂಸ್ಥೆಗಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲವನ್ನು ನೀಡುತ್ತಿದ್ದು, ವೈಯಕ್ತಿಕ ಸಾಲಗಾರರೊಂದಿಗೆ ನೇರವಾಗಿ ವ್ಯವಹರಿಸುತ್ತಿದೆ.

ರಾಜ್ಯದಲ್ಲಿರುವ ಒಟ್ಟು ಕಂದಾಯ ಜಿಲ್ಲೆಗಳ ಸಂಖ್ಯೆ ೩೦. ಕೆಲವು ಜಿಲ್ಲೆಗಳು ಇತ್ತೀಚೆಗೆ ೨/೩ ವರ್ಷಗಳಲ್ಲಿ ಹಿಂದೆ ರಚನೆಯಾಗಿವೆ. ೧೯೯೭-೯೮ರಲ್ಲಿ ಬಹುಪಾಲು ಹೊಸ ಜಿಲ್ಲೆಗಳು ರಚನೆಯಾದವು. ಹೊಸದಾಗಿ ರಚನೆಯಾದ ಜಿಲ್ಲೆಗಳಿಗೆ ಪ್ರತ್ಯೇಕವಾದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ರಚನೆಯಾಗಬೇಕಾಗಿದೆ. ಉದಾ: ಬೆಂಗಳೂರು ನಗರ ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗೆ ಸೇರಿ ಒಂದೇ ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು ಇರುವುದು. ಅದರಂತೆ ಮೈಸೂರು ಚಾಮರಾಜನಗರ ಸೇರಿ ಒಂದೇ ಬ್ಯಾಂಕು ಇರುವುದು. ವಿವರಗಳಿಗೆ ಕೋಷ್ಟಕ ಕೆಳಗಿನ ಅನ್ನು ನೋಡಿ

**ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳ ಕ್ರೋಢೀಕರಿಸಿದ ಆರ್ಥಿಕ ಮಟ್ಟ (ರೂ. ಕೋಟಿಗಳಲ್ಲಿ)**

| ವಿವರಗಳು | ೨೦೧೨-೧೩ | ೨೦೧೩-೧೪ | ೨೦೧೪-೧೫ |
|---|---|---|---|
| ಜಿಲ್ಲಾ ಸಹಕಾರಿ ಕೇಂದ್ರ ಸಹಕಾರಿ ಬ್ಯಾಂಕುಗಳ ಸಂಖ್ಯೆ | ೨೧ | ೨೧ | ೨೧ |
| ಒಟ್ಟು ಷೇರು ಬಂಡವಾಳ | ೫೩೭.೨೪ | ೬೨೮.೭೫ | ೮೦೮.೨೬ |
| ರಾಜ್ಯ ಸರ್ಕಾರದ ಷೇರು ಬಂಡವಾಳ | ೨೨.೫೬ | ೧೫.೭೩ | ೧೫.೭೩ |
| ಶೇಕಡವಾರು ರಾಜ್ಯ ಸರ್ಕಾರದ ಷೇರು ಬಂಡವಾಳ | ೪.೨೦ | ೨.೫೦ | ೧.೫೭ |
| ಠೇವಣಿಗಳು | ೧೦೭೭೩೮.೭೦ | ೧೩೦೨೨.೮೯ | ೧೫೦೭೨.೯೩ |
| ಪಡೆದ ಸಾಲ | ೪೭೯೯.೯೨ | ೫೬೪೨.೨೩ | ೭೧೮೮.೮೬ |
| ವಸೂಲಾಗಬೇಕಾದ ಸಾಲ ಮತ್ತು ಮುಂಗಡಗಳು | ೧೩೧೮೧.೪೯ | ೧೫೬೧೭.೨೧ | ೧೬೫೬೦.೬೭ |
| ಬ್ಯಾಂಕುಗಳು ದಾಖಲಿಸಿರುವ ಲಾಭಾಂಶ | ೨೦ | ೨೧ | ೨೦ |

### ಕೃಷಿ ಸಾಲ ವಿತರಣೆ

೩೧-೩-೨೦೧೫ರಲ್ಲಿ ರಾಜ್ಯದಲ್ಲಿನ ಸಹಕಾರಿ ಸಾಲ ವ್ಯವಸ್ಥೆಯ ಮುಖಾಂತರ ನೀಡಿದ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳ ವಿತರಣೆಯು ಕ್ರಮವಾಗಿ ರೂ.೯೨೮೫.೯೯ ಕೋಟಿ, ರೂ.೨೯೨.೯೫ ಕೋಟಿ ಮತ್ತು ರೂ.೩೧೭.೬೬ ಕೋಟಿಗಳಾಗಿದ್ದು, ಇದು ಹಿಂದಿನ ಸಾಲಿನ ಮಾರ್ಚ್ ಅಂತ್ಯದಲ್ಲಿದ್ದ ರೂ.೭೫೫೯.೭೩ ಕೋಟಿ ಅಲ್ಪಾವಧಿ ಸಾಲ, ರೂ.೩೦೯.೦೮ ಕೋಟಿ ಮಧ್ಯಮಾವಧಿ ಸಾಲ ಮತ್ತು ರೂ.೨೧೨.೦೦೦ ಕೋಟಿ ದೀರ್ಘಾವಧಿ ಸಾಲಕ್ಕೆ ಎದುರಾಗಿರುತ್ತದೆ.

### ದೀರ್ಘಾವಧಿ ಕೃಷಿ ಸಾಲ ವ್ಯವಸ್ಥೆ

ರಾಜ್ಯ ಮಟ್ಟದಲ್ಲಿ ಅಪೆಕ್ಸ್ ಬ್ಯಾಂಕ್, ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು (ಕಾಸ್ಕಾರ್ಡ್) ಮತ್ತು ೧೭೭ ಶಾಖೆಗಳಿರುವ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳು ತಾಲ್ಲೂಕು ಮಟ್ಟದಲ್ಲಿ ಎರಡು ಹಂತದ ದೀರ್ಘಾವಧಿ ಸಾಲ ನೀಡಿಕೆ ವ್ಯವಸ್ಥೆಯಲ್ಲಿ ಪಾಲ್ಗೊಂಡಿವೆ. ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು (ನಬಾರ್ಡ್). ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿಗೆ ನೀಡಲಾದ ಸಾಲದ ಮೇಲೆ ಪುನರ್ಧನವನ್ನು ನೀಡುತ್ತದೆ. ಕರ್ನಾಟಕ ರಾಜ್ಯದಲ್ಲಿ ವಿವಿಧ ಅವಧಿಯ ಕೃಷಿ ಸಾಲದ ವ್ಯವಸ್ಥೆಯ ಕಾರ್ಯನಿರ್ವಹಣೆ (೨೦೧೩-೧೪ರಿಂದ ೨೦೧೫-೧೬ರ ಜನವರಿವರೆಗೆ)ಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

(ರೂ. ಕೋಟಿಗಳಲ್ಲಿ)

| ವರ್ಷ | ಅಲ್ಪಾವಧಿ ಸಾಲ | | ಮಧ್ಯಮಾವಧಿ ಸಾಲ | | ದೀರ್ಘಾವಧಿ ಸಾಲ | | ಒಟ್ಟು ಸಾಲ | | ಶೇಕಡ |
|---|---|---|---|---|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ | |
| ೨೦೧೩-೧೪ | ೭೯೩೬.೦೦ | ೭೫೫೯.೭೩ | ೩೨೫.೦೦ | ೩೦೯.೦೮ | ೧೮೩.೯೮ | ೨೧೨.೦೦ | ೮೪೪೪.೯೮ | ೮೦೮೦.೮೧ | ೯೫.೧೩ |
| ೨೦೧೪-೧೫ | ೧೦೦೦೦.೦೦ | ೯೨೮೫.೯೯ | ೪೦೦.೦೦ | ೨೯೨.೯೫ | ೩೦೦.೦೦ | ೩೧೭.೬೬ | ೧೦೭೦೦ | ೯೮೯೬.೬೦ | ೯೨.೪೯ |
| ೨೦೧೫-೧೬ | ೧೦೦೦೦.೦೦ | ೧೦೨೩೫.೬೩ | ೪೦೦.೦೦ | ೩೭೩.೭೯ | ೨೩೮.೦೦ | ೨೬೨.೫೦ | ೧೦೬೩೮ | ೧೦೮೭೧.೯೨ | ೧೦೨.೧೯ |

**ರಾಜ್ಯದಲ್ಲಿನ ಸಹಕಾರಿ ಸಾಲ ವ್ಯವಸ್ಥೆಯಲ್ಲಿ, ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲ ವಸೂಲಾತಿಯಲ್ಲಿನ ತುಲನಾತ್ಮಕ ಸ್ಥಿತಿಯನ್ನು ೨೦೧೩-೧೪ರಿಂದ ೨೦೧೫-೧೬ರವರೆಗೆ ಈ ಕೆಳಗೆ ನೀಡಲಾಗಿದೆ.**

(ರೂ. ಕೋಟಿಗಳಲ್ಲಿ)

| ವರ್ಷ | ಅಲ್ಪಾವಧಿ ಸಾಲ | | | | ಮಧ್ಯಮಾವಧಿ ಸಾಲ | | | | ದೀರ್ಘಾವಧಿ ಸಾಲ | | | |
|---|---|---|---|---|---|---|---|---|---|---|---|---|
| | ಬೇಡಿಕೆ | ವಸೂಲಿ | ಬಾಕಿ | ಶೇ.ವಾರು ವಸೂಲಿ | ಬೇಡಿಕೆ | ವಸೂಲಿ | ಬಾಕಿ | ಶೇ.ವಾರು ವಸೂಲಿ | ಬೇಡಿಕೆ | ವಸೂಲಿ | ಬಾಕಿ | ಶೇ.ವಾರು ವಸೂಲಿ % |
| ೨೦೧೩-೧೪ | ೬೨೫೭.೧೬ | ೬೦೬೧.೨೦ | ೧೯೫.೯೬ | ೯೬.೮೭ | ೧೮೨.೭೨ | ೧೫೭.೭೭ | ೨೪.೯೫ | ೮೬.೩೫ | ೬೦೫.೨೦ | ೩೫೬.೨೩ | ೨೪೮.೯೭ | ೫೮.೮೭ |
| ೨೦೧೪-೧೫ | ೭೪೪೫.೫೧ | ೭೨೪೨.೯೫ | ೨೦೨.೫೬ | ೯೭.೨೮ | ೩೦೮.೧೩ | ೨೭೬.೨೨ | ೩೧.೯೧ | ೮೯.೬೪ | ೫೮೯.೧೭ | ೩೦೪.೦೯ | ೨೮೫.೦೮ | ೫೧.೬೧ |
| ೨೦೧೫-೧೬ | ೯೭೫೭.೩೨ | ೯೫೯೪.೦೬ | ೧೬೩.೨೬ | ೯೮.೩೩ | ೨೧೦.೧೮ | ೧೮೨.೧೮ | ೨೮.೦೦ | ೮೬.೬೮ | ೫೯೦.೬೯ | ೨೧೮.೫೮ | ೩೭೨.೧೧ | ೩೭ (ತಾತ್ಕಾಲಿಕ) |

**ದಿ: ೧-೪-೨೦೧೫ರಿಂದ ೩೧-೦೩-೨೦೧೬ರ ವರೆಗೆ ವಿತರಿಸಿರುವ ಕೃಷಿ ಸಾಲದ ವಿವರವನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.**

(ರೂ. ಕೋಟಿಗಳಲ್ಲಿ)

| ಕ್ರ. ಸಂ. | ವಿವರ | ಸಂಖ್ಯೆ | ಮೊತ್ತ | ಈ ಪೈಕಿ ಹೊಸ ಸದಸ್ಯರಿಗೆ ನೀಡಿರುವ ಸಾಲ | | ಈ ಪೈಕಿ ಪ.ಜಾ/ಪ.ಪಂ. ಸದಸ್ಯರಿಗೆ ನೀಡಿರುವ ಸಾಲ | |
|---|---|---|---|---|---|---|---|
| | | | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| ೧. | ಅಲ್ಪಾವಧಿ ಸಾಲ | ೨೨೫೬೧೨೯ | ೧೦೨೩೫.೬೩ | ೧೩೬೫೭೧ | ೬೨೪.೬೩ | ೨೯೫೧೦೧ | ೧೦೭೮.೫೭ |
| ೨. | ಮಧ್ಯಮಾವಧಿ ಸಾಲ | ೨೨೪೭೮ | ೩೭೩.೭೯ | ೨೨೪೦೨ | ೩೬೮.೩೧ | ೨೫೬೨ | ೨೯.೮೮ |
| ೩. | ದೀರ್ಘಾವಧಿ ಸಾಲ | ೧೭೮೮೩ | ೨೬೨.೫೦ | ೧೦೭೪೭ | ೧೧೫.೯೭ | ೧೩೮೯ | ೧೯.೦೯ |
| ಒಟ್ಟು | | ೨೨೯೬೪೯೦ | ೧೦೮೭೧.೯೨ | ೧೬೯೭೨೦ | ೧೧೦೮.೯೧ | ೨೯೯೦೫೨ | ೧೧೨೭.೫೪ |

**ಪ್ರಾಥಮಿಕ ವ್ಯವಸಾಯ ಪತ್ತಿನ ಸಹಕಾರ ಸಂಘಗಳ (PACS) ಮೂಲಕ ವಿತರಿಸಲಾದ ಅಲ್ಪಾವಧಿ ಕೃಷಿ ಸಾಲದ ವಿತರಣೆಯಲ್ಲಿ ವಿವಿಧ ಸಂಸ್ಥೆಗಳು ವಿನಿಯೋಗಿಸಿದ ಮೊತ್ತವು ಈ ಕೆಳಕಂಡಂತಿರುತ್ತದೆ**

| ಕ್ರ. ಸಂ | ಸಂಸ್ಥೆಯ ಹೆಸರು | ವಿನಿಯೋಗಿಸಿದ ಮೊತ್ತ (ರೂ. ಕೋಟಿಗಳಲ್ಲಿ) |
|---|---|---|
| ೧. | ನಬಾರ್ಡ್ | ೩೯೫೦.೦೦ |
| ೨. | ಅಪೆಕ್ಸ್ ಬ್ಯಾಂಕ್ | ೧೫೪೦.೩೭ |
| ೩. | ಡಿ.ಸಿ.ಸಿ. ಬ್ಯಾಂಕ್ | ೪೩೩೪.೪೫ |
| ೪. | ಪ್ಯಾಕ್ಸ್‌ಗಳ ಸ್ವಂತ ಬಂಡವಾಳ | ೧೯೫.೩೯ |
| ೫. | ಕಮರ್ಷಿಯಲ್ ಬ್ಯಾಂಕ್ | ೨೧೫.೪೨ |
| ಒಟ್ಟು | | ೧೦೨೩೫.೬೩ |

### ಕೃಷಿ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವ ಬಗ್ಗೆ

ರೈತರು ಕೃಷಿ ಸಾಲದ ಮೇಲಿನ ಬಡ್ಡಿಯನ್ನು ದಿನಾಂಕ ೩೧-೦೩-೨೦೧೬ರೊಳಗೆ ಪಾವತಿ ಮಾಡಿದ ಪಕ್ಷದಲ್ಲಿ ಸರ್ಕಾರವು ದಿನಾಂಕ ೩೦-೯-೨೦೧೫ರ ಅಂತ್ಯಕ್ಕೆ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲು ನಿರ್ಧರಿಸಿದೆ. ಇದರಿಂದ ಸುಮಾರು ೨.೦೭ ಲಕ್ಷ ರೈತರಿಗೆ ಅನುಕೂಲವಾಗಲಿದ್ದು, ಇದಕ್ಕಾಗಿ ರಾಜ್ಯ ಸರ್ಕಾರವು ರೂ.೧೮೮.೩೭ ಕೋಟಿಗಳನ್ನು ಒದಗಿಸಿದೆ.

### ಪ್ರಾಥಮಿಕ ಸಹಕಾರಿ ಕೃಷಿ ಪತ್ತಿನ ಸಹಕಾರ ಸಂಘಗಳ ವ್ಯಾಪಾರ ಅಭಿವೃದ್ಧಿ ಯೋಜನೆ (ಬಿ.ಡಿ.ಪಿ.)(Business Developments programme)

೧೯೯೫-೯೬ ರಿಂದ ವ್ಯಾಪಾರ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿವೆ. ಸದರಿ ಯೋಜನೆಯಡಿಯಲ್ಲಿ ಮಾರ್ಚ್ ೨೦೧೫ರ ಅಂತ್ಯದವರೆಗೆ ೪೭೮೩ ಸಹಕಾರ ಸಂಘಗಳನ್ನು ಒಳಪಡಿಸಲಾಗಿದೆ.

ವ್ಯಾಪಾರ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಈ ೪೭೮೩ ಸಹಕಾರ ಸಂಘಗಳು ದಿನಾಂಕ ೩೧-೩-೨೦೧೫ಕ್ಕೆ ಪತ್ತಿನ ಮತ್ತು ಪತ್ತೇತರ ವ್ಯವಹಾರ ಕ್ರಮವಾಗಿ ೧೨೩೧೭.೧೧ ಕೋಟಿ ರೂ ಗಳು ಮತ್ತು ೧೭೭೧.೩೮ ಕೋಟಿ ರೂ. ಒಟ್ಟಾರೆಯಾಗಿ ರೂ.೧೪೦೮೮.೪೯ ಕೋಟಿಗಳ ವ್ಯವಹಾರ ಹೊಂದಿದ್ದು ಇದು ವಾರ್ಷಿಕ ಗುರಿಯ ಎದುರಾಗಿ ಶೇ.೯೦.೦೪ರಷ್ಟು ಸಾಧನೆ ಮಾಡಿರುತ್ತವೆ. ವಿವರಗಳಿಗೆ ಮುಂದಿನ ಕೋಷ್ಟಕ ನೋಡಿ

**ವ್ಯಾಪಾರ ಅಭಿವೃದ್ಧಿ ಯೋಜನೆಯಡಿ ಆದ ಪ್ರಗತಿ (ರೂ. ಕೋಟಿಗಳಲ್ಲಿ)**

| ವಿವರ | ೨೦೧೨-೧೩ | | | ೨೦೧೩-೧೪ | | | ೨೦೧೪-೧೫ | | |
|---|---|---|---|---|---|---|---|---|---|
| | ವಾರ್ಷಿಕ ಗುರಿ | ವಾರ್ಷಿಕ ಸಾಧನೆ | ಶೇಕಡಾವಾರು ಸಾಧನೆ | ವಾರ್ಷಿಕ ಗುರಿ | ವಾರ್ಷಿಕ ಸಾಧನೆ | ಶೇಕಡಾವಾರು ಸಾಧನೆ | ವಾರ್ಷಿಕ ಗುರಿ | ವಾರ್ಷಿಕ ಸಾಧನೆ | ಶೇಕಡಾವಾರು ಸಾಧನೆ |
| ಪತ್ತು | ೧೦೦೯೮.೦೯ | ೯೩೨೭.೮೭ | ೯೨.೩೭ | ೧೧೨೨೨.೪೦ | ೧೦೪೪೭.೧೧ | ೯೩.೦೯ | ೧೩೩೮೮.೧೬ | ೧೨೩೧೭.೧೧ | ೯೨.೦೦ |
| ಪತ್ತೇತರ | ೧೯೦೧.೩೫ | ೧೫೫೯.೭೨ | ೮೨.೦೩ | ೨೧೩೯.೪೧ | ೧೫೪೦.೨೧ | ೭೧.೯೯ | ೨೨೨೯.೬೦ | ೧೭೭೧.೩೮ | ೭೯.೦೦ |
| ಒಟ್ಟು | ೧೧೯೯೯.೪೪ | ೧೦೮೮೭.೫೯ | ೯೦.೭೩ | ೧೩೩೬೧.೮೧ | ೧೧೯೮೭.೩೨ | ೮೯.೭೧ | ೧೫೬೧೭.೭೬ | ೧೪೦೮೮.೪೯ | ೯೦.೦೪ |

### ರೈತರಿಗೆ ಶೇಕಡ ೩, ೧ ಮತ್ತು ೦ರ ರಿಯಾಯಿತಿ ದರದಲ್ಲಿ ಕೃಷಿ ಸಾಲ ವಿತರಿಸುವ ಯೋಜನೆ

ರಾಜ್ಯದ ರೈತರಿಗೆ ಶೇಕಡ ೬ರ ಬಡ್ಡಿದರದಲ್ಲಿ ಸಹಕಾರ ಸಂಸ್ಥೆಗಳ ಮೂಲಕ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲಗಳನ್ನು ವಿತರಿಸುವ ಯೋಜನೆಯನ್ನು ಸರ್ಕಾರವು ದಿನಾಂಕ ೦೧-೦೪-೨೦೦೪ರಿಂದ ಅನುಷ್ಠಾನಗೊಳಿಸಿದೆ. ನಂತರದ ವರ್ಷಗಳಲ್ಲಿ ಕೃಷಿ ಸಾಲಗಳ ಮೇಲಿನ ಬಡ್ಡಿ ದರವನ್ನು ಕಡಿತಗೊಳಿಸುತ್ತಾ ಬಂದಿದ್ದು ೨೦೦೬-೦೭ ಮತ್ತು ೨೦೦೭-೦೮ನೇ ಸಾಲಿಗೆ ಶೇ.೪.೦೦ರ ಬಡ್ಡಿ ದರ ಮತ್ತು ೨೦೦೮-೦೯ರಿಂದ ೨೦೧೦-೧೧ನೇ ಸಾಲಿಗೆ ಶೇ.೩.೦೦ರ ಬಡ್ಡಿ ದರದಲ್ಲಿ ಸಾಲ ನೀಡಲಾಗಿದೆ. ೨೦೧೧-೧೨ನೇ ಸಾಲಿಗೆ ಶೇ.೧ರ ಬಡ್ಡಿ ದರದಲ್ಲಿ ಮತ್ತು ೨೦೧೨-೧೩ನೇ ಸಾಲಿನಲ್ಲಿ ರೂ.೧.೦೦ ಲಕ್ಷವರೆಗೆ ಶೂನ್ಯ ಬಡ್ಡಿ ದರದಲ್ಲಿ ಮತ್ತು ೩.೦೦ ಲಕ್ಷದವರೆಗಿನ ಅಲ್ಪಾವಧಿ ಬೆಳೆ ಸಾಲಗಳನ್ನು ಶೇ.೧ರ ಬಡ್ಡಿ ದರದಲ್ಲಿ ವಿತರಿಸಲಾಗಿದೆ. ೨೦೧೩-೧೪ನೇ ಸಾಲಿಗೆ ರೂ.೨.೦೦ ಲಕ್ಷಗಳವರೆಗಿನ ಅಲ್ಪಾವಧಿ ಕೃಷಿ ಸಾಲಗಳಿಗೆ ಬಡ್ಡಿದರವನ್ನು ಶೇ.೦ಕ್ಕೆ ಇಳಿಸಲಾಗಿದೆ. ರೂ.೨.೦೦ ಲಕ್ಷದಿಂದ ರೂ.೩.೦೦ ಲಕ್ಷದವರೆಗಿನ ಅಲ್ಪಾವಧಿ ಕೃಷಿ ಸಾಲವನ್ನು ಶೇ.೧ರ ಬಡ್ಡಿದರದಲ್ಲಿ ಹಾಗೂ ರೂ.೧೦.೦೦ ಲಕ್ಷದವರೆಗಿನ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳನ್ನು ಶೇ.೩.೦೦ರ ಬಡ್ಡಿದರದಲ್ಲಿ ವಿತರಿಸಲಾಗಿದೆ.

೨೦೧೪-೧೫ನೇ ಸಾಲಿಗೆ ರೂ.೩.೦೦ ಲಕ್ಷದವರೆಗಿನ ಅಲ್ಪಾವಧಿ ಕೃಷಿ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ಹಾಗೂ ರೂ.೧೦.೦೦ ಲಕ್ಷದವರೆಗಿನ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲವನ್ನು ಶೇ.೩.೦೦ರ ಬಡ್ಡಿದರದಲ್ಲಿ ವಿತರಿಸಲಾಗಿದ್ದು, ೨೦೧೫-೧೬ನೇ ಸಾಲಿಗೂ ಸಹ ಈ ಯೋಜನೆಯನ್ನು ಮುಂದುವರೆಸಲಾಗಿದೆ.

ಸರ್ಕಾರವು ರಿಯಾಯಿತಿ ಬಡ್ಡಿ ದರದಲ್ಲಿ ವಿತರಿಸಿದ ಕೃಷಿ ಸಾಲಗಳನ್ನು ವಿತರಿಸಿದ ಸಹಕಾರ ಸಂಸ್ಥೆಗಳಿಗೆ ನಿಗದಿತ ದರದಲ್ಲಿ ಬಡ್ಡಿ ಸಹಾಯಧನವನ್ನು ನೀಡಲಾಗುತ್ತಿದ್ದು, ೨೦೧೪-೧೫ನೇ ಸಾಲಿಗೆ ರೂ.೭೨೪.೪೪ ಕೋಟಿಗಳ ಆಯವ್ಯಯ ಅವಕಾಶ ಕಲ್ಪಿಸಿದ್ದು ಈ ಪೈಕಿ ಪೂರ್ಣ ಮೊತ್ತವನ್ನು ೧೫೮೭೩೨೮ ಫಲಾನುಭವಿಗಳಿಗೆ ಬಿಡುಗಡೆ ಮಾಡಲಾಗಿದೆ. ೨೦೧೫-೧೬ನೇ ಸಾಲಿನಲ್ಲಿ ರೂ.೭೩೭.೪೧ ಕೋಟಿಗಳ ಆಯವ್ಯಯ ಅವಕಾಶವನ್ನು ಕಲ್ಪಿಸಿದ್ದು, ಈ ಪೈಕಿ ಅಕ್ಟೋಬರ್ ೨೦೧೫ರ ಅಂತ್ಯದವರೆಗೆ ೯೧೯೧೯ ರೈತರಿಗೆ ರೂ.೩೬೮.೨೦ ಕೋಟಿ ಮೊತ್ತವನ್ನು ಸಹಕಾರ ಸಂಸ್ಥೆಗಳಿಂದ ಬಿಡುಗಡೆ ಮಾಡಲಾಗಿದೆ.

### ಸ್ವಸಹಾಯ ವರ್ಗಗಳಿಗೆ ಸಾಲದ ಮೇಲಿನ ಬಡ್ಡಿಗೆ ಸಹಾಯಧನ

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಸಹಾಯ ಗುಂಪುಗಳಿಗೆ ಪತ್ತಿನ ಸಹಕಾರ ಸಂಸ್ಥೆಗಳ ಮೂಲಕ ಶೇಕಡ ೪ರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯನ್ನು ದಿನಾಂಕ

೦೧-೦೪-೨೦೦೭ರಿಂದ ಜಾರಿಗೊಳಿಸಲಾಗಿದೆ. ಈ ಸಂಬಂಧದಲ್ಲಿ ಸಹಕಾರ ಸಂಸ್ಥೆಗಳಿಗೆ ಸರ್ಕಾರವು ನಿಗದಿತ ಪ್ರಮಾಣದ ಬಡ್ಡಿ ಸಹಾಯಧನವನ್ನು ಭರಿಸಿಕೊಡುತ್ತಿದೆ. ೨೦೧೪-೧೫ನೇ ಸಾಲಿನಲ್ಲಿ ೩೭೩೦೪ ಸ್ವಸಹಾಯ ಗುಂಪುಗಳಿಗೆ ರೂ.೬೪೭.೯೨ ಕೋಟಿಗಳ ಸಾಲವನ್ನು ವಿತರಿಸಲಾಗಿದೆ ಹಾಗೂ ರೂ.೨೦.೦೦ ಕೋಟಿ ಬಡ್ಡಿ ಸಹಾಯಧನವನ್ನು ಸಂಬಂಧಿಸಿದ ಸಹಕಾರ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ.

೨೦೧೫-೧೬ನೇ ಸಾಲಿನ ಸೆಪ್ಟೆಂಬರ್ ಅಂತ್ಯಕ್ಕೆ ೪೭೫೮ ಗುಂಪುಗಳನ್ನು ರಚಿಸಿದ್ದು, ಒಟ್ಟಾರೆ ೨೩೩೧೫೨ ಗುಂಪುಗಳು ರಚನೆಯಾಗಿರುತ್ತದೆ. ಈ ಪೈಕಿ ಸದರಿ ಸಾಲಿನಲ್ಲಿ ೧೫೨೩೦ ಗುಂಪುಗಳಿಗೆ ರೂ.೨೫೭.೩೭ ಕೋಟಿ ಸಾಲವನ್ನು ನೀಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.೮೬.೦೦ ಕೋಟಿಗಳ ಆಯವ್ಯಯ ಅವಕಾಶ ಕಲ್ಪಿಸಿದ್ದು, ಸೆಪ್ಟೆಂಬರ್ ೨೦೧೫ರ ಅಂತ್ಯಕ್ಕೆ ರೂ.೧೩.೦೯ ಕೋಟಿ ಬಡ್ಡಿ ಸಹಾಯಧನವನ್ನು ಸಹಕಾರ ಸಂಘಗಳ ಮುಖೇನ ಬಿಡುಗಡೆ ಮಾಡಲಾಗಿದೆ.

### ಬಡ್ಡಿ ಮನ್ನಾ ಯೋಜನೆ

ಕೃಷಿ ಸಾಲದ ಮೇಲಿನ ಬಡ್ಡಿ ಮನ್ನಾ ಯೋಜನೆಯಡಿ ೨೦೧೫-೧೬ನೇ ಸಾಲಿನಲ್ಲಿ ರೈತರು ಪಾವತಿಸಬೇಕಾದ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲದ ಕಂತನ್ನು ಒಂದು ವರ್ಷಕ್ಕೆ ಮುಂದೂಡಲಾಗಿದೆ.

ಪ್ರಸಕ್ತ ವರ್ಷದಲ್ಲಿ ರಾಜ್ಯದಲ್ಲಿ ಬರಪೀಡಿತ ಪ್ರದೇಶದ ರೈತರಿಗೆ ಪರಿಹಾರ ನೀಡುವ ನಿಟ್ಟಿನಲ್ಲಿ ರೈತರು ಸಹಕಾರಿ ಬ್ಯಾಂಕುಗಳಿಗೆ ಪಾವತಿಬೇಕಾಗಿರುವ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲದ ಕಂತನ್ನು ಮತ್ತೊಂದು ವರ್ಷಕ್ಕೆ ಮುಂದೂಡಲಾಗಿದೆ. ೨.೯೩ ಲಕ್ಷ ರೈತರಿಂದ ಪಾವತಿಬೇಕಾಗಿದ್ದು ರೂ.೬೫.೮೭ ಕೋಟಿಗಳ ಬಡ್ಡಿ ಹೊರೆಯನ್ನು ರಾಜ್ಯ ಸರ್ಕಾರವು ಭರಿಸಲು ತೀರ್ಮಾನಿಸಲಾಗಿದೆ.

### ಕರ್ನಾಟಕ ರಾಜ್ಯ ಸಹಕಾರಿ ಪಟ್ಟಣ ಬ್ಯಾಂಕುಗಳ ಮಹಾಮಂಡಳ (ನಿ.) ಬೆಂಗಳೂರು

ಕರ್ನಾಟಕ ರಾಜ್ಯ ಸಹಕಾರಿ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ೧೯೬೫ರಲ್ಲಿ ಆರಂಭವಾಗಿದ್ದು, ಪ್ರಾಥಮಿಕ ಸಹಕಾರಿ ಪಟ್ಟಣ ಬ್ಯಾಂಕುಗಳನ್ನು ತನ್ನ ಸದಸ್ಯರನ್ನಾಗಿ ಮಾಡಿಕೊಳ್ಳುವುದರೊಂದಿಗೆ ನೊಂದಾವಣೆಗೊಂಡಿದ್ದ ತನ್ನ ಸದಸ್ಯ ಸಂಸ್ಥೆಗಳಿಗೆ ಪೂರಕವಾಗಿ ಕೆಲಸ ನಿರ್ವಹಿಸುತ್ತದೆ. ಪಟ್ಟಣ ಬ್ಯಾಂಕುಗಳ ದಾವಾ ಪ್ರಕರಣಗಳ ಇತ್ಯರ್ಥಕ್ಕಾಗಿ ನಿಯಮ ೪೧೧ ಇಬ್ಬರು ಪ್ರತ್ಯೇಕ ಸಹಕಾರ ಸಂಘಗಳ ಜಂಟಿ ನಿಬಂಧಕರು ಕೆಲಸ ನಿರ್ವಹಿಸುತ್ತಿದ್ದಾರೆ.

### ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳ (ನಿ.) ಬೆಂಗಳೂರು

ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ದಿನಾಂಕ ೨-೧೧-೨೦೦೪ರಲ್ಲಿ ನೊಂದಣಿಯಾಗಿದ್ದು, ದಿನಾಂಕ ೩೧-೩-೨೦೧೬ರ ಅಂತ್ಯಕ್ಕೆ ರಾಜ್ಯದಲ್ಲಿ ೬೦೪ ಕೃಷಿಯೇತರ ಪತ್ತಿನ ಸಹಕಾರ ಸಂಘಗಳು ಮಹಾಮಂಡಳದಲ್ಲಿ ಆಜೀವ ಸದಸ್ಯತ್ವವನ್ನು ಪಡೆದಿವೆ. ಮಹಾಮಂಡಳವು ಸದಸ್ಯ ಸಂಘಗಳಿಗೆ ಅಲ್ಪಾವಧಿ ಶಿಕ್ಷಣ ಹಾಗೂ ಆದಾಯ ತೆರಿಗೆ, ಆಡಿಟ್ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಿ ಸಮಸ್ಯೆಗಳ ಬಗ್ಗೆ ಚಿಂತನ ಮಂಥನ ಹಾಗೂ ಆದಾಯ ತೆರಿಗೆ ಬಗ್ಗೆ ಸೂಕ್ತ ಮಾರ್ಗದರ್ಶನ ಅಲ್ಲದೆ, ಸುಸ್ತಿಸಾಲಗಳ ವಸೂಲಿ ಕುರಿತು, ಪ್ರತ್ಯೇಕ ಅದಾಲತ್ ಸ್ಥಾಪನೆ ಮತ್ತು ಸದಸ್ಯರಿಂದ ಪಡೆಯುವ ಠೇವಣಿ ಹಣದ ರಕ್ಷಣೆಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಮಾರ್ಗದರ್ಶನ ನೀಡುತ್ತಿದೆ.

### ಕರ್ನಾಟಕ ರಾಜ್ಯ ಸಹಕಾರಿ ಮಾರಾಟ ಮಹಾಮಂಡಳ ನಿಯಮಿತ, ಬೆಂಗಳೂರು

ಕರ್ನಾಟಕ ರಾಜ್ಯ ಸಹಕಾರಿ ಮಾರಾಟ ಮಹಾಮಂಡಳ ನಿಯಮಿತ, ಬೆಂಗಳೂರು ಈ ಸಂಸ್ಥೆಯು ದಿನಾಂಕ ೧೧-೧೧-೧೯೪೩ರಂದು ಸಹಕಾರ ಸಂಘಗಳ ಕಾಯ್ದೆಯಡಿ ನೊಂದಾಯಿಸಲ್ಪಟ್ಟಿದೆ. ಪ್ರಾರಂಭದಲ್ಲಿ ಕಾಫಿ ಬೀಜ, ಸಕ್ಕರೆ, ಬಟ್ಟೆ, ಸಿಮೆಂಟು ಮತ್ತು ಇತರೆ ಗ್ರಾಹಕ ವಸ್ತುಗಳನ್ನು ವಿತರಿಸುತ್ತಿತ್ತು. ನಂತರದ ವರ್ಷಗಳಲ್ಲಿ ರೈತರಿಗೆ ಅಗತ್ಯವಾದ ಕೃಷಿ ಪರಿಕರಗಳಾದ ರಸಗೊಬ್ಬರ ಮತ್ತು ಕ್ರಿಮಿನಾಶಕಗಳನ್ನು ಖರೀದಿಸಿ ವಿತರಣೆ ಮಾಡುವುದು ಹಾಗೂ ರೈತರಿಂದ ಕೃಷಿ ಉತ್ಪನ್ನಗಳ ಖರೀದಿಯ ವ್ಯವಹಾರಗಳನ್ನು ನಡೆಸುತ್ತಿದೆ.

ರಾಜ್ಯದ ರೈತರಿಗೆ ಅವಶ್ಯಕವಾದ ವಿವಿಧ ರಸಗೊಬ್ಬರಗಳನ್ನು ಮತ್ತು ಕ್ರಿಮಿನಾಶಕಗಳನ್ನು ಸಹಕಾರ ಸಂಘಗಳ ಮುಖಾಂತರ ಸಕಾಲದಲ್ಲಿ ಸರಬರಾಜು ಮಾಡುವುದು. ಸರ್ಕಾರದ ಬೆಂಬಲ ಬೆಲೆ ಯೋಜನೆ, ಮಾರುಕಟ್ಟೆ ಮಧ್ಯಂತರ ಪ್ರವೇಶ ಯೋಜನೆಗಳಡಿ ಹಾಗೂ ಸ್ವಂತ ಬಂಡವಾಳದಲ್ಲಿ ರೈತರಿಂದ ವಿವಿಧ ಕೃಷಿ ಉತ್ಪನ್ನಗಳನ್ನು ಖರೀದಿಸುವುದು. ರಾಜ್ಯಾದ್ಯಂತ ಪ್ರಮುಖ ಸ್ಥಳಗಳಲ್ಲಿ ಗೋದಾಮುಗಳನ್ನು ನಿರ್ಮಿಸಿ ಶೇಖರಣಾ ಸೌಲಭ್ಯವನ್ನು ಒದಗಿಸುವುದು. ಇವು ಮಹಾಮಂಡಳದ ಪ್ರಮುಖ ಕಾರ್ಯಚಟುವಟಿಕೆಗಳು ಆಗಿರುತ್ತವೆ.

ರಾಜ್ಯದ ರೈತರಿಗೆ ಸಕಾಲದಲ್ಲಿ ರಸಗೊಬ್ಬರ ಪೂರೈಕೆ ಮಾಡುವ ಸಲುವಾಗಿ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಸಹಕಾರಿ ಮಾರಾಟ ಮಹಾಮಂಡಳ ಮೂಲಕ ರಸಗೊಬ್ಬರ ಕಾಪುದಾಸ್ತಾನು ಯೋಜನೆಯನ್ನು ೨೦೦೮-೦೯ನೆಯ ಸಾಲಿನಿಂದ ಅನುಷ್ಠಾನಗೊಳಿಸಿದ್ದು ಇಲ್ಲಿಯವರೆಗೆ ರೂ.೫೮೦೦ ಕೋಟಿಗಳ ಮೌಲ್ಯದ ೬೪.೬೬ ಲಕ್ಷ ಟನ್ ರಸಗೊಬ್ಬರ ವಹಿವಾಟು ನಡೆಸಲು ಅವಕಾಶವಾಗಿ, ಹಾಗೂ ಇದರಿಂದ ಮಹಾಮಂಡಳದ ಆರ್ಥಿಕ ಸ್ಥಿತಿ ಸುಧಾರಿಸಲು ಸಾಧ್ಯವಾಗಿರುತ್ತದೆ. ಸದರಿ ಯೋಜನೆಯಡಿ ೨೦೧೫-೧೬ನೆಯ ಸಾಲಿನಲ್ಲಿ ರಸಗೊಬ್ಬರ ಖರೀದಿಗೆ ಬ್ಯಾಂಕುಗಳ ಮೂಲಕ ರೂ.೮೦೦ ಕೋಟಿಗಳವರೆಗೆ ಸಾಲ ಪಡೆಯಲು ಮಹಾಮಂಡಳಕ್ಕೆ ಅವಕಾಶ ಕಲ್ಪಿಸಿ ಸರ್ಕಾರವು ಭದ್ರತೆ ನೀಡಿರುತ್ತದೆ.

ಮಹಾಮಂಡಳವು ಒಟ್ಟು ೪೮೩ (A ಮತ್ತು B ವರ್ಗ ಸೇರಿ) ಸದಸ್ಯತ್ವ ಹೊಂದಿದ್ದು ಒಟ್ಟು ಷೇರು ಬಂಡವಾಳ ರೂ.೭೧೨ ಲಕ್ಷ ಹೊಂದಿರುತ್ತದೆ. ದುಡಿಯುವ ಬಂಡವಾಳ ರೂ.೫೯೦.೬೪ ಲಕ್ಷವಾಗಿತ್ತು. ೨೦೧೫-೧೬ನೆಯ ಸಾಲಿನಲ್ಲಿ ರೂ.೩.೦೮ ಲಕ್ಷಗಳಷ್ಟು ರಸಗೊಬ್ಬರ ಮಾರಾಟ ಮತ್ತು ಕೃಷಿ

ಉತ್ಪನ್ನಗಳ ಮಾರಾಟ ರೂ.೭೯೪ ಲಕ್ಷಗಳಷ್ಟು ಇರುತ್ತದೆ. ಸದರಿ ಮಹಾಮಂಡಳವು ರೈತರಿಗೆ ರಸಗೊಬ್ಬರ, ಕೀಟನಾಶಕ, ಬೀಜಗಳು, ಕೃಷಿ ಉಪಕರಣಗಳು ಮತ್ತಿತರೆ ಕೃಷಿ ಪರಿಕರಗಳನ್ನು ಸರಬರಾಜು ಮಾಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ ಹಾಗೂ ವ್ಯವಸಾಯೋತ್ಪನ್ನಗಳ ಮಾರಾಟದಲ್ಲಿ ತೊಡಗಿರುತ್ತದೆ. ಮಹಾಮಂಡಳವು ೨೦೧೫-೧೬ನೆಯ ಸಾಲಿನಲ್ಲಿ ಬೆಂಬಲ ಬೆಲೆ ಯೋಜನೆಯಲ್ಲಿ ರೂ. ೨೦.೬೧ ಲಕ್ಷ ಮೌಲ್ಯದ ಬತ್ತ, ರೂ.೧೪೯೭ ಲಕ್ಷ ಮೌಲ್ಯದ ಬಿಳಿಜೋಳ, ರೂ.೬,೪೭೬ ಲಕ್ಷ ಮೌಲ್ಯದ ರಾಗಿ ಹಾಗೂ ರೂ.೬೭,೧೯೭ ಲಕ್ಷ ಮೌಲ್ಯದ ತೊಗರಿ ಖರೀದಿಸಿದೆ.

ಮಂಡಳವು ರಾಜ್ಯಾದ್ಯಂತ ೬೭ ಸ್ಥಳಗಳಲ್ಲಿ ರೂ.೪೦೦ ಕೋಟಿ ಮೌಲ್ಯದ ಸ್ವಂತ ಆಸ್ತಿ ಕಟ್ಟಡ ಮತ್ತು ಗೋದಾಮುಗಳನ್ನು ಹೊಂದಿರುವುದು. ಮಹಾಮಂಡಳವು ೨೦೧೫-೧೬ರಲ್ಲಿ ವಿವಿಧ ಸಂಸ್ಥೆಗಳಲ್ಲಿ ಷೇರುಗಳಲ್ಲಿ ಹೂಡಿಕೆ ಹಣ ರೂ.೨,೫೯೦ ಲಕ್ಷ, ಸದರಿ ವರ್ಷ ಗಳಿಸಿದ ವ್ಯಾಪಾರ ಲಾಭ ರೂ.೨,೧೬೨ ಲಕ್ಷ ಮತ್ತು ನಿವ್ವಳ ಲಾಭ ರೂ. ೩,೬೯೧ ಲಕ್ಷ ಎಂದು ವರದಿಯಾಗಿದೆ. ಮಹಾಮಂಡಳಕ್ಕೆ ೨೦೧೫-೧೬ರಲ್ಲಿ ವಿವಿಧ ಸಂಘ ಸಂಸ್ಥೆಗಳಿಂದ ಬರಬೇಕಾಗಿದ್ದ ಬಾಕಿ ಮೊತ್ತ ರೂ.೬,೧೩೩ ಲಕ್ಷ ಎಂದು ವರದಿಯಾಗಿದೆ.

### ಕರ್ನಾಟಕ ರಾಜ್ಯ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ನಿ. ಬೆಂಗಳೂರು (ಕೆ.ಎಂ.ಎಫ್.)

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿಯು ರಾಜ್ಯದಲ್ಲಿ ಕ್ಷೀರಕ್ರಾಂತಿಯನ್ನು ಉಂಟುಮಾಡಿದ್ದು ೧೯೮೪ರಲ್ಲಿ ಸ್ಥಾಪನೆಯಾಗಿ, ರಾಜ್ಯದಲ್ಲಿ ಮೂರು ದಶಕಗಳ ಹಿಂದೆ ಹೈನುಗಾರಿಕೆಗೆ ಹೊಸ ರೂಪ ನೀಡಲು ಪ್ರಾರಂಭವಾದ ಹೈನು ಅಭಿವೃದ್ಧಿ ಯೋಜನೆಗಳನ್ನು ರಾಜ್ಯಾದ್ಯಂತ ವಿಸ್ತರಿಸಿ ೧೪ ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳ ಮುಖಾಂತರ ಹೈನುಗಾರರ ಬಾಳಿಗೆ ಮಾರ್ಗದರ್ಶಿಯಾಗಿ ಕೆ.ಎಂ.ಎಫ್. ಕಾರ್ಯ ನಿರ್ವಹಿಸುತ್ತಿದೆ ಹಾಗೂ ಹೈನುಗಾರರ ಅಭಿವೃದ್ಧಿಗಾಗಿ ದೂರಗಾಮಿ ಯೋಜನೆಗಳನ್ನು ಎನ್.ಡಿ.ಡಿ.ಬಿ.ಯ ಸಹಯೋಗದೊಂದಿಗೆ ನಿರ್ವಹಿಸುತ್ತಿದೆ.

ಇಂದು ರಾಜ್ಯದ ಜಿಲ್ಲೆಗಳ ವ್ಯಾಪ್ತಿಯಲ್ಲಿ ೧೪ ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳ ಮೂಲಕ ೧೭೨ ತಾಲ್ಲೂಕುಗಳ ಸುಮಾರು ೨೧,೭೭೭ ಹಳ್ಳಿಗಳನ್ನೊಳಗೊಂಡಂತೆ ೧೪,೮೨೬ ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ನೊಂದಾಯಿಸಿದ್ದು, ೨೦೧೫-೧೬ನೇ ಸಾಲಿನ ಅಂತ್ಯಕ್ಕೆ ೧೩,೨೭೦ ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ. ಇವುಗಳಲ್ಲಿ ಶೇ.೯೬ರಷ್ಟು ಸಂಘಗಳು ಲಾಭದಲ್ಲಿವೆ. ಮಾರ್ಚ್-೨೦೧೬ರ ಅಂತ್ಯಕ್ಕೆ ಸುಮಾರು ೨೩.೪೭ ಲಕ್ಷ ಗ್ರಾಮೀಣ ರೈತರು ಈ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಸದಸ್ಯರಾಗಿದ್ದು, ಇದರಲ್ಲಿ ೮.೨೪ ಲಕ್ಷ ಮಹಿಳಾ ಸದಸ್ಯರು ಇರುತ್ತಾರೆ. ಕ್ಷೀರ ಕ್ರಾಂತಿಯು ವ್ಯವಸಾಯಕ್ಕೆ ಪೂರಕವಾಗಿದ್ದು, ರೈತರ ಆದಾಯವನ್ನು ಹೆಚ್ಚಿಸುವ ಮೂಲಕ ಪಶು ಸಂಗೋಪನೆಯನ್ನು ಒಂದು ಉದ್ಯಮವಾಗಿ ಬೆಳೆಸಲು ಸಹಾಯಕವಾಗಿದೆ. ಕೇವಲ ಬೀದರ್ ಒಂದೇ ಜಿಲ್ಲೆಯಲ್ಲಿ ಸುಮಾರು ೨೭೦ ಹಾಲು ಉತ್ಪಾದಕರ ಸಂಘಗಳು ಮಹಿಳೆಯರಿಂದ ನಿರ್ವಹಿಸಲ್ಪಡುತ್ತವೆ.

ವರ್ಷದ ಎಲ್ಲಾ ೩೬೫ ದಿವಸಗಳು ದಿನಕ್ಕೆ ಎರಡು ಬಾರಿ ಪ್ರಾಥಮಿಕ ಸಂಘಗಳಲ್ಲಿ ಹಾಲಿನ ಶೇಖರಣೆ ಮಾಡುತ್ತಿದ್ದು, ೨೦೧೫-೧೬ನೇ ಸಾಲಿನಲ್ಲಿ ದಿನನಿತ್ಯ ಸರಾಸರಿ ೬೪.೮೩ ಲಕ್ಷ ಕೆ.ಜಿ ಹಾಲನ್ನು ಶೇಖರಣೆ ಮಾಡಲಾಗಿರುತ್ತದೆ. ಮತ್ತು ಹೆಚ್ಚುವರಿ ಹಾಲನ್ನು ಹಾಲಿನ ಉತ್ಪನ್ನಗಳನ್ನಾಗಿ ಪರಿವರ್ತಿಸಲಾಗುತ್ತಿದೆ. ಮಹಾಮಂಡಳಿಯು ಸಹಕಾರಿ ಹೈನು ಉದ್ಯಮದಲ್ಲಿ ರಾಷ್ಟ್ರಮಟ್ಟದಲ್ಲಿ ಎರಡನೇ ಸ್ಥಾನ ಮತ್ತು ದಕ್ಷಿಣ ರಾಜ್ಯಗಳಲ್ಲಿ ಪ್ರಥಮ ಸ್ಥಾನದಲ್ಲಿರುತ್ತದೆ. ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪೂರ್ವ ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಮಧ್ಯಾಹ್ನ ಉಪಹಾರದ ಅಡಿ ನಂದಿನಿ ಹಾಲನ್ನು ಪೂರೈಸಲಾಗುತ್ತಿದೆ.

ಮಹಾಮಂಡಳಿಯ ವ್ಯಾಪ್ತಿಯಲ್ಲಿ ದಿನನಿತ್ಯ ೫೬.೮೦ ಲಕ್ಷ ಲೀಟರ್ ಹಾಲು ಸಂಸ್ಕರಿಸುವ ಸಾಮರ್ಥ್ಯದ ೨೩ ಡೈರಿಗಳು ೨೧.೪೦ ಲಕ್ಷ ಲೀಟರ್ ಹಾಲು ಶೀತಲೀಕರಿಸುವ ೪೫ ಶೀತಲೀಕರಣ ಕೇಂದ್ರಗಳು ಹಾಗೂ ದಿನನಿತ್ಯ ೧೦೦ ಮೆ.ಟನ್ ಹಾಲು ಪುಡಿ ತಯಾರಿಸುವ ೫ ಹಾಲು ಉತ್ಪನ್ನ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. ೨೦೧೫-೧೬ರಲ್ಲಿ ದಿನನಿತ್ಯ ಸರಾಸರಿ ೩೪ ಲಕ್ಷ ಲೀಟರ್ ಹಾಲು ಮಾರಾಟವಾಗುತ್ತಿದ್ದು, ಇದರಲ್ಲಿ ಬೆಂಗಳೂರು ನಗರದಲ್ಲಿ ದಿನನಿತ್ಯ ಸರಾಸರಿ ೧೯ ಲಕ್ಷ ಲೀಟರ್ ಹಾಲು ಮಾರಾಟವಾಗುತ್ತಿದೆ.

ಗ್ರಾಹಕರ ಬೇಡಿಕೆಗಳನ್ನು ಪೂರೈಸಲು ಇತರೆ ಹಾಲು ಉತ್ಪನ್ನಗಳಾದ ಗುಡ್‌ಲೈಫ್, ಯು.ಹೆಚ್.ಟಿ. ಹಾಲು, ಮೊಸರು, ಬೆಣ್ಣೆ, ತುಪ್ಪ, ಎಸ್.ಎಂ.ಪಿ. ಸುವಾಸಿತ ಹಾಲು (೮ ಸ್ವಾದಗಳಲ್ಲಿ) ಮೈಸೂರುಪಾಕ್, ಬಾದಾಮ್ ಪೌಡರ್, ಜಾಮೂನ್ ಮಿಕ್ಸ್, ಮತ್ತು ಬೇಸನ್ ಲಡ್ಡು ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುವುದರ ಜೊತೆಗೆ ಸಿಹಿ ಮೊಸರು, ಕುಡಿಕೆ ಮೊಸರು, ಮಸಾಲ ಮಜ್ಜಿಗೆ, ಐಸ್‌ಕ್ರೀಮ್, ಕುಂದಾ ಉತ್ಪನ್ನಗಳನ್ನು ನಂದಿನಿ ಬ್ರಾಂಡ್ ಹೆಸರಿನಲ್ಲಿ ಮಾರಾಟ ಮಾಡಲಾಗುತ್ತಿದೆ. ಇದರ ಜೊತೆಗೆ ನೂತನ ತಾಂತ್ರಿಕತೆ ಅಳವಡಿಸಿ ವಿವಿಧ ಸ್ವಾದದ ಸುವಾಸಿತ ಹಾಲು ಮತ್ತು ಮಜ್ಜಿಗೆಯನ್ನು ಆಕರ್ಷಕ ಟೆಟ್ರಾಪ್ಯಾಕ್‌ನಲ್ಲಿ ಬಿಡುಗಡೆ ಮಾಡಲಾಗಿದೆ.

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳವು ರಾಜ್ಯದ ಎಲ್ಲಾ ಪ್ರದೇಶಗಳನ್ನು ಸಂಪೂರ್ಣ ಹೈನುಗಾರಿಕೆ ಅಭಿವೃದ್ಧಿಯಡಿ ತಂದಿದ್ದು, ಹಾಲು ಉತ್ಪಾದಕರಿಗೆ ಅಧಿಕ ದರದ ಹಣ ಪಾವತಿಸುತ್ತಿದೆ. ರಾಜ್ಯದಲ್ಲಿ ಹಾಲು ಮಹಾಮಂಡಳ ಮತ್ತು ಜಿಲ್ಲಾ ಯುನಿಯನ್‌ಗಳ ಒಟ್ಟಾರೆ ವಾರ್ಷಿಕ ವ್ಯವಹಾರ ಸುಮಾರು ರೂ.೫೮೨೪ (೨೦೧೨) ಎಂದು ವರದಿಯಾಗಿದ್ದು ಪ್ರತಿದಿನ ಹಾಲು ಉತ್ಪಾದಕರಿಗೆ ಸರಾಸರಿ ರೂ.೯.೯೫ ಕೋಟಿ ಹಣ ಸಂದಾಯ ಮಾಡಲಾಗುವುದು.

ಹೆಚ್ಚಿನ ಸಂಖ್ಯೆಯಲ್ಲಿ ಹಾಲು ಉತ್ಪಾದಕರನ್ನು ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ ಅಡಿಯಲ್ಲಿ ನೊಂದಾಯಿಸುವುದರ ಮೂಲಕ ಕ್ರಿಯಾತ್ಮಕವಾಗಿ ಭಾಗವಹಿಸುತ್ತಿದೆ. ಗುಣಮಟ್ಟದ ವೀರ್ಯ ನಳಿಕೆಗಳ ಉತ್ಪಾದನೆಗಾಗಿ ನಂದಿನಿ ವೀರ್ಯಾಣು ಕೇಂದ್ರಕ್ಕೆ ಭಾರತ ಸರ್ಕಾರದ ಕೃಷಿ ಸಚಿವಾಲಯವು ೨೦೦೫-೦೬ರಲ್ಲಿ ರಾಷ್ಟ್ರದ ೨ನೇ ಅತ್ಯುತ್ತಮ ಘನೀಕೃತ ವೀರ್ಯಾಣು ಕೇಂದ್ರವೆಂದು ಗುರುತಿಸಿ ಪ್ರಶಸ್ತಿ ನೀಡಿದೆ. ಮಹಾಮಂಡಳವು

ಕೇಂದ್ರ ಸರ್ಕಾರದ ಯೋಜನೆಗಳಾದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ಶುದ್ಧ ಹಾಲು ಉತ್ಪಾದನೆ ಯೋಜನೆ ಹಾಗೂ ಎನ್.ಪಿ.ಡಿ.ಡಿ. ಯೋಜನೆಗಳಲ್ಲದೆ ರಾಜ್ಯ ಸರ್ಕಾರದ ಪ್ರತಿ ಲೀ. ಹಾಲಿಗೆ ರೂ.೪/– ಪ್ರೋತ್ಸಾಹಧನ ಯೋಜನೆ, ಅಮೃತ ಯೋಜನೆ, ಹಾಲು ಉತ್ಪಾದಕರ ಸಹಕಾರ ಸಿಬ್ಬಂದಿಗಳಿಗೆ ಪ್ರತಿ ಲೀ. ಗುಣಮಟ್ಟದ ಹಾಲಿಗೆ ೨೦ ಪೈಸೆ ಪ್ರೋತ್ಸಾಹ ಧನ ಹಾಗೂ ಕ್ಷೀರಭಾಗ್ಯ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿದೆ. ಇತ್ತೀಚೆಗೆ ಪ್ರೋತ್ಸಾಹ ಧನವನ್ನು ಡಿಸೆಂಬರ್ ೨೦೧೬ ರಿಂದ ೫ ರೂ.ಗಳಿಗೆ ಹೆಚ್ಚಿಸಲಾಗಿದೆ.

### ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆ (೧–೬–೨೦೦೩)

ಭಾರತ ದೇಶದಲ್ಲಿ ಸಹಕಾರಿ ವಲಯದ ರೈತರಿಗಾಗಿ ಮೊಟ್ಟ ಮೊದಲಿಗೆ ಪ್ರಾರಂಭಿಸಲಾದ ಯಶಸ್ವಿನಿ ಆರೋಗ್ಯ ಯೋಜನೆಯು ಒಂದು ವಿಶಿಷ್ಟವಾದ ಆರೋಗ್ಯ ರಕ್ಷಣೆ ಯೋಜನೆಯಾಗಿದ್ದು, ಸಹಕಾರ ಸಂಘಗಳ ಸದಸ್ಯರುಗಳಾಗಿರುವ ರೈತರಿಗಾಗಿ ಮತ್ತು ಅವರ ಕುಟುಂಬದ ಸದಸ್ಯರುಗಳಿಗೆ ಆರೋಗ್ಯ ರಕ್ಷಣೆಯನ್ನು ಕಳೆದ ೧೩ ವರ್ಷಗಳಿಂದ ನೀಡುತ್ತಾ ಬಂದಿದೆ.ಇದು ದೇಶದ ಪ್ರಪ್ರಥಮ ಸಾಮಾಜಿಕ ಆರೋಗ್ಯ ಯೋಜನೆ ಆಗಿದ್ದು, ಬೇರೆ ಬೇರೆ ರಾಜ್ಯಗಳು ಈ ಯೋಜನೆಯನ್ನು ಅನುಸರಿಸಲು ಮುಂದಾಗಿವೆ ಜಾಗತಿಕ ಮಟ್ಟದಲ್ಲಿಯೂ ಈ ಯೋಜನೆ ಮೆಚ್ಚುಗೆ ಪಡೆದಿದೆ.

ಸಹಕಾರ ಸಂಘಗಳಲ್ಲಿ ಸದಸ್ಯರಾಗಿ ೩ ತಿಂಗಳು ಕಳೆದರೆ ಅತ್ಯಂತ ಕಡಿಮೆ ವಾರ್ಷಿಕ ವಂತಿಗೆ ರೂ.೩೦೦/– ಪಾವತಿಸಿ ಗ್ರಾಮೀಣ ಸಹಕಾರಿ ಸಂಘದ ಸದಸ್ಯರು ತಾವು ಮತ್ತು ತಮ್ಮ ಕುಟುಂಬ ವರ್ಗದವರಿಗೆ ಯಶಸ್ವಿನಿ ಟ್ರಸ್ಟ್ ಗುರುತಿಸಿದ ೮೨೩ ಶಸ್ತ್ರ ಚಿಕಿತ್ಸೆಗಳನ್ನು ನೆಟ್‌ವರ್ಕ್ ಆಸ್ಪತ್ರೆಯಲ್ಲಿ ಪಡೆಯಬಹುದಾಗಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸದಸ್ಯರು ರೂ.೫೦/–ಗಳ ಮೊತ್ತ ನೀಡಿದರೆ, ರೂ.೨೫೦/–ಗಳ ಮೊತ್ತವನ್ನು ಸರ್ಕಾರದಿಂದ ಅನುದಾನದ ಸೌಲಭ್ಯ ನೀಡಲಾಗಿದೆ.

* ಈ ಯೋಜನೆಯಡಿ ನವಜಾತ ಶಿಶುವಿನಿಂದ ಹಿಡಿದು ಜೀವಿತಾವಧಿಯವರೆಗೂ ಯೋಜನೆಯಡಿ ಸದಸ್ಯತ್ವ ಪಡೆದು ಯೋಜನೆಯಲ್ಲಿರುವ ಪ್ರಯೋಜನ ಪಡೆಯಬಹುದು. ಗ್ರಾಮೀಣ ಯಶಸ್ವಿನಿ ಯೋಜನೆಯಲ್ಲಿ ಫಲಾನುಭವಿಗಳು, ಒಂದು ವರ್ಷದಲ್ಲಿ ಒಂದು ಬಾರಿ ಶಸ್ತ್ರಚಿಕಿತ್ಸೆ ಆದಲ್ಲಿ ರೂ.೧.೨೫ ಲಕ್ಷ ಮತ್ತು ಅದೇ ವರ್ಷ ಒಂದಕ್ಕಿಂತ ಹೆಚ್ಚು ಶಸ್ತ್ರಚಿಕಿತ್ಸೆ ಪಡೆದಲ್ಲಿ ರೂ.೨.೦೦ ಲಕ್ಷದವರೆಗೆ ಶಸ್ತ್ರಚಿಕಿತ್ಸೆಗಳನ್ನು ಉಚಿತವಾಗಿ ಪಡೆದುಕೊಳ್ಳಬಹುದು.

* ಯಶಸ್ವಿನಿ ಯೋಜನೆಯಲ್ಲಿ ೮೨೩ ವಿಧವಾದ ಶಸ್ತ್ರಚಿಕಿತ್ಸೆಗಳ ಸೌಲಭ್ಯಗಳು ೬೪೦ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಜನರಲ್ ವಾರ್ಡ್‌ನಲ್ಲಿ ಪಡೆಯಬಹುದು.

* ಯಶಸ್ವಿನಿ ಯೋಜನೆಯನ್ನು ನಗರ ಪ್ರದೇಶದ ಸಹಕಾರಿ ಸದಸ್ಯರಿಗೂ ಪಡೆಯುವ ಅವಕಾಶವನ್ನು ಜೂನ್ ೧, ೨೦೧೪ರಿಂದ ಜಾರಿಗೆ ತರಲಾಗಿದೆ. ನಗರ ಪ್ರದೇಶದ ಸಹಕಾರಿ ಸದಸ್ಯರಿಗೆ ರೂ.೭೧೦/– ಗಳ ವಾರ್ಷಿಕ ವಂತಿಗೆಯನ್ನು ನಿಗದಿ ಪಡಿಸಿದ್ದು, ಫಲಾನುಭವಿಗಳು ಯಶಸ್ವಿನಿ ಯೋಜನೆಯ ಎಲ್ಲಾ ಸೌಲಭ್ಯಗಳನ್ನು ಪಡೆಯಬಹುದಾಗಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸದಸ್ಯರು ರೂ.೧೧೦/– ಗಳ ಮೊತ್ತ ನೀಡಿದರೆ, ಉಳಿದ ರೂ.೬೦೦/– ಗಳ ಮೊತ್ತವನ್ನು ಸರ್ಕಾರವು ಅನುದಾನ ಮೂಲಕ ನೀಡಿ ಸೌಲಭ್ಯವನ್ನು ಕಲ್ಪಿಸಿದೆ.

* ನಗರ ಯಶಸ್ವಿನಿ ಯೋಜನೆಯಲ್ಲಿ ಫಲಾನುಭವಿಗಳು ಒಂದು ವರ್ಷದಲ್ಲಿ ಒಂದು ಬಾರಿ ಶಸ್ತ್ರಚಿಕಿತ್ಸೆ ಆದಲ್ಲಿ ರೂ.೧.೭೫ ಲಕ್ಷ ಮತ್ತು ಅದೇ ವರ್ಷ ಒಂದಕ್ಕಿಂತ ಹೆಚ್ಚು ಶಸ್ತ್ರಚಿಕಿತ್ಸೆ ಪಡೆದಲ್ಲಿ ರೂ.೨.೫೦ ಲಕ್ಷ ವರೆಗೆ ಶಸ್ತ್ರಚಿಕಿತ್ಸೆಗಳನ್ನು ಉಚಿತವಾಗಿ ಪಡೆದುಕೊಳ್ಳಬಹುದು.

ಈ ಯೋಜನೆಯಲ್ಲಿ ಈ ಕೆಳಕಂಡ ನಿಗದಿತ ಔಷದೋಪಚಾರಗಳ ಸೌಲಭ್ಯಗಳನ್ನು ಹೊಂದಬಹುದಾಗಿದೆ.

ಅ) ರಿಯಾಯಿತಿ ದರದಲ್ಲಿ ಹೊರರೋಗಿ ಸಲಹೆ ಆ) ರಿಯಾಯಿತಿ ದರದಲ್ಲಿ ರೋಗ ನಿರ್ಣಯ ಪರೀಕ್ಷೆಗಳು ಇ) ನೀರಿನಲ್ಲಿ ಮುಳುಗುವಿಕೆ, ನಾಯಿ ಕಡಿತ, ಹಾವು ಕಡಿತ, ಹೋರಿ ಹಾಯ್ದು ಆದ ಗಾಯ, ವಿದ್ಯುತ್ ಅಪಘಾತ ಮತ್ತು ಕೃಷಿ ಉಪಕರಣದಿಂದಾದ ಅಪಘಾತಗಳಿಗೆ, ಹೃದಯ ಸಂಬಂಧಿ ಖಾಯಿಲೆಗಳಿಗೆ ಶಸ್ತ್ರಚಿಕಿತ್ಸೆ, ಮಂಡಿ ಕೀಲು ಬದಲಿ ಮತ್ತು ಹಿಪ್ ರೀಪ್ಲೆಸ್‌ಮೆಂಟ್, ಸಾಮಾನ್ಯ ಹೆರಿಗೆ ಮತ್ತು ನವಜಾತ ಶಿಶುವಿನ ರಕ್ಷಣೆ ಚಿಕಿತ್ಸೆಗಳನ್ನು ಜನರಲ್ ವಾರ್ಡ್ ಸೌಲಭ್ಯದೊಂದಿಗೆ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಪಡೆಯಬಹುದಾಗಿದೆ.

ಸರ್ಕಾರವು ಯಶಸ್ವಿನಿ ಯೋಜನೆಯ ಸೌಲಭ್ಯವನ್ನು ಸಹಕಾರಿ ರೈತರು, ನೇಕಾರರು ಮೀನುಗಾರರು ಮತ್ತು ಅವರ ಕುಟುಂಬದವರಿಗೂ ಮಾತ್ರವಲ್ಲದೆ ಸಹಕಾರ ಸಂಘ/ ಬ್ಯಾಂಕುಗಳೊಡನೆ ವ್ಯವಹರಿಸುತ್ತಿರುವ ಗ್ರಾಮೀಣ ಪ್ರದೇಶದಲ್ಲಿರುವ ಸ್ವಸಹಾಯ ಗುಂಪುಗಳ ಸದಸ್ಯರಿಗೆ ಮತ್ತು ಅವರ ಕುಟುಂಬದ ಎಲ್ಲಾ ಸದಸ್ಯರಿಗೆ ಈ ಯೋಜನೆಯ ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಿರುತ್ತದೆ.

೨೦೧೫–೧೬ನೇ ಸಾಲಿನಲ್ಲಿ ಮಾರ್ಚ್ ಅಂತ್ಯಕ್ಕೆ ಯಶಸ್ವಿನಿ ಯೋಜನೆಯಡಿ ೪೧,೨೯,೦೧೯ ಜನರನ್ನು ಸದಸ್ಯರನ್ನಾಗಿ ನೊಂದಾಯಿಸಲಾಗಿದೆ. ಈ ಪೈಕಿ ೧,೬೮,೯೪೫ ಜನ ಫಲಾನುಭವಿಗಳು ಶಸ್ತ್ರಚಿಕಿತ್ಸೆಯನ್ನು ಮತ್ತು ೨,೧೯,೪೪೪ ಜನ ಹೊರ ರೋಗಿಗಳಾಗಿ ಚಿಕಿತ್ಸೆಯನ್ನು ಪಡೆದಿರುತ್ತಾರೆ. ಕರ್ನಾಟಕ ಸರ್ಕಾರವು ೨೦೧೫–೧೬ನೇ ಸಾಲಿನಲ್ಲಿ ಯಶಸ್ವಿನಿ ಯೋಜನೆಯ ಅನುಷ್ಠಾನಕ್ಕಾಗಿ ರೂ.೧೦೯೫೭.೧೫ ಲಕ್ಷಗಳನ್ನು ಅನುದಾನವನ್ನು ಬಿಡುಗಡೆ ಮಾಡಿರುತ್ತದೆ.

### ನಿಯಂತ್ರಿತ ಮಾರುಕಟ್ಟೆಗಳು (Regulated Markets)

ರೈತರು, ವ್ಯವಸಾಯ ನಿರತರು, ತಾವು ಶ್ರಮವಹಿಸಿ ಬೆಳೆದ ವ್ಯವಸಾಯ ಉತ್ಪನ್ನಗಳಿಗೆ, ಶ್ರಮಕ್ಕೆ ತಕ್ಕಂತೆ, ವಿನಿಯೋಗಿಸಿದ ಬಂಡವಾಳಕ್ಕೆ ಅನುಗುಣವಾಗಿ ನ್ಯಾಯಯುತ ಮತ್ತು ಸಮರ್ಪಕವಾದ ಬೆಲೆಗಳು ದೊರೆಯುತ್ತಿಲ್ಲ ಎಂಬ ಅಹವಾಲು

ಇಂದು ನಿನ್ನೆಯದಲ್ಲ. ರೈತರ ಈ ಬೇಡಿಕೆಗೆ ಅನೇಕ ಸಂದರ್ಭಗಳಲ್ಲಿ, ಸರ್ಕಾರದಿಂದ ವರ್ತಕ ಸಮುದಾಯದಿಂದ ಸೂಕ್ತ ಸ್ಪಂದನ ದೊರೆಯುತ್ತಿಲ್ಲ. ರೈತರ ಈ ಶೋಷಣೆಯನ್ನು ದೂರ ಮಾಡಲು ಸಹಾಯಕವಾಗುವಂತೆ ೧೯೨೮ರಲ್ಲಿ ರಚನೆಗೊಂಡ ರಾಯಲ್ ಕಮಿಷನ್ ಆನ್ ಅಗ್ರಿಕಲ್ಚರ್ (Royal Commission on Agriculture) ತನ್ನ ವರದಿಯಲ್ಲಿ, ಕೃಷಿ ಉತ್ಪನ್ನಗಳ ಮಾರಾಟಕ್ಕೆ ನಿಯಂತ್ರಿತ ಮಾರುಕಟ್ಟೆ ಸೌಲಭ್ಯವನ್ನು ಒದಗಿಸುವ ಮೂಲಕ ರೈತರಿಗೆ ಯೋಗ್ಯ ಮತ್ತು ಸೂಕ್ತವಾದ ಬೆಲೆಗಳನ್ನು ಯಾವುದೇ ಖಾಸಗಿ ಮಧ್ಯವರ್ತಿಯ ಶೋಷಣೆ ಇಲ್ಲದೆ ಒದಗಿಸಿ ಕೊಡುವ ಮೂಲ ಉದ್ದೇಶದಿಂದ ಕಾನೂನು ಬದ್ಧವಾದ ನಿಯಂತ್ರಿತ ಮಾರುಕಟ್ಟೆಗಳನ್ನು ಸ್ಥಾಪಿಸುವ ಬಗ್ಗೆ ಮಾಡಿದ ಬಲವಾದ ಶಿಫಾರಸ್ಸಿನ ಅನ್ವಯ ದೇಶಾದ್ಯಂತ ವಿವಿಧ ಭಾಗಗಳಲ್ಲಿ ನಿಯಂತ್ರಿತ ಮಾರುಕಟ್ಟೆಗಳು ಅಲ್ಪ ಪ್ರಮಾಣದಲ್ಲಿ ರಚನೆಗೊಂಡವು. ಅದರ ಅನ್ವಯ ಏಕೀಕರಣ ಪೂರ್ವದ ಕರ್ನಾಟಕದಲ್ಲಿ ವಿವಿಧ ಭಾಗಗಳಲ್ಲಿ ಅವಶ್ಯಕತೆಗೆ ತಕ್ಕಂತೆ ಬೇರೆ ಬೇರೆ ಹಂತಗಳಲ್ಲಿ ಮಾರುಕಟ್ಟೆಗಳನ್ನು ಆಯೋಜಿಸುವ ಪ್ರಯತ್ನಗಳು ನಡೆದವು.

ಮುಂಬೈ ಕರ್ನಾಟಕ ಪ್ರದೇಶದಲ್ಲಿ ೧೯೨೭ರಲ್ಲಿ ಈ ಭಾಗದ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದ ಹತ್ತಿ (Cotton)ಯನ್ನು ಬೊಂಬಾಯಿ ಕಾಟನ್ ಮಾರ್ಕೆಟ್ ಕಾಯಿದೆ ೧೯೨೭ರ ಅನ್ವಯ ನಿಯಂತ್ರಣಕ್ಕೆ ಒಳಪಡಿಸಲಾಯಿತು. ಹೈದರಾಬಾದ್ ಕರ್ನಾಟಕದಲ್ಲಿ ೧೯೩೦ರಲ್ಲಿ ಈ ವ್ಯವಸ್ಥೆ ಜಾರಿಗೆ ಬಂದಿತು. ಮದ್ರಾಸ್ ಕರ್ನಾಟಕ ಪ್ರದೇಶದಲ್ಲಿ ಈ ವ್ಯವಸ್ಥೆ ೧೯೩೩ರಲ್ಲಿ ವಾಣಿಜ್ಯ ಬೆಳೆಗಳ ಮಾರಾಟ ನಿಯಂತ್ರಣಕ್ಕೆ ಉಪಯೋಗಿಸಲಾಯಿತು.

ಚಿಕ್ಕದಾದ ಕೊಡಗು ಪ್ರದೇಶದಲ್ಲಿ ವಾಣಿಜ್ಯ ಬೆಳೆಯಾದ ಕಾಫಿ ಮಾರಾಟ ಕೇಂದ್ರ ಸರ್ಕಾರದ ಕಾಫಿ ಮಾರಾಟ ವಿಸ್ತರಣಾ ಕಾನೂನು ೧೯೪೨, (Coffee Marketing Expansion Act, ೧೯೪೨) ಅನ್ವಯ ನಿಯಂತ್ರಣಕ್ಕೆ ಒಳಪಡಿಸಲಾಗಿದೆ.

ಮೈಸೂರು ಸಂಸ್ಥಾನದಲ್ಲಿ ಮೈಸೂರು ವ್ಯವಸಾಯ ಉತ್ಪನ್ನಗಳ ಅಧಿನಿಯಮ ೧೯೩೯ರ ಅನ್ವಯ ವ್ಯವಸಾಯ ಉತ್ಪನ್ನಗಳನ್ನು ನಿಯಂತ್ರಣಕ್ಕೆ ಒಳಪಡಿಸಲಾಯಿತು. ಸಂಸ್ಥಾನದಲ್ಲಿ ಪ್ರಥಮ ನಿಯಂತ್ರಣ ಮಾರುಕಟ್ಟೆಯನ್ನು ತಿಪಟೂರಿನಲ್ಲಿ ಸ್ಥಾಪಿಸಿ ಕೊಬ್ಬರಿ ಮತ್ತು ತೆಂಗು ಮಾರಾಟವನ್ನು ಇದರ ನಿಯಂತ್ರಣಕ್ಕೆ ಒಳಪಡಿಸಲಾಯಿತು.

ರಾಜ್ಯ ಪುನರ್‌ರಚನೆಯ ನಂತರ, ವಿವಿಧ ಭಾಗಗಳಲ್ಲಿ ಈ ಮೊದಲು ಜಾರಿಯಲ್ಲಿದ್ದ ಬೇರೆ ಬೇರೆ ಕಾನೂನಿನ ಅನ್ವಯ ೫೪ ಮಾರುಕಟ್ಟೆಗಳು ಕಾರ್ಯ ನಿರ್ವಹಿಸುತ್ತಿದ್ದವು. ೧೯೬೬ರಲ್ಲಿ ಇಡೀ ರಾಜ್ಯಕ್ಕೆ ಅನ್ವಯವಾಗುವ, ಹೆಚ್ಚು ವಿಸ್ತೃತ ಸಮಗ್ರವಾದ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) ಅಧಿನಿಯಮವನ್ನು ರೂಪಿಸಿ, ೧೯೬೮, ಮೇ ತಿಂಗಳಲ್ಲಿ ಜಾರಿಗೆ ತರಲಾಯಿತು.

೧೯೫೦ರ ದಶಕದಲ್ಲಿ, ರಾಜ್ಯದ ಇತರೇ ಪ್ರದೇಶಗಳಲ್ಲಿ ನಿಯಂತ್ರಿತ ಮಾರುಕಟ್ಟೆ ಸ್ಥಾಪಿಸಲು ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಸಹಾಯಕವಾಗುವಂತೆ, ಮಾರುಕಟ್ಟೆ ಮತ್ತು ಉಪಮಾರುಕಟ್ಟೆಗಳ ಸಂಖ್ಯೆಯನ್ನು ಹೆಚ್ಚಿಸಲಾಯಿತು. ಅಲ್ಲದೇ ಆಯಾ ಪ್ರದೇಶದ ಪ್ರಮುಖ ವ್ಯವಸಾಯ ಉತ್ಪನ್ನಗಳನ್ನು ನಿಯಂತ್ರಣಕ್ಕೆ ಒಳಪಡಿಸಲಾಯಿತು. ೨೦೧೧ ಮಾರ್ಚ್ ಅಂತ್ಯದ ವೇಳೆಗೆ ರಾಜ್ಯದಲ್ಲಿ ೧೫೨ ಕೃಷಿ ಉತ್ಪನ್ನ ಮಾರುಕಟ್ಟೆಗಳು ಮತ್ತು ೩೫೨ ಉಪ ಮಾರುಕಟ್ಟೆಗಳು ಕಾರ್ಯ ನಿರ್ವಹಿಸುತ್ತಿದ್ದವು. ಮೊದಲಿಗೆ ಸಹಕಾರ ಇಲಾಖೆಯ ಭಾಗವಾಗಿದ್ದ ಕೃಷಿ ಮಾರುಕಟ್ಟೆ ಇಲಾಖೆ ೧೯೭೨ರಿಂದ ಸ್ವತಂತ್ರ ಇಲಾಖೆಯಾಗಿರುವುದು.

ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾನೂನು ೧೯೬೬ರ ಅನ್ವಯ ದಿನಾಂಕ ೧-೯-೧೯೭೨ರಂದು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಸ್ಥಾಪನೆಗೊಂಡಿದ್ದು ಈ ಸಂಸ್ಥೆ ರಾಜ್ಯದಲ್ಲಿ ಕೃಷಿ ಉತ್ಪನ್ನ ಮಾರಾಟಕ್ಕೆ ಸಂಬಂಧಿಸಿದ ಪ್ರೋತ್ಸಾಹ ಕ್ರಮ ಕೈಗೊಳ್ಳಲು ಸಲಹೆಯನ್ನು ರಾಜ್ಯ ಸರ್ಕಾರ, ಕೃಷಿ ಮಾರಾಟ ಇಲಾಖೆ, ಮತ್ತು ಮಾರುಕಟ್ಟೆ ಸಮಿತಿಗಳಿಗೆ ನೀಡುತ್ತದೆ.

ವ್ಯವಸಾಯ ಉತ್ಪನ್ನಗಳ ಮಾರಾಟದಲ್ಲಿ ಮತ್ತು ಸಂಬಂಧಪಟ್ಟ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಅಧಿಕಾರ ವರ್ಗದವರು ಮತ್ತು ಮಾರುಕಟ್ಟೆ ಕಾರ್ಯಕರ್ತರಿಗೆ ಸೂಕ್ತ ತರಬೇತಿ ನೀಡಲು ಸಹಾಯಕವಾಗುವಂತೆ ಹುಬ್ಬಳ್ಳಿ (೧೯೬೪) ಮತ್ತು ಮೈಸೂರಿನಲ್ಲಿ ತರಬೇತಿ ಕಾಲೇಜುಗಳನ್ನು ಆರಂಭಿಸಿದ ಮೊದಲನೆಯ ರಾಜ್ಯವು ಕರ್ನಾಟಕವಾಗಿದೆ. ಅದರಂತೆ ಮಾರುಕಟ್ಟೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ (Market Functionaries) ಹಮಾಲರು, ತೂಕ ಮಾಡುವವರು, ಎತ್ತಿನ ಗಾಡಿ ನಡೆಸುವವರು (Carters) ಮುಂತಾದವರಿಗೆ ಸಾಮಾಜಿಕ ಗುಂಪು ವಿಮೆ ಸೌಲಭ್ಯ ಒದಗಿಸಿರುವ ರಾಜ್ಯಗಳಲ್ಲಿ ಕರ್ನಾಟಕ ದೇಶದಲ್ಲಿಯೇ ಮೊದಲನೆಯದು, ರೈತರು ಅವರ ಬೆಳೆಗೆ ಉತ್ತಮ ಬೆಲೆ ಬರುವವರೆಗೆ ಕಾಯಲು ಸಹಾಯಕವಾಗುವಂತೆ ಬೆಳೆಗಳ ಅಡಮಾನದ ಮೇಲೆ ರೂ.೫೦,೦೦೦ರವರೆಗೆ ಸಾಲ ಮುಂಗಡ ನೀಡುವ ವ್ಯವಸ್ಥೆ ಜಾರಿಯಲ್ಲಿದೆ. ಇತ್ತೀಚಿನ ದಿನಗಳಲ್ಲಿ ರೈತರು (Online trading) ಮಾಡುವ ವ್ಯವಸ್ಥೆಯನ್ನು ಮಾಡಲಾಗಿದೆ.

### ಬೆಂಬಲ ಬೆಲೆ ಯೋಜನೆ

ಮಾರುಕಟ್ಟೆಗಳಲ್ಲಿ ಹಲವಾರು ಕಾರಣಗಳಿಂದ ವ್ಯವಸಾಯ ಉತ್ಪನ್ನಗಳ ಬೆಲೆ ತೀರ ಕುಸಿದಾಗ, ರೈತನ ಸಂಕಷ್ಟವನ್ನು ದೂರ ಮಾಡಲು ಕೇಂದ್ರ ಸರ್ಕಾರ ಬೆಂಬಲ ಬೆಲೆಗಳನ್ನು ನೀಡುವ ಮೂಲಕ ಕೃಷಿ ಉತ್ಪನ್ನಗಳನ್ನು ಖರೀದಿಸುತ್ತವೆ. (ಶೀಘ್ರವಾಗಿ ಹಾಳಾಗುವ ತರಕಾರಿ ಬೆಳೆಗೆ ಇದು ಅನ್ವಯವಾಗುವುದಿಲ್ಲ). ಇಂತಹ ಸಂದರ್ಭಗಳಲ್ಲಿ ರಾಜ್ಯ ಸರ್ಕಾರ Floor Price Scheme ಮೂಲಕ ಬೆಂಬಲ ಬೆಲೆ ಘೋಷಿಸಿ ರೈತರ ಉತ್ಪನ್ನಗಳನ್ನು ಖರೀದಿಸುತ್ತದೆ. ಈ ಯೋಜನೆಗೆ ರಾಜ್ಯ ಸರ್ಕಾರವು ಆವರ್ತನಿಧಿ ಸ್ಥಾಪಿಸಿದ್ದು ೨೦೧೦-೧೧ರಲ್ಲಿ ಈ ನಿಧಿಯಿಂದ ೧೩೦.೫ ಕೋಟಿ ರೂ. ಬಿಡುಗಡೆ ಮಾಡಿ ೬.೩೯ ಲಕ್ಷ ಕ್ವಿಂಟಾಲ್ ವ್ಯವಸಾಯ ಉತ್ಪನ್ನಗಳನ್ನು ೯೬೮೩ ಫಲಾನುಭವಿ ರೈತರಿಂದ ಖರೀದಿಸಲಾಗಿತ್ತು. ೨೦೧೫-೧೬ ಆಯವ್ಯಯದಲ್ಲಿ ಈ ಯೋಜನೆಗೆ ಬಿಡುಗಡೆಯಾದ ಹಣ ರೂ.೬೯.೪೭ ಕೋಟಿ ಎಂದು ವರದಿಯಿಂದ ತಿಳಿದು ಬರುವುದು. ಅದರ ಹಿಂದಿನ ವರ್ಷ ರೂ.೨೪.೫೨ ಕೋಟಿ ಎಂದು ವರದಿಯಾಗಿದೆ. ಈ ಯೋಜನೆಯಲ್ಲಿ ೨೦೧೫-೧೬ರಲ್ಲಿ ೭೮,೮೩೫ ರೈತರು ಫಲಾನುಭವಿಗಳಾಗಿದ್ದರೆ ಅದರ ಹಿಂದಿನ ವರ್ಷ ೨೦೧೪-೧೫ರಲ್ಲಿ ಅನುಕೂಲತೆ ಪಡೆದ ರೈತರ ಸಂಖ್ಯೆ ೪೯೮೯೭ ಆಗಿತ್ತು.

### ಇಲಾಖೆ ರೂಪಿಸಿದ ಇತ್ತೀಚಿನ ಯೋಜನೆಗಳು

೨೦೧೫-೧೬ರಲ್ಲಿ ಇಲಾಖೆಯು ರೂಪಿಸಿರುವ ಇತರೆ ಯೋಜನೆಗಳೆಂದರೆ ತಿಪಟೂರಿನಲ್ಲಿ ಮತ್ತು ಚಾಮರಾಜನಗರದಲ್ಲಿ ತೆಂಗು ಸಂಸ್ಕರಣ ಘಟಕಗಳ ಸ್ಥಾಪನೆ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಲ್ಲಿ ೪೨ ಕೃಷಿ ಮಾರುಕಟ್ಟೆಗಳಲ್ಲಿ ವಿವಿಧ ಸಾಮರ್ಥ್ಯದ ೪೫ ಗೋದಾಮುಗಳ ರಚನೆ, ೫೨ ಧಾನ್ಯಗಳ ಶುದ್ಧೀಕರಣ ಘಟಕ, ೨೭ ಕುರಿ ಮತ್ತು ಮೇಕೆ ಸಂತೆಗಳ ಅಭಿವೃದ್ಧಿ, ೨೩ ಮುಚ್ಚು ಹರಾಜು ಕಟ್ಟೆಗಳ ನಿರ್ಮಾಣ [Closed Tender Market Yards], ಎರಡು ಶೀತಲಗೃಹ (Cold storage) ಮುಂತಾದವುಗಳ ನಿರ್ಮಾಣ (೨೦೧೫-೧೬ರಲ್ಲಿ ಯೋಜನೆಗೆ ಬಿಡುಗಡೆಯಾದ ಮೊತ್ತ ರೂ. ೧೨.೩೨೨ ಕೋಟಿ ರೂ.ಗಳು) ನಬಾರ್ಡ್ ಯೋಜನೆಯಲ್ಲಿ ಗ್ರಾಮೀಣ ಮಾರುಕಟ್ಟೆಗಳ ಅಭಿವೃದ್ಧಿಗೆ, ಮೂಲಭೂತ ಸೌಕರ್ಯ ಒದಗಿಸಲು ರೂ.೫.೬/- ಕೋಟಿ ಬಿಡುಗಡೆಯಾಗಿದೆ.

### ರೈಸ್ ಟೆಕ್ನಾಲಜಿ ಪಾರ್ಕ್(Rice Technology Park)

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕಾರಟಗಿ ಮಾರುಕಟ್ಟೆಯ ವ್ಯಾಪ್ತಿಯಲ್ಲಿ, ಅಕ್ಕಿ ಮಾರುಕಟ್ಟೆಗೆ ಸಂಬಂಧಪಟ್ಟಂತೆ ವರ್ಗೀಕರಣ, ಸಂಸ್ಕರಣ, ಸಂಗ್ರಹಣೆ, ಗುರುತು ಹಾಕುವುದು, ಮಾರಾಟ ಮುಂತಾದ ವಿನೂತನ ತಾಂತ್ರಿಕ ಸೌಲಭ್ಯ ಒದಗಿಸಲಾಗುವುದು. ಈ ಯೋಜನೆಗೆ ೨೦೧೫-೧೬ರಲ್ಲಿ ರೂ.೧೫೦ ಲಕ್ಷ ಅನುದಾನ ಬಿಡುಗಡೆಯಾಗಿದೆ. ರಾಜ್ಯದ ಅನೇಕ ಮಾರುಕಟ್ಟೆಗಳು ಹಿಂದುಳಿದ ಪ್ರದೇಶಗಳ ವ್ಯಾಪ್ತಿಯಲ್ಲಿ ಬರುತ್ತಿದ್ದು ಅವುಗಳ ಅಭಿವೃದ್ಧಿಗೆ ಸಹಾಯಕವಾಗುವಂತೆ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕಾಗಿದೆ. ೨೦೧೫-೧೬ರಲ್ಲಿ ರೂ.೧೩೫೧ ಲಕ್ಷ ಬಿಡುಗಡೆಯಾಗಿದ್ದು ಸದರಿ ಯೋಜನೆಯಲ್ಲಿ ಒಟ್ಟು ೨೫ ವಿವಿಧ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

### ತೊಗರಿ ಟೆಕ್ನಾಲಜಿ ಪಾರ್ಕ್

ಕಲಬುರಗಿ ಜಿಲ್ಲೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನವುಳ್ಳ ತೊಗರಿಯ ವರ್ಗೀಕರಣ, ಸ್ವಚ್ಛತೆ, ಸಂಸ್ಕರಣೆ, ಸಂಗ್ರಹಣೆ, (Brand) ಬ್ರಾಂಡ್ ಮಾಡುವುದು, ಮಾರಾಟ ಮುಂತಾದ ಸೌಲಭ್ಯ ಒದಗಿಸಲು ಈ ಯೋಜನೆಯನ್ನು ರೂಪಿಸಲಾಗಿದ್ದು ೨೦೧೫-೧೬ನೇ ಸಾಲಿನಲ್ಲಿ ರೂ.೧೦೦ ಲಕ್ಷ ಅನುದಾನ ಬಿಡುಗಡೆಯಾಗಿದೆ.

### ಮೆಕ್ಕೆಜೋಳ ಟೆಕ್ನಾಲಜಿ ಪಾರ್ಕ್

ರಾಣೆಬೆನ್ನೂರಿನಲ್ಲಿ (ಹಾವೇರಿ ಜಿಲ್ಲೆ) ಅತ್ಯಾಧುನಿಕ ತಂತ್ರಜ್ಞಾನ ಉಳ್ಳ, ಮೆಕ್ಕೆಜೋಳಕ್ಕೆ ಸಂಬಂಧಿಸಿದಂತೆ ವರ್ಗೀಕರಣ, ಸ್ವಚ್ಛತೆ, ಸಂಸ್ಕರಣೆ, ಸಂಗ್ರಹಣೆ ಮಾಡುವುದು ಮಾರಾಟ ಕುರಿತಂತೆ ರೈತರಿಗೆ ಸೌಲಭ್ಯ ಒದಗಿಸಲು ಈ ಮಾರುಕಟ್ಟೆಯಲ್ಲಿ ಯೋಜಿಸಲಾಗಿದೆ. ೨೦೧೫-೧೬ರಲ್ಲಿ ಈ ಯೋಜನೆಗೆ ರೂ.೧೦೦ ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ.

### ಕಾಯಕನಿಧಿ

ಈ ಹೊಸ ಯೋಜನೆಯಲ್ಲಿ, ಮಾರುಕಟ್ಟೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೊಂದಾಯಿತ ಹಮಾಲರಿಗೆ ಅವರ ವೈದ್ಯಕೀಯ ಉಪಚಾರಕ್ಕೆ ಸರ್ಕಾರದ ಆರೋಗ್ಯ ಇಲಾಖೆಯ ವಿಮಾ ಅಡಿಯಲ್ಲಿ ಬರದೇ ಇರುವ ಕಾಯಿಲೆಗಳ ವೈದ್ಯಕೀಯ ಚಿಕಿತ್ಸೆಗೆ ಸಂಬಂಧಿಸಿದಂತೆ ಗರಿಷ್ಠ ರೂ. ಒಂದು ಲಕ್ಷದವರೆಗೆ ವೈದ್ಯಕೀಯ ವೆಚ್ಚ ಮರು ಪಾವತಿಸಲಾಗುವುದು. ಈ ಯೋಜನೆಗೆ ೨೦೧೪-೧೫ ಸಾಲಿನಲ್ಲಿ ರೂಪಾಯಿ ಒಂದು ಕೋಟಿ ಮೀಸಲು ಇಡಲಾಗಿದೆ.

### ರೈತರ ಸಂಜೀವಿನಿ ಯೋಜನೆ

ರೈತರು ಮತ್ತು ಅವರ ಕುಟುಂಬದವರು ಕೃಷಿ ಕಾರ್ಯ ಅಥವಾ ಕೃಷಿ ಉತ್ಪನ್ನಗಳ ಮಾರಾಟ ಚಟುವಟಿಕೆಗಳಲ್ಲಿ ತೊಡಗಿದ್ದಾಗ ಸಾವು ಅಥವಾ ಶಾಶ್ವತ ಅಂಗವಿಕಲತೆ ಸಂಭವಿಸಿದಲ್ಲಿ ಅವರಿಗೆ ಈ ಯೋಜನೆಯಲ್ಲಿ ಪರಿಹಾರ ನೀಡಲಾಗುವುದು; ಸಾವು ಸಂಭವಿಸಿದಲ್ಲಿ ರೂ.೭೫,೦೦೦/- ಮತ್ತು ಶಾಶ್ವತ ಅಂಗವಿಕಲತೆಗೆ ಅದರ ಪ್ರಮಾಣಕ್ಕೆ ಅನುಗುಣವಾಗಿ ರೂ. ೫೦೦೦ ದಿಂದ ರೂ.೩೦,೦೦೦ರವರೆಗೆ ಪರಿಹಾರ ನೀಡಲಾಗುತ್ತದೆ. ಇದಕ್ಕೆ ರೈತರು ಯಾವುದೇ ಪ್ರಿಮಿಯಮ್‌ಅನ್ನು ನೀಡಬೇಕಾಗಿಲ್ಲ. ಈ ಯೋಜನೆಯಲ್ಲಿ ೨೦೧೩-೧೪ರಲ್ಲಿ ೧,೪೦,೨೮,೦೦೦, ೨೦೧೪-೧೫ರಲ್ಲಿ ರೂ. ೭೦,೮೦,೦೦೦, ೨೦೧೫-೧೬ರಲ್ಲಿ ರೂ.೧,೨೭,೨೬,೦೦೦ ಪರಿಹಾರವನ್ನು ನೀಡಲಾಯಿತು. ಈ ಯೋಜನೆಯಲ್ಲಿ ಪರಿಹಾರ ಪಡೆದ ಫಲಾನುಭವಿಗಳ ಸಂಖ್ಯೆ ಅನುಕ್ರಮವಾಗಿ ೩೧೧, ೧೫೧, ೧೯೭ ಎಂದು ವರದಿಯಾಗಿದೆ.

### ಜನಶ್ರೀ ವಿಮಾ ಯೋಜನೆ

ಮಾರುಕಟ್ಟೆಯ ಸಮಿತಿಗಳಲ್ಲಿ ನೊಂದಾಯಿಲ್ಪಟ್ಟು ಕಾರ್ಯ ನಿರ್ವಹಿಸುತ್ತಿರುವ ಶ್ರಮಿಕರಾದ ಹಮಾಲರು, ತೂಕದವರು, ಚಕ್ಕಡಿಯವರು ಈ ಯೋಜನೆಯ ಪ್ರಯೋಜನೆ ಪಡೆಯುವ ಫಲಾನುಭವಿಗಳು. ಪ್ರತಿ ವರ್ಷ ರೂ.೨೨೦ ಪ್ರೀಮಿಯಮ್ ನೀಡಬೇಕಾಗಿದ್ದು, ಇದರಲ್ಲಿ ಅರ್ಧ ಭಾರತ ಸರ್ಕಾರ ಭರಿಸುತ್ತದೆ. ಉಳಿದ ಅರ್ಧವನ್ನು ಮಾರುಕಟ್ಟೆ ಸಮಿತಿಯು ಭರಿಸುತ್ತದೆ. ಈ ಯೋಜನೆಯಲ್ಲಿ ನೊಂದಾಯಿತ ವ್ಯಕ್ತಿಗಳು ಮೃತನಾದರೆ ಅಥವಾ ಶಾಶ್ವತ ಅಂಗವಿಕಲನಾದರೆ ರೂ.೭೫,೦೦೦/- ಸ್ವಾಭಾವಿಕ ಮರಣ ಹೊಂದಿದರೆ ವಾರಸುದಾರರಿಗೆ ರೂ.೩೦,೦೦೦/- ನೀಡಲಾಗುವುದು. ಈ ಯೋಜನೆಯ ಅನ್ವಯ ೨೦೧೩-೧೪, ೨೦೧೪-೧೫, ಮತ್ತು ೨೦೧೫-೧೬ರ ಅವಧಿಯಲ್ಲಿ ನೀಡಿದ ಪರಿಹಾರದ ಮೊತ್ತ ಅನುಕ್ರಮವಾಗಿ ರೂ.೫೧.೫೨ ಲಕ್ಷ (೧೭೦ ಜನರು ಫಲಾನುಭವಿಗಳು), ರೂ.೨೮.೫೦ ಲಕ್ಷ (೯೫ ಜನರು), ಮತ್ತು ರೂ. ೦೫.೭೦ ಲಕ್ಷ (೧೯ ಜನರು) ಎಂದು ವರದಿಯಾಗಿದೆ. ಈ ಯೋಜನೆಯನ್ನು ಭಾರತೀಯ ಜೀವ ವಿಮಾ ನಿಗಮ (LIC) ನಿರ್ವಹಿಸುತ್ತಿದೆ.

### ಹಣಕಾಸು ನಿರ್ವಹಣೆ (ಆದಾಯ-ವೆಚ್ಚ)

ಮಾರುಕಟ್ಟೆಯ ಸಮಿತಿಗಳ ಆದಾಯ ಮೂಲಗಳಲ್ಲಿ ಮುಖ್ಯವಾದುದು ಮಾರುಕಟ್ಟೆ ಶುಲ್ಕ (Market Fees). ಪ್ರತಿ ಅಧಿಸೂಚಿತ ಕೃಷಿ ಉತ್ಪನ್ನಗಳ ಖರೀದಿ ಮಾಡಿದಾಗ ಖರೀದಿದಾರರು ಶೇ.೧.೫ರಷ್ಟು ಮಾರುಕಟ್ಟೆ ಶುಲ್ಕ ಪಾವತಿ ಮಾಡಬೇಕಾಗುತ್ತದೆ. ಆದರೆ ತರಕಾರಿಗೆ ಶೇ.೧ರಂತೆ ಸೇವಾಶುಲ್ಕ ನಿಗದಿ ಮಾಡಲಾಗಿದೆ. ಪ್ರತಿ ಜಾನುವಾರಿಗೆ ೫ ರೂ., ಕುರಿ ಮತ್ತು ಮೇಕೆ ಒಂದಕ್ಕೆ ರೂ.

ಒಂದರಂತೆ ಶುಲ್ಕ ಭರಿಸಬೇಕು ಇದು ಅಲ್ಲದೇ ಲೈಸನ್ಸ್ ಫೀಜ್, ಠೇವಣಿಗಳ ಮೇಲಿನ ಬಡ್ಡಿ, ದಂಡ, ಆಸ್ತಿಗಳಿಂದ ಬರುವ ಬಾಡಿಗೆ ಇತ್ಯಾದಿ. ಆದಾಯದ ಮೂಲಗಳು.

ಸಂಗ್ರಹಿಸಲಾದ ಶೇ.೧.೫ರಷ್ಟು ಮಾರುಕಟ್ಟೆ ಶುಲ್ಕದಲ್ಲಿ ೧.೩ಭಾಗವನ್ನು ಆವರ್ತನಿಧಿಗೆ, ಮಾರುಕಟ್ಟೆ ಶುಲ್ಕ ಮತ್ತು ಲೈಸೆನ್ಸ್ ಶುಲ್ಕದಲ್ಲಿ ಸಂಗ್ರಹಿಸಲಾದ ಹಣದಲ್ಲಿ ಶೇ.೫ರಷ್ಟು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಗೆ ಮತ್ತು ಕೃಷಿ ವಿಶ್ವವಿದ್ಯಾಲಯದ ನಿಧಿಗೆ ಶೇ.೧ರಷ್ಟು ಪಾವತಿಸಲಾಗುವುದು. ಉಳಿದ ಮೊತ್ತದಲ್ಲಿ ಶೇ.೨೫ರಷ್ಟು ರಾಜ್ಯದ ಸಂಚಿತ ನಿಧಿಗೆ ಪಾವತಿಸಲಾಗುವುದು. ಉಳಿದ ಹಣವನ್ನು ಪ್ರಾಂಗಣದ ಅಭಿವೃದ್ಧಿ ಮತ್ತು ಆಡಳಿತ ಕಾರ್ಯಗಳಿಗೆ ಉಪಯೋಗಿಸಲಾಗುತ್ತದೆ. ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಎಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ನಡೆದ ಕೃಷಿ ಉತ್ಪನ್ನಗಳ ಮೌಲ್ಯದ ವಿವರ ಈ ಮುಂದಿನಂತೆ ಇರುವುದು.

### ಕೃಷಿ ಉತ್ಪನ್ನಗಳ ವಹಿವಾಟಿನ ಮೊತ್ತ

| ವರ್ಷ | ವಹಿವಾಟಿನ ಮೊತ್ತ ರೂ. ಕೋಟಿಗಳಲ್ಲಿ |
|---|---|
| ೨೦೧೩-೧೪ | ೩೧,೩೦೮,೯೮ |
| ೨೦೧೪-೧೫ | ೩೨,೦೪೬.೭೮ |
| ೨೦೧೫-೧೬ | ೩೩,೦೦೦.೦೦ (ಅಂದಾಜು) |

### ಸಂಗ್ರಹಿಸಿದ ಮಾರುಕಟ್ಟೆ ಶುಲ್ಕ ಮತ್ತು ಲೈಸೆನ್ಸ್ ಫೀಜ್‌ಅನ್ನು ಈ ಕೆಳಗೆ ನೀಡಲಾಗಿದೆ. (ರೂ. ಕೋಟಿಗಳಲ್ಲಿ)

| ವರ್ಷ | ಮಾರುಕಟ್ಟೆ ಶುಲ್ಕ | ಲೈಸೆನ್ಸ್ ಶುಲ್ಕ | ಒಟ್ಟು |
|---|---|---|---|
| ೨೦೧೩-೧೪ | ೩೮೬.೯೮ | ೧.೭೬ | ೩೮೮.೭೪ |
| ೨೦೧೪-೧೫ | ೪೧೬.೧೫ | ೨.೨೮ | ೪೧೮.೪೩ |
| ೨೦೧೫-೧೬ | ೪೪೭.೧೬ | --- | ೪೪೭/೧೬ |

ಆಧಾರ: ಇಲಾಖೆಯ ವಾರ್ಷಿಕ ವರದಿ ೨೦೧೫-೧೬

### ರಾಜ್ಯದಲ್ಲಿನ ವಿಭಾಗವಾರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಮುಖ್ಯ ಮಾರುಕಟ್ಟೆಗಳ/ಉಪಮಾರುಕಟ್ಟೆಗಳ ಪಟ್ಟಿಯನ್ನು (ಮುಖ್ಯ ಮಾರುಕಟ್ಟೆಗಳು: ೪೪ – ಉಪ ಮಾರುಕಟ್ಟೆಗಳು: ೯೪) ಮುಂದೆ ನೀಡಲಾಗಿದೆ.

| ಕ್ರ. ಸಂ. | ಮುಖ್ಯ ಮಾರುಕಟ್ಟೆ ಹೆಸರು | ಸ್ಥಾಪನೆಯಾದ ವರ್ಷ | ಕ್ರ. ಸಂ. | ಉಪ ಮಾರುಕಟ್ಟೆಯ ಹೆಸರು | ಸ್ಥಾಪನೆಯಾದ ವರ್ಷ | ಮಾರುಕಟ್ಟೆ ಕ್ಷೇತ್ರ ಹೆಸರು |
|---|---|---|---|---|---|---|
| | | | ಬೆಂಗಳೂರು ವಿಭಾಗ | | | |
| ೧ | ಬೆಂಗಳೂರು ನಗರ<br>ಬೆಂಗಳೂರು | ೧೯೫೫ | ೧<br>೨<br>೩<br>೪<br>೫<br>೬ | ಕೆ.ಆರ್.ಪುರಂ<br>ಚಂದಾಪುರ<br>ಆನೇಕಲ್<br>ಜಿಗಣಿ<br>ಬೊಮ್ಮನಹಳ್ಳಿ<br>ದಾಸನಪುರ | ೧೯೯೪<br>೧೯೯೫<br>೧೯೯೫<br>೧೯೯೫<br>೨೦೦೩<br>೨೦೧೩ | ಬೆಂಗಳೂರು ಉತ್ತರ<br>ಬೆಂಗಳೂರು ದಕ್ಷಿಣ<br>ಬೆಂಗಳೂರು ಪೂರ್ವ<br>ಆನೇಕಲ್ |
| ೨ | ಹಣ್ಣು ಮತ್ತು ತರಕಾರಿ ವಿಶೇಷ ಕೃ.ಉ.ಮಾ.ಸ ಬೆಂಗಳೂರು | ೧೯೯೪ | ೭<br>೮ | ಸಿಂಗೇನ ಅಗ್ರಹಾರ<br>ಬ್ಯಾಟರಾಯನಪುರ | ೧೯೯೭<br>೧೯೯೭ | ಬೆಂಗಳೂರು ಉತ್ತರ<br>ಬೆಂಗಳೂರು ದಕ್ಷಿಣ<br>ಬೆಂಗಳೂರು ಪೂರ್ವ<br>ಆನೇಕಲ್ |
| ೩ | ಬೆಂಗಳೂರು ಗ್ರಾಮಾಂತರ<br>ದೊಡ್ಡಬಳ್ಳಾಪುರ | ೧೯೭೯ | ೯<br>೧೦<br>೧೧<br>೧೨<br>೧೩ | ತೂಬಗೆರೆ<br>ನೆಲಮಂಗಲ<br>ದೇವನಹಳ್ಳಿ<br>ವಿಜಯಪುರ<br>ಡಾಬಸ್‌ಪೇಟೆ | ೧೯೯೧<br>೧೯೯೫<br>೧೯೯೫ | ದೊಡ್ಡಬಳ್ಳಾಪುರ<br>ದೇವನಹಳ್ಳಿ<br>ನೆಲಮಂಗಲ |
| ೪ | ಹೊಸಕೋಟೆ | ೨೦೧೧ | | --- | | ಹೊಸಕೋಟೆ |
| ೫ | ರಾಮನಗರ ಜಿಲ್ಲೆ<br>ರಾಮನಗರ | ೨೦೦೩ | ೧೪ | ಮಾಗಡಿ | | ರಾಮನಗರ |
| ೬ | ಚನ್ನಪಟ್ಟಣ | ೧೯೯೫ | ೧೫<br>೧೬<br>೧೭ | ದಾಸಾವರ<br>ಹುಣಸಹಳ್ಳಿ<br>ಕುದೂರು | ೧೯೬೫<br>೧೯೭೭ | ಚನ್ನಪಟ್ಟಣ |
| ೭ | ಕನಕಪುರ | ೧೯೯೭ | ೧೮<br>೧೯ | ದೊಡ್ಡ ಮುದವಾಡಿ<br>ಕೋಡಿಹಳ್ಳಿ | ೧೯೭೮ | ಕನಕಪುರ |
| ೮ | ಚಿತ್ರದುರ್ಗ ಜಿಲ್ಲೆ<br>ಚಿತ್ರದುರ್ಗ | ೧೯೫೧ | ೨೦ | ಭೀಮಸಮುದ್ರ<br>ಭರಮಸಾಗರ<br>ತುರುವನೂರು | ೧೯೭೫<br>೧೯೮೦<br>೧೯೮೨ | ಚಿತ್ರದುರ್ಗ |
| ೯ | ಚಳ್ಳಕೆರೆ | ೧೯೬೫ | ೨೩ | ಮೊಳಕಾಲ್ಮೂರು | ೧೯೭೭ | ಚಳ್ಳಕೆರೆ |
| ೧೦ | ರಾಂಪುರ | ೨೦೧೬ | | | | ಮೊಳಕಾಲ್ಮೂರು |

| | | | | | | |
|---|---|---|---|---|---|---|
| ೧೧ | ಹಿರಿಯೂರು | ೧೯೫೯ | ೨೫ | ಧರ್ಮಪುರ | ೧೯೮೯ | ಹಿರಿಯೂರು |
| ೧೨ | ಹೊಸದುರ್ಗ | ೧೯೫೫ | ೨೫ | ಬೆಳಗೂರು | ೧೯೭೫ | ಹೊಸದುರ್ಗ |
| ೧೩ | ಹೊಳಲ್ಕೆರೆ | ೧೯೮೯ | ೨೬ | ಚಿಕ್ಕಜಾಜೂರು | ೧೯೭೬ | ಹೊಳಲ್ಕೆರೆ |
| ೧೪ | ದಾವಣಗೆರೆ ಜಿಲ್ಲೆ<br>ದಾವಣಗೆರೆ | ೧೯೪೮ | ೨೭<br>೨೮<br>೨೯ | ಹೆಬ್ಬಾಳ<br>ಮಾಯಕೊಂಡ<br>ಹದಡಿ | ೧೯೮೦<br>೧೯೮೦<br>೧೯೮೨ | <br>ದಾವಣಗೆರೆ |
| ೧೫ | ಜಗಳೂರು | ೨೦೦೦ | | | | ಜಗಳೂರು |
| ೧೬ | ಹರಿಹರ | ೧೯೬೧ | ೩೦ | ಮಲೆಬೆನ್ನೂರು | ೧೯೭೭ | ಹರಿಹರ |
| ೧೭ | ಹರಪನಹಳ್ಳಿ | ೧೯೮೬ | | | | ಹರಪನಹಳ್ಳಿ |
| ೧೮ | ಹೊನ್ನಾಳಿ | ೧೯೮೬ | ೩೧ | ನ್ಯಾಮತಿ | ೧೯೮೯ | ಹೊನ್ನಾಳಿ |
| ೧೯ | ಚನ್ನಗಿರಿ | ೧೯೬೪ | ೩೨<br>೩೩<br>೩೪ | ಬಸವಾಪಟ್ಟಣ<br>ಸಂತೆಬೆನ್ನೂರು<br>ನಲ್ಲೂರು | ೧೯೯೪<br>೧೯೯೪<br>೧೯೯೪ | ಚನ್ನಗಿರಿ |
| ೨೦ | ಕೋಲಾರ ಜಿಲ್ಲೆ:<br>ಕೋಲಾರ | ೧೯೭೯ | | | | ಕೋಲಾರ |
| ೨೧ | ಮಾಲೂರು | ೧೯೭೯ | | | | ಮಾಲೂರು |
| ೨೨ | ಬಂಗಾರಪೇಟೆ | ೧೯೬೯ | ೩೫<br>೩೬ | ಕೆ.ಜಿ.ಎಫ್.<br>ಬೇತಮಂಗಲ | ೧೯೭೬<br>೧೯೯೦ | ಬಂಗಾರಪೇಟೆ |
| ೨೩ | ಮುಳಬಾಗಿಲು | ೧೯೬೩ | ೩೭<br>೩೮ | ತಾಯಲೂರು<br>ಎನ್.ವಡ್ಡಹಳ್ಳಿ | ೧೯೯೧<br>೨೦೦೦ | ಮುಳಬಾಗಿಲು |
| ೨೪ | ಶ್ರೀನಿವಾಸಪುರ | ೧೯೮೬ | ೩೯<br>೪೦<br>೪೧ | ಗೌನಿಪಲ್ಲಿ<br>ಯಲ್ದೂರು<br>ಸೋಮಯಾಜಲಹಳ್ಳಿ | ೧೯೮೯<br>೧೯೯೦<br>೨೦೦೨ | ಶ್ರೀನಿವಾಸಪುರ |
| ೨೫ | ಚಿಕ್ಕಬಳ್ಳಾಪುರ ಜಿಲ್ಲೆ<br>ಚಿಕ್ಕಬಳ್ಳಾಪುರ | ೧೯೬೫ | ೪೨<br>೪೩<br>೪೪ | ಪೆರೇಸಂದ್ರ<br>ಶಿಡ್ಲಘಟ್ಟ<br>ಮೇಲೂರು | ೧೯೭೨<br>೧೯೭೨<br>೧೯೭೨ | ಚಿಕ್ಕಬಳ್ಳಾಪುರ<br>ಶಿಡ್ಲಘಟ್ಟ |
| ೨೬ | ಗೌರಿಬಿದನೂರು | ೧೯೬೪ | ೪೫<br>೪೬ | ಮಂಚೇನಹಳ್ಳಿ<br>ಕೋಟಾಲದಿನ್ನೆ | ೧೯೯೨<br>೨೦೧೩ | ಗೌರಿಬಿದನೂರು |
| ೨೭ | ಬಾಗೇಪಲ್ಲಿ | ೨೦೦೬ | ೪೭<br>೪೮<br>೪೯ | ಗುಡಿಬಂಡೆ<br>ಗೂಳೂರು<br>ಚೇಳೂರು | ೨೦೦೭<br>೨೦೦೭<br>೨೦೦೭ | ಬಾಗೇಪಲ್ಲಿ<br>ಗುಡಿಬಂಡೆ |
| ೨೮ | ಚಿಂತಾಮಣಿ | ೧೯೫೪ | ೫೦ | ಇರಗಂಪಲ್ಲಿ | ೧೯೯೨ | ಚಿಂತಾಮಣಿ |
| ೨೯ | ಶಿವಮೊಗ್ಗ ಜಿಲ್ಲೆ:<br>ಶಿವಮೊಗ್ಗ | ೧೯೫೦ | ೫೧<br>೫೨<br>೫೩ | ಮಲ್ಲಾಪುರ<br>ಆಯನೂರು<br>ಹೊಳಲೂರು | ೨೦೦೧<br>೧೯೮೯<br>೧೯೮೯ | ಶಿವಮೊಗ್ಗ |
| ೩೦ | ತೀರ್ಥಹಳ್ಳಿ | ೨೦೧೦ | ೫೪ | ಕೋಣಂದೂರು | ೨೦೦೩ | ತೀರ್ಥಹಳ್ಳಿ |
| ೩೧ | ಸಾಗರ | ೧೯೫೯ | ೫೫<br>೫೬<br>೫೭ | ತಾಳಗುಪ್ಪ<br>ಆನಂದಪುರ<br>ತುಮರಿ | ೧೯೭೫<br>೧೯೭೬<br>೨೦೦೦ | ಸಾಗರ |
| ೩೨ | ಸೊರಬ | ೨೦೧೦ | ೫೮<br>೫೯<br>೬೦<br>೬೧ | ಹಳೆಸೊರಬ<br>ಅನವಟ್ಟಿ<br>ಜಡೆ<br>ಚಂದ್ರಗುತ್ತಿ | ೧೯೭೨<br>೧೯೭೩<br>೧೯೯೧<br>೨೦೦೩ | ಸೊರಬ |
| ೩೩ | ಹೊಸನಗರ | ೨೦೧೦ | ೬೨ | ರಿಪ್ಪನಪೇಟೆ | ೧೯೭೫ | ಹೊಸನಗರ |
| ೩೪ | ಶಿಕಾರಿಪುರ | ೧೯೬೪ | ೬೩ | ಶಿರಾಳಕೊಪ್ಪ<br>ತಡಗಣಿ | ೧೯೮೧<br>೧೯೮೧ | ಶಿಕಾರಿಪುರ |
| ೩೫ | ಭದ್ರಾವತಿ | ೧೯೭೧ | ೬೫ | ಹೊಳೆಹೊನ್ನೂರು | ೧೯೯೧ | ಭದ್ರಾವತಿ |
| ೩೬ | ತುಮಕೂರು ಜಿಲ್ಲೆ:<br>ತುಮಕೂರು | ೧೯೫೧ | ೬೬ | ಅಕ್ಕಿರಾಮಪುರ<br>ಕ್ಯಾತಸಂದ್ರ<br>ಕೊರಟಗೆರೆ<br>ಹೆಬ್ಬೂರು | ೧೯೭೪<br>೧೯೮೪<br>೧೯೮೭<br>೨೦೧೦ | ತುಮಕೂರು<br>ಕೊರಟಗೆರೆ |

| | | | | | | |
|---|---|---|---|---|---|---|
| ೩೭ | ಗುಬ್ಬಿ | ೧೯೬೩ | ೭೦ | ಚೇಳೂರು<br>ಕೆ.ಜಿ.ಟೆಂಪಲ್<br>ಕೊಂಡ್ಲಿಕ್ರಾಸ್<br>ಎಂ.ಎನ್. ಕೋಟೆ<br>ನಿಟ್ಟೂರು<br>ಹೊಸಕೆರೆ<br>ಚಂದ್ರಶೇಖರಪುರ | ೧೯೮೯<br>೧೯೮೯<br>೧೯೮೯<br>೧೯೮೯<br>೧೯೮೯<br>೧೯೮೯<br>೨೦೧೩ | ಗುಬ್ಬಿ |
| ೩೮ | ಹುಳಿಯಾರು | ೧೯೬೧ | ೭೭<br>೭೮ | ಚಿಕ್ಕನಾಯಕನಹಳ್ಳಿ<br>ಹಂದನಕೆರೆ | ೨೦೦೧<br>೨೦೦೦ | ಚಿಕ್ಕನಾಯಕನಹಳ್ಳಿ |
| ೩೯ | ಕುಣಿಗಲ್ | ೧೯೫೯ | ೭೯<br>೮೦ | ಅಮೃತೂರು<br>ಯಡಿಯೂರು | ೧೯೭೯<br>೧೯೯೪ | ಕುಣಿಗಲ್ |
| ೪೦ | ಮಧುಗಿರಿ | ೧೯೫೯ | ೮೧ | ಬ್ಯಾಲ್ಯಾ<br>ಬಡವನಹಳ್ಳಿ<br>ಚಂದ್ರಭಾವಿ<br>ಹೊಸಕೆರೆ | ೧೯೮೭<br>೧೯೮೮<br>೧೯೮೮ | ಮಧುಗಿರಿ |
| ೪೧ | ಪಾವಗಡ | ೧೯೭೬ | ೮೫ | ವೈ.ಎನ್.ಹೊಸಕೋಟೆ | ೧೯೮೮ | ಪಾವಗಡ |
| ೪೨ | ಶಿರಾ | ೧೯೫೫ | ೮೬ | ಕಳ್ಳಂಬೆಳ್ಳ<br>ಬೆಂಚೆಬಸವನ | ೧೯೯೨ | ಶಿರಾ |
| ೪೩ | ತುರುವೇಕೆರೆ | ೧೯೫೯ | ೮೮ | ಸಂಪಿಗೆ<br>ಮಾಯಸಂದ್ರ<br>ದಂಡಿನಶಿವರ | ೧೯೭೬<br>೨೦೧೨<br>೨೦೧೩ | ತುರುವೇಕೆರೆ |
| ೪೪ | ತಿಪಟೂರು | ೧೯೪೮ | ೯೧<br>೯೨<br>೯೩<br>೯೪ | ಕರಡಾಳ್<br>ಕೊನೇಹಳ್ಳಿ<br>ಬೆಳ್ಳೇಕೆರೆ<br>ಕಿಬ್ಬನಹಳ್ಳಿ | ೧೯೭೫<br>೧೯೭೨<br>೧೯೭೫<br>೨೦೧೩ | ತಿಪಟೂರು |

**ಮುಖ್ಯ ಮಾರುಕಟ್ಟೆಗಳು: ೪೧ – ಉಪ ಮಾರುಕಟ್ಟೆಗಳು: ೬೪**

| ಕ್ರಮ ಸಂಖ್ಯೆ | ಮುಖ್ಯ ಮಾರುಕಟ್ಟೆ ಹೆಸರು | ಸ್ಥಾಪನೆಯಾದ ವರ್ಷ | ಕ್ರಮ ಸಂಖ್ಯೆ | ಉಪ ಮಾರುಕಟ್ಟೆಯ ಹೆಸರು | ಸ್ಥಾಪನೆಯಾದ ವರ್ಷ | ಮಾರುಕಟ್ಟೆ ಕ್ಷೇತ್ರ ಹೆಸರು |
|---|---|---|---|---|---|---|
| ಮೈಸೂರು ವಿಭಾಗ | | | | | | |
| ೧ | ಮೈಸೂರು ಜಿಲ್ಲೆ: ಮೈಸೂರು | ೧೯೫೦ | ೧ | ಕಡಕೊಳ | ೧೯೭೧ | ಮೈಸೂರು |
| ೨ | ಕೃಷ್ಣರಾಜನಗರ | ೧೯೫೬ | ೨ | ಸಾಲಿಗ್ರಾಮ | ೧೯೮೮ | ಕೃಷ್ಣರಾಜನಗರ |
| ೩ | ಹುಣಸೂರು | ೧೯೭೮ | ೩ | ರತ್ನಪುರಿ | ೧೯೭೮ | ಹುಣಸೂರು |
| ೪ | ಪಿರಿಯಾಪಟ್ಟಣ | ೧೯೯೩ | ೪ | ಬೆಟ್ಟದಪುರ | ೧೯೭೮ | ಪಿರಿಯಾಪಟ್ಟಣ |
| ೫ | ತಿ.ನರಸೀಪುರ | ೧೯೯೪ | ೫ | ಬನ್ನೂರು | ೧೯೭೧ | ತಿ.ನರಸೀಪುರ |
| ೬ | ನಂಜನಗೂಡು | ೧೯೫೪ | ೬ | ಹುಲ್ಲಹಳ್ಳಿ | ೨೦೦೦ | ನಂಜನಗೂಡು |
| ೭ | ಸಂತೆ ಸರಗೂರು | ೧೯೯೬ | ೭<br>೮ | ಹೆಚ್.ಡಿ. ಕೋಟೆ<br>ಯರಹಳ್ಳಿ | ೧೯೭೫ | ಹೆಚ್.ಡಿ. ಕೋಟೆ |
| ೮ | ಚಾಮರಾಜನಗರ ಜಿಲ್ಲೆ:<br>ಚಾಮರಾಜನಗರ | ೧೯೬೧ | ೯ | ಸಂತೆಮರಹಳ್ಳಿ | ೧೯೭೫ | ಚಾಮರಾಜನಗರ<br>ಯಳಂದೂರು |
| ೯ | ಗುಂಡ್ಲುಪೇಟೆ | ೧೯೯೬ | ೧೦ | ತೆರಕಣಾಂಬಿ | ೧೯೭೫ | ಗುಂಡ್ಲುಪೇಟೆ |
| ೧೦ | ಕೊಳ್ಳೇಗಾಲ | ೧೯೬೪ | ೧೧<br>೧೨ | ಹನೂರು<br>ಒಡೆಯರಪಾಳ್ಯ | ೧೯೭೮<br>೧೯೯೯ | ಕೊಳ್ಳೇಗಾಲ |
| ೧೧ | ದಕ್ಷಿಣ ಕನ್ನಡ ಜಿಲ್ಲೆ<br>ಮಂಗಳೂರು | ೧೯೪೯ | ೧೩ | ಮೂಡಬಿದ್ರೆ | ೧೯೯೨ | ಮಂಗಳೂರು |
| ೧೨ | ಬಂಟ್ವಾಳ | ೨೦೦೦ | ೧೪ | ವಿಟ್ಲ | ೧೯೯೪ | ಬಂಟ್ವಾಳ |

| | | | | | | |
|---|---|---|---|---|---|---|
| ೧೩ | ಮತ್ತೂರು | ೧೯೯೨ | ೧೫<br>೧೬<br>೧೭<br>೧೮<br>೧೯<br>೨೦<br>೨೧<br>೨೨ | ಉಪ್ಪಿನಂಗಡಿ<br>ನಕ್ಕಿಲಾಡಿ<br>ಕಡಬ<br>ಕೋಡಿಂಬಾಳ<br>ನೆಲ್ಯಾಡಿ<br>ಕಾಣಿಯೂರು<br>ಈಶ್ವರಮಂಗಳ<br>ವಾಣಾಜೆ | ೧೯೯೬<br>೧೯೯೬<br>೨೦೦೬<br>೨೦೦೬<br>೨೦೦೬<br>೨೦೦೬<br>೨೦೦೬<br>೨೦೧೦ | ಮತ್ತೂರು |
| ೧೪ | ಸುಳ್ಯ | ೧೯೯೬ | | ---- | | ಸುಳ್ಯ |
| ೧೫ | ಬೆಳ್ತಂಗಡಿ | ೧೯೯೯ | | ---- | | ಬೆಳ್ತಂಗಡಿ |
| ೧೬ | ಉಡುಪಿ ಜಿಲ್ಲೆ:<br>ಉಡುಪಿ | ೧೯೯೨ | | ---- | | ಉಡುಪಿ |
| ೧೭ | ಕುಂದಾಪುರ | ೧೯೯೮ | | --- | | ಕುಂದಾಪುರ |
| ೧೮ | ಕಾರ್ಕಳ | ೧೯೯೭ | ೨೩<br>೨೪<br>೨೫ | ಶಿವಪುರ<br>ಕುಚ್ಚೂರು<br>ಹೆಬ್ರಿ | ೧೯೯೪<br>೧೯೯೪<br>೧೯೯೪ | ಕಾರ್ಕಳ |
| ೧೯ | ಕೊಡಗು ಜಿಲ್ಲೆ<br>ಮಡಿಕೇರಿ | ೧೯೭೯ | | ---- | | ಮಡಿಕೇರಿ |
| ೨೦ | ಸೋಮವಾರಪೇಟೆ<br>(ಕೇಂದ್ರಸ್ಥಾನ ಕುಶಾಲನಗರ) | ೧೯೭೯ | ೨೬<br>೨೭<br>೨೮ | ಸೋಮವಾರಪೇಟೆ<br>ಶನಿವಾರ ಸಂತೆ<br>ಶುಂಠಿಕೊಪ್ಪ | ೧೯೭೯೧೯೯೦ | ಸೋಮವಾಪೇಟೆ |
| ೨೧ | ಗೋಣಿಕೊಪ್ಪಲ್ | ೧೯೬೯ | ೨೯ | ಮಾಕುಟ್ಟ | ೧೯೯೧ | ವಿರಾಜಪೇಟೆ |
| ೨೨ | ಚಿಕ್ಕಮಗಳೂರು ಜಿಲ್ಲೆ:<br>ಚಿಕ್ಕಮಗಳೂರು | ೧೯೯೪ | | ---- | | ಚಿಕ್ಕಮಗಳೂರು |
| ೨೩ | ಕಡೂರು | ೧೯೫೭ | ೩೦<br>೩೧<br>೩೨<br>೩೩<br>೩೪<br>೩೫ | ಪಂಚನಹಳ್ಳಿ<br>ಬೀರೂರು<br>ಅಂತರಗಟ್ಟೆ<br>ಯಗಟ್ಟಿ<br>ಸಿಂಗಟಗೆರೆ<br>ಹಿರೇನಲ್ಲೂರು | ೧೯೭೭<br>೧೯೮೬<br>೧೯೮೬<br>೧೯೮೬<br>೧೯೯೬<br>೧೯೯೬ | ಕಡೂರು |
| ೨೪ | ತರೀಕೆರೆ | ೧೯೬೪ | ೩೬<br>೩೭ | ಶಿವನಿ<br>ಅಜ್ಜಂಪುರ | ೧೯೮೮ | ತರೀಕೆರೆ |
| ೨೫ | ಮೂಡಿಗೆರೆ | ೧೯೯೬ | | | | ಮೂಡಿಗೆರೆ |
| ೨೬ | ಶೃಂಗೇರಿ | ೨೦೦೧ | | | ೧೯೯೬ | ಶೃಂಗೇರಿ |
| ೨೭ | ಕೊಪ್ಪ | | ೩೮ | ಎನ್.ಆರ್.ಪುರ | ೧೯೭೮ | ಕೊಪ್ಪ<br>ಎನ್.ಆರ್.ಪುರ |
| ೨೮ | ಹಾಸನ ಜಿಲ್ಲೆ:<br>ಹಾಸನ | ೧೯೫೭ | ೩೯ | ದುದ್ದ | ೧೯೯೩ | ಹಾಸನ<br>ಆಲೂರು |
| ೨೯ | ಬೇಲೂರು | ೧೯೯೮ | ೪೦<br>೪೧ | ಹನಿಕೆ<br>ಹಳೇಬೀಡು | ೧೯೭೪<br>೧೯೯೭ | ಬೇಲೂರು |
| ೩೦ | ಅರಸೀಕೆರೆ | ೧೯೫೦ | ೪೨<br>೪೩<br>೪೪<br>೪೫<br>೪೬ | ದೊಡ್ಡಮೇಟಿ ಕುರ್ಕೆ<br>ಜಾವಗಲ್<br>ಗಂಡಸಿ<br>ಬಾಣಾವರ<br>ಜೆ.ಸಿ.ಪುರ | ೧೯೭೧<br>೧೯೭೦<br>೧೯೭೦<br>೧೯೭೦ | ಅರಸೀಕೆರೆ |
| ೩೧ | ಹೊಳೆನರಸೀಪುರ | ೧೯೬೪ | ೪೭<br>೪೮ | ದೊಡ್ಡಹಳ್ಳಿ<br>ಕೋಣನೂರು | ೧೯೭೦<br>೧೯೮೭ | ಹೊಳೆನರಸೀಪುರ |
| ೩೨ | ಅರಕಲಗೂಡು | ೨೦೧೪ | ೪೯ | ಮಲ್ಲಿಪಟ್ಟಣ | ೧೯೮೭ | ಅರಕಲಗೂಡು |

| | | | | | | |
|---|---|---|---|---|---|---|
| ೩೩ | ಚನ್ನರಾಯಪಟ್ಟಣ | ೧೯೬೪ | ೫೦<br>೫೧<br>೫೨<br>೫೩ | ದಿಡಿಗ<br>ಜುಟ್ಟನಹಳ್ಳಿ<br>ನುಗ್ಗೇಹಳ್ಳಿ<br>ಶ್ರವಣಬೆಳಗೊಳ | ೧೯೭೭<br>೧೯೯೦<br>೧೯೭೭<br>೧೯೯೨ | ಚನ್ನರಾಯಪಟ್ಟಣ |
| ೩೪ | ಸಕಲೇಶಪುರ | ೧೯೫೩ | ೫೪ | ಬಾಳುಪೇಟೆ | ೧೯೯೭ | ಸಕಲೇಶಪುರ |
| ೩೫ | ಮಂಡ್ಯ ಜಿಲ್ಲೆ:<br>ಮಂಡ್ಯ | ೧೯೫೯ | | | | ಮಂಡ್ಯ |
| ೩೬ | ಶ್ರೀರಂಗಪಟ್ಟಣ | ೨೦೦೩ | | | | ಶ್ರೀರಂಗಪಟ್ಟಣ |
| ೩೭ | ಮದ್ದೂರು | ೧೯೯೨ | ೫೫<br>೫೬<br>೫೭<br>೫೮ | ಕಿರುಗಾವಲು<br>ನಿಡಗಟ್ಟ<br>ಭಾರತಿನಗರ<br>ಗುಡಿಗೆರೆ | ೧೯೭೦<br>೧೯೯೪<br>೨೦೦೧<br>೨೦೦೧ | ಮದ್ದೂರು |
| ೩೮ | ಮಳವಳ್ಳಿ | ೨೦೧೬ | | | | ಮಳವಳ್ಳಿ |
| ೩೯ | ಕೆ.ಆರ್. ಪೇಟೆ | ೧೯೯೨ | ೫೯<br>೬೦<br>೬೧ | ಕಿಕ್ಕೇರಿ<br>ಸಂತೆಬಾಚನಹಳ್ಳಿ<br>ಬಲ್ಲೇನಹಳ್ಳಿ | ೧೯೭೮<br>೧೯೮೯<br>೨೦೦೦ | ಕೆ.ಆರ್.ಪೇಟೆ |
| ೪೦ | ನಾಗಮಂಗಲ | ೧೯೯೭ | ೬೨<br>೬೩<br>೬೪ | ಕದಬಳ್ಳಿ<br>ಬೆಂಡಿಗನವಿಲೆ<br>ಬೆಳ್ಳೂರು | ೧೯೭೧<br>೧೯೭೬<br>೧೯೮೯ | ನಾಗಮಂಗಲ |
| ೪೧ | ಪಾಂಡವಪುರ | ೨೦೦೨ | | | | ಪಾಂಡವಪುರ |

## ಮುಖ್ಯ ಮಾರುಕಟ್ಟೆಗಳು ೪೫ – ಉಪ ಮಾರುಕಟ್ಟೆಗಳು: ೧೨೫

| ಕ್ರ. ಸಂ. | ಮುಖ್ಯ ಮಾರುಕಟ್ಟೆ ಹೆಸರು | ಸ್ಥಾಪನೆಯಾದ ವರ್ಷ | ಕ್ರಮ ಸಂಖ್ಯೆ | ಉಪ ಮಾರುಕಟ್ಟೆಯ ಹೆಸರು | ಸ್ಥಾಪನೆಯಾದ ವರ್ಷ | ಮಾರುಕಟ್ಟೆ ಕ್ಷೇತ್ರ ಹೆಸರು |
|---|---|---|---|---|---|---|
| ಬೆಳಗಾವಿ ವಿಭಾಗ | | | | | | |
| ೧ | ಬೆಳಗಾವಿ ಜಿಲ್ಲೆ<br>ಬೆಳಗಾವಿ | ೧೯೫೬ | ೧ | ಹಿರೇಬಾಗೇವಾಡಿ | ೧೯೬೮ | ಬೆಳಗಾವಿ |
| ೨ | ಬೈಲಹೊಂಗಲ | ೧೯೩೬ | ೨<br>೩<br>೪<br>೫<br>೬ | ಕಿತ್ತೂರು<br>ನೇಸರ್ಗಿ<br>ದೊಡ್ಡವಾಡ<br>ಬೆಳವಡಿ<br>ಎಂ.ಕೆ.ಹುಬ್ಬಳ್ಳಿ | ೧೯೫೨<br>೧೯೫೨<br>೧೯೫೩<br>೧೯೯೮<br>೨೦೦೨ | ಬೈಲಗೊಂಗಲ |
| ೩ | ಅಥಣಿ | ೧೯೬೮ | ೭ | ಕಾಗವಾಡ | ೧೯೫೫ | ಅಥಣಿ |
| ೪ | ಗೋಕಾಕ್ | ೧೯೪೮ | ೮<br>೯<br>೧೦<br>೧೧ | ಘಟಪ್ರಭ<br>ಅಂಕಲಗಿ<br>ಮೂಡಲಗಿ<br>ಯಾದವಾಡ | ೧೯೭೯<br>೧೯೫೫<br>೧೯೫೫<br>೨೦೦೦ | ಗೋಕಾಕ್ |
| ೫ | ಕುಡಚಿ | ೧೯೬೧ | ೧೨<br>೧೩<br>೧೪ | ಹಾರೋಗೇರಿ<br>ರಾಯಬಾಗ್<br>ಕಂಕಣವಾಡಿ | ೧೯೬೯<br>೧೯೮೪<br>೧೯೯೫ | ರಾಯಬಾಗ್ |
| ೬ | ನಂದಗಡ | ೧೯೬೧ | ೧೫<br>೧೬<br>೧೭<br>೧೮<br>೧೯ | ಬಿಡಿ<br>ಇಟಗಿ<br>ಖಾನಾಪುರ<br>ಹಲಸಗಿ<br>ಕಸಬ ನಂದಗಡ | ೧೯೬೯<br>೧೯೬೯<br>೧೯೬೯<br>೧೯೬೯ | ಖಾನಾಪುರ |
| ೭ | ನಿಪ್ಪಾಣಿ | ೧೯೫೬ | ೨೦<br>೨೧<br>೨೨ | ಚಿಕ್ಕೋಡಿ<br>ಸದಲಗಾ<br>ಎಕ್ಸಂಬಾ | ೧೯೭೮<br>೨೦೦೪<br>೨೦೦೫ | ಚಿಕ್ಕೋಡಿ |

| | | | | | | |
|---|---|---|---|---|---|---|
| ೮ | ರಾಮದುರ್ಗ | ೧೯೬೮ | ೨೩<br>೨೪<br>೨೫ | ಕಟಕೋಳ<br>ಹುಲುಕುಂದ<br>ಸುರೇಬಾನ್ | ೧೯೫೯<br>೧೯೫೯<br>೧೯೭೫ | ರಾಮದುರ್ಗ |
| ೯ | ಸೌದತ್ತಿ | ೧೯೬೨ | ೨೬<br>೨೭<br>೨೮<br>೨೯<br>೩೦ | ಎರಗಟ್ಟಿ<br>ಮುರಗೋಡ್<br>ಶಿವಪುರ<br>ಮುನವಳ್ಳಿ<br>ಉಗರಗೋಳ | ೧೯೬೨<br>೧೯೬೨<br>೧೯೬೨<br>೧೯೭೫<br>೧೯೮೭ | ಸೌದತ್ತಿ |
| ೧೦ | ಸಂಕೇಶ್ವರ | ೧೯೪೯ | ೩೧<br>೩೨<br>೩೩<br>೩೪<br>೩೫<br>೩೬ | ಬೆಲ್ಲದ ಬಾಗೇವಾಡಿ<br>ಪಾಶ್ಚಾಪುರ<br>ಹುಕ್ಕೇರಿ<br>ಯಮಕನಮರಡಿ<br>ದೊಡ್ಡಿರಾಮೇವಾಡಿ<br>ಹೆಬ್ಬಾಳ | ೧೯೫೫<br>೧೯೫೫<br>೧೯೫೫<br>೧೯೫೫<br>೧೯೭೭<br>೧೯೭೮ | ಹುಕ್ಕೇರಿ |
| ೧೧ | ವಿಜಯಪುರ ಜಿಲ್ಲೆ:<br>ವಿಜಯಪುರ | ೧೯೩೭ | ೩೭<br>೩೮<br>೩೯<br>೪೦<br>೪೧<br>೪೨<br>೪೩ | ಬಸವನಬಾಗೇವಾಡಿ<br>ಗೊಳಸಂಗಿ<br>ಹೂವಿನಹಿಪ್ಪರಗಿ<br>ತಿಕೋಟಾ<br>ಬಬಲೇಶ್ವರ<br>ನಿಡಗುಂದಿ | ೧೯೭೬<br>೧೯೯೦<br>೧೯೯೦<br>೧೯೯೬<br>೧೯೯೬<br>೧೯೯೬<br>೨೦೦೩ | ವಿಜಯಪುರ<br>ಬಸವನಬಾಗೇವಾಡಿ |
| ೧೨ | ಸಿಂದಗಿ | ೧೯೯೬ | ೪೪<br>೪೫<br>೪೬ | ಮೋರಟಗಿ<br>ಅಲಮೇಲ<br>ದೇವರಹಿಪ್ಪರಗಿ | ೧೯೮೯<br>೧೯೮೯<br>೧೯೮೯ | ಸಿಂದಗಿ |
| ೧೩ | ಇಂಡಿ | ೧೯೪೯ | ೪೭ | ಚಡಚಣ | ೧೯೬೧ | ಇಂಡಿ |
| ೧೪ | ತಾಳಿಕೋಟೆ | ೧೯೬೪ | ೪೮<br>೪೯ | ಮುದ್ದೇಬಿಹಾಳ<br>ನಾಲತ್‌ವಾಡ | ೧೯೬೪<br>೧೯೬೪ | ಮುದ್ದೇಬಿಹಾಳ |
| ೧೫ | ಬಾಗಲಕೋಟೆ ಜಿಲ್ಲೆ:<br>ಬಾಗಲಕೋಟೆ | ೧೯೪೫ | ೫೦ | ಕಲಾದಗಿ | ೧೯೭೮ | ಬಾಗಲಕೋಟೆ |
| ೧೬ | ಬೀಳಗಿ | ೨೦೧೦ | ೫೧ | ಗಲಗಲಿ | ೧೯೭೮ | ಬೀಳಗಿ |
| ೧೭ | ಬಾದಾಮಿ | ೧೯೭೭ | ೫೨<br>೫೩<br>೫೪<br>೫೫<br>೫೬ | ಕುಳಗೇರಿ ಕ್ರಾಸ್<br>ಕೆರೂರು<br>ಜಾಲಿಹಾಳ<br>ನಂದಿಕೇಶ್ವ<br>ಗುಳೇದಗುಡ್ಡ | ೧೯೭೭<br>೧೯೭೫<br>೧೯೭೫<br>೧೯೮೪<br>೧೯೯೧ | ಬಾದಾಮಿ |
| ೧೮ | ಹುನುಗುಂದ | ೧೯೭೭ | ೫೭<br>೫೮<br>೫೯ | ಇಳಕಲ್<br>ಅಮೀನಗಡ<br>ಗುಡೂರು | ೧೯೭೭<br>೧೯೭೭<br>೧೯೯೩ | ಹುನುಗುಂದ |
| ೧೯ | ಜಮಖಂಡಿ | ೧೯೫೩ | ೬೦<br>೬೧ | ತೆರದಾಳ<br>ಸಾವಳಗಿ | ೧೯೫೬<br>೧೯೮೦ | ಜಮಖಂಡಿ |
| ೨೦ | ಮಹಾಲಿಂಗಪುರ | ೧೯೮೬ | ೬೨<br>೬೩ | ಮುಧೋಳ<br>ಲೋಕಾಪುರ | ೧೯೪೩<br>೧೯೮೦ | ಮುಧೋಳ |
| ೨೧ | ಧಾರವಾಡ ಜಿಲ್ಲೆ:<br>ಧಾರವಾಡ | ೧೯೪೯ | ೬೪<br>೬೫<br>೬೬ | ಅಳ್ನಾವರ<br>ಖಾನಾಪುರ<br>ಶೇಡಬಾಳ | ೧೯೬೦<br>೨೦೦೯ | ಧಾರವಾಡ<br>ಧಾರವಾಡ |
| ೨೨ | ಅಣ್ಣಿಗೇರಿ | ೧೯೪೮ | ೬೭<br>೬೮<br>೬೯<br>೭೦<br>೭೧ | ನವಲಗುಂದ<br>ಮೊರಬ<br>ಅಳಗವಾಡಿ<br>ಹೆಬ್ಬಾಳ<br>ಶಲವಡಿ | ೧೯೪೮<br>೧೯೮೬<br>೧೯೯೪<br>೧೯೯೪<br>೧೯೯೪ | ನವಲಗುಂದ |

| | | | | | | |
|---|---|---|---|---|---|---|
| ೨೩ | ಹುಬ್ಬಳ್ಳಿ | ೧೯೪೩ | ೭೨<br>೭೩<br>೭೪ | ನೂಲ್ವಿ<br>ಹೆಬಸೂರು<br>ಶಿರಗುಪ್ಪಿ | ೧೯೯೭<br>೧೯೯೭<br>೧೯೯೭ | ಹುಬ್ಬಳ್ಳಿ |
| ೨೪ | ಕುಂದಗೋಳ | ೧೯೬೧ | ೭೫<br>೭೬ | ಗುಡಿಗೇರಿ<br>ಸಂಶಿ | ೧೯೭೨<br>೧೯೭೩ | ಕುಂದಗೋಳ |
| ೨೫ | ಕಲಘಟಗಿ | ೧೯೮೨ | | ---- | | ಕಲಘಟಗಿ |
| ೨೬ | ಗದಗ ಜಿಲ್ಲೆ:<br>ಗದಗ | ೧೯೪೨ | ೭೭<br>೭೮<br>೭೯<br>೮೦<br>೮೧<br>೮೨ | ಹುಲಕೋಟಿ<br>ಮುಳಗುಂದ<br>ಕುರ್ತಕೋಟಿ<br>ಹೊಂಬಳ<br>ಕೊಟುಮಚಗಿ<br>ಸೊರಟೂರು | ೧೯೬೦<br>೧೯೪೮<br>೧೯೮೭<br>೧೯೮೮<br>೧೯೮೮<br>೧೯೮೮ | ಗದಗ |
| ೨೭ | ಮುಂಡರಗಿ | ೧೯೫೯ | ೮೩ | ಡಂಬಳ | ೧೯೫೯ | ಮುಂಡರಗಿ |
| ೨೮ | ನರಗುಂದ | ೧೯೪೭ | ೮೪<br>೮೫<br>೮೬ | ಶಿರೋಳ<br>ಕೊಣ್ಣೂರು<br>ಚಿಕ್ಕನರಗುಂದ | ೧೯೮೫<br>೧೯೮೫<br>೧೯೮೯ | ನರಗುಂದ |
| ೨೯ | ರೋಣ<br>(ಕೇಂದ್ರಸ್ಥಾನ<br>ಹೊಳೆಆಲೂರು | ೧೯೫೯ | ೮೭<br>೮೮<br>೮೯<br>೯೦ | ನರೇಗಲ್<br>ಗಜೇಂದ್ರಗಡ<br>ರೋಣ<br>ಸೂಡಿ | ೧೯೫೯<br>೧೯೫೯<br>೧೯೫೯<br>೧೯೫೯ | ರೋಣ |
| ೩೦ | ಲಕ್ಷ್ಮೇಶ್ವರ | ೧೯೫೫ | ೯೧<br>೯೨<br>೯೩ | ಶಿರಹಟ್ಟಿ<br>ಶಿಗಳಿ<br>ಬೆಳ್ಳಟ್ಟಿ | ೧೯೫೫<br>೧೯೫೫<br>೧೯೫೫ | ಶಿರಹಟ್ಟಿ |
| ೩೧ | ಹಾವೇರಿ ಜಿಲ್ಲೆ<br>ಹಾವೇರಿ | ೧೯೫೫ | ೯೪<br>೯೫ | ಗುತ್ತಲ್<br>ಕರಜಗಿ | ೧೯೬೦<br>೧೯೮೭ | ಹಾವೇರಿ |
| ೩೨ | ಹಿರೇಕರೂರು | ೧೯೬೩ | ೯೬<br>೯೭<br>೯೮ | ಹಂಸಭಾವಿ<br>ಮಾಸೂರು<br>ರಟ್ಟಿಹಳ್ಳಿ | ೧೯೬೪<br>೧೯೬೪<br>೧೯೬೪ | ಹಿರೇಕರೂರು |
| ೩೩ | ರಾಣೆಬೆನ್ನೂರು | ೧೯೫೫ | ೯೯<br>೧೦೦ | ಹಲಗೇರಿ<br>ತುಮ್ಮಿನಕಟ್ಟಿ | ೧೯೫೫<br>೧೯೮೮ | ರಾಣೆಬೆನ್ನೂರು |
| ೩೪ | ಬ್ಯಾಡಗಿ | ೧೯೪೩ | ೧೦೧<br>೧೦೨ | ಚಿಕ್ಕಬಾಸೂರು<br>ಮೋಟೆಬೆನ್ನೂರು | ೧೯೮೪<br>೧೯೮೭ | ಬ್ಯಾಡಗಿ |
| ೩೫ | ಸವಣೂರು | ೧೯೫೭ | ೧೦೩<br>೧೦೪ | ಯಲವಗಿ<br>ಕಡಕೋಳ | ೧೯೫೪<br>೧೯೫೫ | ಸವಣೂರು |
| ೩೬ | ಹಾನಗಲ್ | ೧೯೭೬ | ೧೦೫ | ಅಕ್ಕಿಆಲೂರು | ೧೯೭೬ | ಹಾನಗಲ್ |
| ೩೭ | ಶಿಗ್ಗಾಂವ | ೨೦೦೨ | | ---- | | ಶಿಗ್ಗಾಂವ |
| ೩೮ | ಉತ್ತರಕನ್ನಡ ಜಿಲ್ಲೆ<br>ಹಳಿಯಾಳ | ೧೯೬೨ | ೧೦೬ | ದಾಂಡೇಲಿ | ೧೯೯೨ | ಹಳಿಯಾಳ<br>ಸೂಪ |
| ೩೯ | ಕುಮಟಾ | ೧೯೬೦ | ೧೦೭<br>೧೦೮<br>೧೦೯ | ಗೋಕರ್ಣ<br>ಕತಗಾಲ<br>ಮೂರೂರು | ೧೯೯೧<br>೧೯೯೧<br>೨೦೦೦ | ಕುಮಟಾ |
| ೪೦ | ಹೊನ್ನಾವರ | ೧೯೭೫ | ೧೧೦<br>೧೧೧<br>೧೧೨ | ಭಟ್ಕಳ<br>ಬಿಳಲಖಂಡ<br>ಇಡಗುಂಜಿ | ೧೯೭೫<br>೧೯೮೯<br>೧೯೮೯ | ಹೊನ್ನಾವರ<br>ಭಟ್ಕಳ |
| ೪೧ | ಸಿದ್ದಾಪುರ | ೧೯೭೦ | ೧೧೩<br>೧೧೪<br>೧೧೫ | ಅನಲೆಬೈಲ್<br>ತೆರೆಹಳ್ಳಿ ಕಸ್ನೂರ್<br>ಮನ್‌ಮನೆ | ೧೯೭೨<br>೧೯೭೨<br>೧೯೭೨ | ಸಿದ್ದಾಪುರ |
| ೪೨ | ಯಲ್ಲಾಪುರ | ೧೯೭೦ | ೧೧೬<br>೧೧೭<br>೧೧೮ | ಕಿರುವತ್ತಿ<br>ಉಮ್ಮಚಗಿ<br>ಗುಳ್ಳಾಪುರ | ೧೯೭೯<br>೨೦೦೦<br>೨೦೦೦ | ಯಲ್ಲಾಪುರ |

| | | | | | | |
|---|---|---|---|---|---|---|
| ೪೩ | ಶಿರಸಿ | ೧೯೫೪ | ೧೧೯<br>೧೨೦<br>೧೨೧<br>೧೨೨<br>೧೨೩ | ಬಿಸಿಲಕೊಪ್ಪ<br>ಯಡಹಳ್ಳಿ<br>ಬನವಾಸಿ<br>ದಾಸನಕೊಪ್ಪ<br>ಜಿಪಗಿ | ೧೯೭೨<br>೧೯೭೨<br>೧೯೭೨<br>೧೯೭೨<br>೧೯೭೨ | ಶಿರಸಿ |
| ೪೪ | ಮುಂಡಗೋಡ | ೧೯೯೭ | | ---- | | ಮುಂಡಗೋಡ |
| ೪೫ | ಕಾರವಾರ | ೧೯೭೮ | ೧೨೪<br>೧೨೫ | ಕದ್ರಾ<br>ಅಂಕೋಲ | ೧೯೮೯<br>೧೯೬೦ | ಕಾರವಾರ<br>ಅಂಕೋಲ |

## ಮುಖ್ಯ ಮಾರುಕಟ್ಟೆಗಳು: ೩೧ – ಉಪ ಮಾರುಕಟ್ಟೆಗಳು: ೬೮

| ಕ್ರ. ಸಂ. | ಮುಖ್ಯ ಮಾರುಕಟ್ಟೆ ಹೆಸರು | ಸ್ಥಾಪನೆ ಯಾದ ವರ್ಷ | ಕ್ರ. ಸಂ. | ಉಪ ಮಾರುಕಟ್ಟೆಯ ಹೆಸರು | ಸ್ಥಾಪನೆ ಯಾದ ವರ್ಷ | ಮಾರುಕಟ್ಟೆ ಕ್ಷೇತ್ರ ಹೆಸರು |
|---|---|---|---|---|---|---|
| ಕಲಬುರಗಿ ವಿಭಾಗ | | | | | | |
| ೧ | ಕಲಬುರಗಿ ಜಿಲ್ಲೆ<br>ಕಲಬುರಗಿ | ೧೯೪೦ | ೧<br>೨<br>೩<br>೪ | ಅಫಜಲ್ಪುರ<br>ದೇವರಗಾಣಗಾಪುರ<br>ಕಮಲಾಪುರ<br>ಕರಜಗಿ | ೧೯೭೧<br>೧೯೭೮<br>೧೯೮೯<br>೧೯೮೯ | ಕಲಬುರಗಿ<br>ಅಫಜಲ್ಪುರ |
| ೨ | ಅಳಂದ | ೨೦೧೪ | ೫ | ಮಾದನಹಿಪ್ಪರಗ | ೧೯೭೪ | ಆಳಂದ |
| ೩ | ಜೇವರ್ಗಿ | ೧೯೭೮ | ೬ | ಯಡ್ರಾಮಿ | ೧೯೮೯ | ಜೇವರ್ಗಿ |
| ೪ | ಚಿತ್ತಾಪುರ | ೧೯೫೧ | ೭<br>೮<br>೯<br>೧೦ | ನಲ್ವಾರ<br>ಶಹಾಬಾದ್<br>ವಾಡಿ<br>ಕಲ್ಲೂರು | ೧೯೫೧<br>೧೯೫೧<br>೧೯೫೧<br>೧೯೫೧ | ಚಿತ್ತಾಪುರ |
| ೫ | ಸೇಡಂ | ೧೯೪೭ | ೧೧<br>೧೨ | ಮಳಖೇಡ<br>ಮುಧೋಳ | ೧೯೭೦<br>೧೯೮೪ | ಸೇಡಂ |
| ೬ | ಚಿಂಚೋಳಿ | ೧೯೯೬ | ೧೩ | ಸುಲೇಪೇಟೆ | ೧೯೯೦ | ಚಿಂಚೋಳಿ |
| ೭ | ಯಾದಗಿರಿ ಜಿಲ್ಲೆ<br>ಯಾದಗಿರಿ | ೧೯೪೭ | ೧೪<br>೧೫ | ಗುರುಮಿಟ್ಕಲ್<br>ಸೈದಾಪುರ | ೧೯೭೭<br>೧೯೫೧ | ಯಾದಗಿರಿ |
| ೮ | ಶಹಾಪುರ | ೧೯೫೧ | ೧೬<br>೧೭<br>೧೮ | ಗೋಗಿ<br>ಸಗರ<br>ವಡಗೇರ | ೧೯೫೧<br>೧೯೭೭<br>೧೯೭೭ | ಶಹಾಪುರ |
| ೯ | ಶೋರಾಪುರ | ೧೯೫೧ | ೧೯<br>೨೦<br>೨೧ | ಹುಣಸಗಿ<br>ಕೆಂಬಾವಿ<br>ಖಾನಾಪುರ | ೧೯೮೭<br>೧೯೭೭<br>೧೯೮೫ | ಶೋರಾಪುರ |
| ೧೦ | ಬಳ್ಳಾರಿ ಜಿಲ್ಲೆ:<br>ಬಳ್ಳಾರಿ | ೧೯೪೯ | ೨೨<br>೨೩<br>೨೪ | ಮೋಕ<br>ಕುಡಿತಿನಿ<br>ಕುರುಗೋಡು | ೧೯೭೫<br>೧೯೭೬<br>೧೯೭೬ | ಬಳ್ಳಾರಿ |
| ೧೧ | ಸಂಡೂರು | ೨೦೧೬ | | | | ಸಂಡೂರು |
| ೧೨ | ಕೊಟ್ಟೂರು | ೧೯೭೩ | ೨೫<br>೨೬ | ಕೂಡ್ಲಗಿ<br>ಚಿಕ್ಕಜೋಗಿಹಳ್ಳಿ | ೧೯೮೯<br>೧೯೯೧ | ಕೂಡ್ಲಿಗಿ |
| ೧೩ | ಹೊಸಪೇಟೆ | ೧೯೭೩ | ೨೭<br>೨೮ | ಕಂಪ್ಲಿ<br>ಮರಿಯಮ್ಮನಹಳ್ಳಿ | ೧೯೭೩<br>೧೯೮೬ | ಹೊಸಪೇಟೆ |
| ೧೪ | ಹೆಚ್.ಬಿ.ಹಳ್ಳಿ | ೧೯೭೩ | ೨೯<br>೩೦ | ತಂಬ್ರಹಳ್ಳಿ<br>ಹನಸಿ | ೧೯೯೬<br>೨೦೦೮ | ಹೆಚ್.ಬಿ.ಹಳ್ಳಿ |
| ೧೫ | ಹಡಗಲಿ | ೧೯೯೩ | ೩೧ | ಹೊಳಲು | ೧೯೯೪ | ಹಡಗಲಿ |
| ೧೬ | ಸಿರುಗುಪ್ಪ | ೧೯೭೩ | ೩೨<br>೩೩<br>೩೪<br>೩೫ | ತೆಕ್ಕಲಕೋಟೆ<br>ಕೆರೂರು<br>ಸಿರಿಗೆರೆ<br>ಹಚ್ಚೊಳ್ಳಿ | ೧೯೭೧<br>೧೯೭೧<br>೧೯೭೧<br>೧೯೭೧ | ಸಿರುಗುಪ್ಪ |

| | | | | | | |
|---|---|---|---|---|---|---|
| ೧೭ | ಬೀದರ್ ಜಿಲ್ಲೆ:<br>ಬೀದರ | ೧೯೪೦ | ೩೬ | ಮನ್ನೋಳಿ | ೧೯೭೯ | ಬೀದರ್ |
| ೧೮ | ಹುಮ್ನಾಬಾದ | ೧೯೫೧ | ೩೭<br>೩೮<br>೩೯ | ಚಿಟಗುಪ್ಪ<br>ದುಬ್ಬಲಗುಂಡಿ<br>ಹಳ್ಳಿಖೇಡ | ೧೯೫೧<br>೧೯೫೧<br>೧೯೫೧ | ಹುಮ್ನಾಬಾದ್ |
| ೧೯ | ಬಸವಕಲ್ಯಾಣ | ೧೯೫೫ | ೪೦ | ಹುಲಸೂರು | ೧೯೭೧ | ಬಸವಕಲ್ಯಾಣ |
| ೨೦ | ಭಾಲ್ಕಿ | ೧೯೪೯ | ೪೧ | ಖಾನಾಪುರ | ೧೯೭೯ | ಭಾಲ್ಕಿ |
| ೨೧ | ಔರಾದ್ | ೧೯೭೧ | ೪೨<br>೪೩<br>೪೪ | ಕಮಲನಗರ<br>ಜಂಬಗಿ<br>ರಾನಾಕುನ್ನೂರ್ | ೧೯೭೬<br>೧೯೭೬<br>೧೯೮೬ | ಔರಾದ್ |
| ೨೨ | ರಾಯಚೂರು ಜಿಲ್ಲೆ:<br>ರಾಯಚೂರು | ೧೯೩೩ | | | ೧೯೮೦ | ರಾಯಚೂರು |
| ೨೩ | ದೇವದುರ್ಗ | ೨೦೧೨ | ೪೫ | ಜಾಲಹಳ್ಳಿ | ೧೯೮೦ | ದೇವದುರ್ಗ |
| ೨೪ | ಲಿಂಗಸೂಗೂರು | ೧೯೯೩ | ೪೬<br>೪೭ | ಮುದಗಲ್<br>ಮಸ್ಕಿ | ೧೯೭೩ | ಲಿಂಗಸೂಗೂರು |
| ೨೫ | ಮಾನ್ವಿ | ೧೯೭೩ | ೪೮<br>೪೯<br>೫೦<br>೫೧ | ಸಿರವಾರ<br>ಕಲ್ಲೂರು<br>ಕವಿತಾಳ<br>ಹಾಲಪುರ | ೧೯೭೬<br>೧೯೭೬<br>೧೯೮೬<br>೧೯೮೮ | ಮಾನ್ವಿ |
| ೨೬ | ಸಿಂಧನೂರು | ೧೯೭೬ | ೫೨<br>೫೩<br>೫೪<br>೫೫ | ತುರುವಿಹಾಳ<br>ಬಳಗಾನೂರು<br>ಜಾವಳಗೆರೆ<br>ಆರ್.ಹೆಚ್.ಕ್ಯಾಂಪ್<br>(ಪುನರ್ ವಸತಿ ಕೇಂದ್ರ) | ೧೯೮೪<br>೧೯೭೯<br>೧೯೭೯<br>೨೦೦೯ | ಸಿಂಧನೂರು |
| ೨೭ | ಕೊಪ್ಪಳ ಜಿಲ್ಲೆ:<br>ಕೊಪ್ಪಳ | ೧೯೪೮ | ೫೬<br>೫೭<br>೫೮<br>೫೯ | ಗಿಣಿಗೇರಿ<br>ಅಲವಂಡಿ<br>ಕುಕನಪಲ್ಲಿ<br>ಕಿನ್ನಾಳ | ೧೯೫೧<br>೧೯೭೫<br>೧೯೭೫<br>೨೦೧೨ | ಕೊಪ್ಪಳ |
| ೨೮ | ಗಂಗಾವತಿ | ೧೯೫೭ | ೬೦<br>೬೧<br>೬೨ | ಕನಕಗಿರಿ<br>ಶ್ರೀರಾಮನಗರ<br>ಸಿದ್ದಾಪುರ | ೧೯೭೦<br>೧೯೭೪<br>೧೯೭೧ | ಗಂಗಾವತಿ |
| ೨೯ | ಭತ್ತ ಮತ್ತು ಅಕ್ಕಿ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾರಟಗಿ | ೨೦೧೦ | | ಡಿಟೋ | ೨೦೧೦ | ಗಂಗಾವತಿ |
| ೩೦ | ಯಲಬುರ್ಗ<br>(ಕೇಂದ್ರಸ್ಥಾನ–<br>ಕುಕನೂರು) | ೧೯೭೩ | ೬೩<br>೬೪<br>೬೫<br>೬೬ | ಬಾಣಾಪುರ<br>ಯಲಬುರ್ಗ<br>ತಳಕಲ್<br>ಬೇವೂರು | ೧೯೭೩<br>೧೯೭೩<br>೧೯೯೬<br>೧೯೯೮ | ಯಲಬುರ್ಗ |
| ೩೧ | ಕುಷ್ಟಗಿ | ೧೯೩೮ | ೬೭<br>೬೮ | ತಾವರಗೇರ<br>ಹನುಮಸಾಗರ | ೧೯೭೭<br>೧೯೭೭ | ಕುಷ್ಟಗಿ |

**ಸಂಕ್ಷಿಪ್ತ**

| ಕ್ರ. ಸಂ | ವಿಭಾಗ | ಮುಖ್ಯ ಮಾರುಕಟ್ಟೆಗಳು | ಉಪ ಮಾರುಕಟ್ಟೆಗಳು |
|---|---|---|---|
| ೧ | ಬೆಂಗಳೂರು | ೪೪ | ೯೪ |
| ೨ | ಮೈಸೂರು | ೪೧ | ೬೪ |
| ೩ | ಬೆಳಗಾವಿ | ೪೫ | ೧೨೫ |
| ೪ | ಗುಲ್ಬರ್ಗಾ | ೩೧ | ೬೮ |
| ಒಟ್ಟು | | ೧೬೧ | ೩೫೧ |

## ಭಾರತದ ಇತರ ರಾಜ್ಯಗಳ (ಕೇಂದ್ರಾಡಳಿತ ಪ್ರದೇಶ ಸೇರಿದಂತೆ) ನಿಯಂತ್ರಿತ ಮಾರುಕಟ್ಟೆಗಳ ಕೆಲವು ಮಾಹಿತಿ
## ೩೧-೦೩-೨೦೧೪

| ಕ್ರ.ಸಂ | ರಾಜ್ಯ/ಕೇಂದ್ರಾಡಳಿತ ಪ್ರದೇಶ | ಮಾರುಕಟ್ಟೆಗಳ ಸಂಖ್ಯೆ | | | ನಿಯಂತ್ರಿತ ಮಾರುಕಟ್ಟೆಗಳು | | |
|---|---|---|---|---|---|---|---|
| | | ಸಗಟು | ಗ್ರಾಮೀಣ ಪ್ರಾಥಮಿಕ | ಒಟ್ಟು | ಮೂಲ ಮಾರುಕಟ್ಟೆ | ಉಪಮಾರುಕಟ್ಟೆಗಳು | ಒಟ್ಟು |
| (೧) | (೨) | (೩) | (೪) | (೫) | (೬) | (೭) | (೮) |
| | | | | | | | |
| ೧ | ಆಂಧ್ರಪ್ರದೇಶ | ೩೩೭ | ೫೬೮ | ೯೦೫ | ೩೩೭ | ೫೬೮ | ೯೦೫ |
| ೨ | ಅರುಣಾಚಲ ಪ್ರದೇಶ | ೨೨ | ೬೩ | ೮೫ | ೧೬ | ೧೧೫ | ೧೩೧ |
| ೩ | ಆಸ್ಸಾಂ | ೪೦೫ | ೭೩೫ | ೧೧೪೦ | ೨೦ | ೨೦೬ | ೨೨೬ |
| ೪ | ಬಿಹಾರ | ೩೨೫ | ೧೪೬೯ | ೧೭೯೪ | APMR ACT REPEALED | | |
| ೫ | ಜಾರಖಂಡ | ೨೦೧ | ೬೦೨ | ೮೦೩ | ೨೮ | ೧೭೩ | ೨೦೧ |
| ೬ | ಗೋವಾ | ೪ | ೨೪ | ೨೮ | ೧ | ೭ | ೮ |
| ೭ | ಗುಜರಾತ್ | ೨೦೫ | ೧೨೯ | ೩೩೪ | ೧೯೯ | ೨೦೧ | ೪೦೦ |
| ೮ | ಹರಿಯಾಣ | ೨೮೧ | ೧೯೪ | ೪೭೫ | ೧೦೭ | ೧೭೪ | ೨೮೧ |
| ೯ | ಹಿಮಾಚಲ ಪ್ರದೇಶ | ೪೨ | ೩೫ | ೭೭ | ೧೦ | ೪೪ | ೫೪ |
| ೧೦ | ಜಮ್ಮು ಮತ್ತು ಕಾಶ್ಮೀರ | ೨೩ | ೮ | ೩೧ | ೪ | ೮ | ೧೨ |
| ೧೧ | ಕರ್ನಾಟಕ | ೨೧೦ | ೭೩೦ | ೯೪೦ | ೧೫೫ | ೩೫೭ | ೫೧೨ |
| ೧೨ | ಕೇರಳ | ೩೪೮ | ೧೦೧೪ | ೧೩೬೨ | APMR ACT REPEALED | | |
| ೧೩ | ಮಧ್ಯಪ್ರದೇಶ | ೦ | ೧೩೨೧ | ೧೩೨೧ | ೨೫೧ | ೨೮೫ | ೫೩೬ |
| ೧೪ | ಛತ್ತಿಸ್‌ಗಡ | ೨ | ೧೧೩೨ | ೧೧೩೪ | ೬೮ | ೧೧೬ | ೧೮೪ |
| ೧೫ | ಮಹಾರಾಷ್ಟ್ರ | ೮೮೧ | ೩೫೦೦ | ೪೩೮೧ | ೩೦೫ | ೫೭೬ | ೮೮೧ |
| ೧೬ | ಮಣಿಪುರ | ೨೪ | ೯೪ | ೧೧೮ | APMR ACT REPEALED | | |
| ೧೭ | ಮೇಘಾಲಯ | ೩೫ | ೮೯ | ೧೨೪ | ೨ | ೦ | ೨ |
| ೧೮ | ಮಿಜೋರಾಮ | ೧೦ | ೧೦೫ | ೧೧೫ | APMR ACT REPEALED | | |
| ೧೯ | ನಾಗಾಲ್ಯಾಂಡ್ | ೧೯ | ೧೭೪ | ೧೯೩ | ೧೮ | ೦ | ೧೮ |
| ೨೦ | ಒಡಿಸ್ಸಾ | ೩೯೮ | ೧೧೫೦ | ೧೫೪೮ | ೫೪ | ೩೮೨ | ೪೩೬ |
| ೨೧ | ಪಂಜಾಬ್ | ೪೨೪ | ೧೩೭೫ | ೧೭೯೯ | ೧೪೯ | ೨೭೫ | ೪೨೪ |
| ೨೨ | ರಾಜಸ್ಥಾನ | ೪೪೩ | ೩೧೨ | ೭೫೫ | ೧೩೧ | ೩೧೨ | ೪೪೩ |
| ೨೩ | ಸಿಕ್ಕಿಂ | ೭ | ೧೨ | ೧೯ | ೧ | ೦ | ೧ |
| ೨೪ | ತಮಿಳುನಾಡು | ೩೦೦ | ೬೭೭ | ೯೭೭ | ೨೭೭ | ೬ | ೨೮೩ |
| ೨೫ | ತ್ರಿಪುರ | ೮೪ | ೪೭೦ | ೫೫೪ | ೨೧ | ೦ | ೨೧ |
| ೨೬ | ಉತ್ತರ ಪ್ರದೇಶ | ೫೮೪ | ೩೪೬೪ | ೪೦೪೮ | ೨೫೦ | ೩೬೫ | ೬೧೫ |
| ೨೭ | ಉತ್ತರಾಖಂಡ | ೩೬ | ೩೦ | ೬೬ | ೨೫ | ೩೩ | ೫೮ |
| ೨೮ | ಪಶ್ಚಿಮ ಬಂಗಾಳ | ೨೭೯ | ೩೨೫೦ | ೩೫೨೯ | ೪೨ | ೪೧೫ | ೪೫೭ |
| ೨೯ | ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು | ೦ | ೨೮ | ೨೮ | ಓಟು | ಓಟು | ಓಟು |
| ೩೦ | ಚಂಡೀಗಡ | ೧ | ೦ | ೧ | ೧ | ೦ | ೧ |
| ೩೧ | ದಾದ್ರಾ ಮತ್ತ ನಗರ ಹವೇಲಿ | ೦ | ೦ | ೦ | APMR ACT REPEALED | | |
| ೩೨ | ದಾಮನ್ ಮತ್ತು ಡಿಯು | ೦ | ೦ | ೦ | APMR ACT REPEALED | | |
| ೩೩ | ದೆಹಲಿ | ೩೦ | ೦ | ೩೦ | ೭ | ೮ | ೧೫ |
| ೩೪ | ಲಕ್ಷದ್ವೀಪ | ೦ | ೦ | ೦ | APMR ACT REPEALED | | |
| ೩೫ | ಪುದುಚೇರಿ | ೪ | ೫ | ೯ | ೪ | ೫ | ೯ |
| | ಒಟ್ಟು | ೫೯೬೪ | ೨೨೭೫೯ | ೨೮೭೨೩ | ೨೪೮೩ | ೪೬೩೧ | ೭೧೧೪ |

***Note: Based on information received from various States/U Ts authorities***

| ಕ್ರ.ಸಂ | ರಾಜ್ಯ/ಕೇಂದ್ರಾಡಳಿತ ಪ್ರದೇಶ | ವಿಸ್ತೀರ್ಣ ಚ.ಕಿ.ಮಿ | ಜನಸಂಖ್ಯೆ | ಒಟ್ಟು ನಿಯಂತ್ರಿತ ಮಾರುಕಟ್ಟೆ | ಪ್ರತಿ ಮಾರುಕಟ್ಟೆ ಕ್ಷೇತ್ರ ವ್ಯಾಪ್ತಿ | ಆರಂಭಿಸಬೇಕಾದ ಮಾರುಕಟ್ಟೆಗಳ ಸಂಖ್ಯೆ | ಪ್ರತಿ ಮಾರುಕಟ್ಟೆಯ ಸರಾಸರಿ ಜನಸಂಖ್ಯೆ |
|---|---|---|---|---|---|---|---|
| ೧ | ಆಂಧ್ರಪ್ರದೇಶ | ೨೭೫೦೬೯ | ೮೬೬೬೫೫೩೩ | ೯೦೫ | ೩೦೩.೯೪ | ೩೫೦೧ | ೯೩೫೫೩ |
| ೨ | ಅರುಣಾಚಲ ಪ್ರದೇಶ | ೮೩೭೪೩ | ೧೩೮೨೬೧೧ | ೧೩೧ | ೬೩೯.೨೬ | ೧೦೬೬ | ೧೦೫೫೪ |
| ೩ | ಆಸ್ಸಾಂ | ೭೮೪೩೮ | ೩೧೧೬೯೨೭೨ | ೨೨೬ | ೩೪೭.೦೭ | ೯೯೮ | ೧೩೭೯೧೭ |
| ೪ | ಬಿಹಾರ | ೯೪೧೬೩ | ೧೦೩೮೦೪೬೩೮ | ೦ | ೦.೦೦ | ೧೧೯೮ | ೦ |
| ೫ | ಜಾರಖಂಡ | ೭೯೭೧೪ | ೩೨೯೬೬೨೩೮ | ೨೦೧ | ೩೯೬.೫೯ | ೧೦೧೫ | ೧೬೪೦೧೧ |
| ೬ | ಗೋವಾ | ೩೭೦೨ | ೧೪೫೭೭೨೩ | ೮ | ೪೬೨.೭೫ | ೪೭ | ೧೮೨೨೧೫ |
| ೭ | ಗುಜರಾತ್ | ೧೯೬೦೨೪ | ೬೦೩೮೩೬೨೮ | ೪೦೦ | ೪೯೦.೦೬ | ೨೪೯೫ | ೧೫೦೯೫೯ |
| ೮ | ಹರಿಯಾಣ | ೪೪೨೧೨ | ೨೫೩೫೩೦೮೧ | ೨೮೧ | ೧೫೭.೩೪ | ೫೬೩ | ೯೦೨೨೪ |
| ೯ | ಹಿಮಾಚಲ ಪ್ರದೇಶ | ೫೫೬೭೩ | ೬೮೫೬೫೦೯ | ೫೪ | ೧೦೩೦.೯೮ | ೭೦೯ | ೧೨೬೯೭೨ |
| ೧೦ | ಜಮ್ಮು ಮತ್ತು ಕಾಶ್ಮೀರ | ೨೨೨೨೩೬ | ೧೨೫೪೮೯೨೬ | ೧೨ | ೦.೦೦ | ೨೮೨೮ | ೦ |
| ೧೧ | ಕರ್ನಾಟಕ | ೧೯೧೭೯೧ | ೬೧೧೩೦೭೦೪ | ೫೧೨ | ೩೭೪.೫೯ | ೨೪೪೧ | ೧೧೯೩೯೬ |
| ೧೨ | ಕೇರಳ | ೩೮೮೬೩ | ೩೩೩೮೭೬೭೭ | ೦ | ೦.೦೦ | ೪೯೫ | ೦ |
| ೧೩ | ಮಧ್ಯಪ್ರದೇಶ | ೩೦೮೧೪೪ | ೭೨೫೯೭೫೬೫ | ೫೬೩ | ೫೭೪.೯೦ | ೩೯೨೨ | ೧೩೫೪೪೩ |
| ೧೪ | ಛತ್ತಿಸ್‌ಗಡ | ೧೩೬೦೩೪ | ೨೫೫೪೦೧೯೬ | ೧೮೪ | ೭೩೯.೩೨ | ೧೭೩೧ | ೧೩೮೮೦೫ |
| ೧೫ | ಮಹಾರಾಷ್ಟ್ರ | ೩೦೭೭೧೩ | ೧೧೨೩೭೨೯೭೨ | ೮೮೧ | ೩೪೯.೨೮ | ೩೯೧೬ | ೧೨೭೫೫೨ |
| ೧೬ | ಮಣಿಪುರ | ೨೨೩೨೭ | ೨೭೨೧೭೫೬ | ೦ | ೦.೦೦ | ೨೮೪ | ೦ |
| ೧೭ | ಮೇಘಾಲಯ | ೨೨೪೨೯ | ೨೯೬೪೦೦೭ | ೨ | ೧೧೨೧೪.೫೦ | ೨೮೫ | ೧೪೮೨೦೦೪ |
| ೧೮ | ಮಿಜೋರಾಮ | ೨೧೦೮೧ | ೧೦೯೧೦೧೪ | ೦ | ೦.೦೦ | ೨೬೮ | ೦ |
| ೧೯ | ನಾಗಾಲ್ಯಾಂಡ್ | ೧೬೫೭೯ | ೧೯೮೦೬೦೨ | ೧೮ | ೯೨೧.೦೬ | ೨೧೧ | ೧೧೦೦೩೩ |
| ೨೦ | ಒಡಿಸ್ಸಾ | ೧೫೫೭೦೭ | ೪೧೯೪೭೩೫೮ | ೪೩೬ | ೩೫೭.೧೩ | ೧೯೮೨ | ೯೬೨೧೦ |
| ೨೧ | ಪಂಜಾಬ್ | ೫೦೩೬೨ | ೨೭೭೦೪೨೩೬ | ೪೨೪ | ೧೧೮.೭೮ | ೬೪೧ | ೬೫೩೪೦ |
| ೨೨ | ರಾಜಸ್ಥಾನ | ೩೪೨೨೪೦ | ೬೮೬೨೧೦೧೨ | ೪೪೩ | ೭೭೨.೫೫ | ೪೩೫೬ | ೧೫೪೯೦೧ |
| ೨೩ | ಸಿಕ್ಕಿಂ | ೭೦೯೬ | ೬೦೭೬೮೮ | ೧ | ೭೦೯೬.೦೦ | ೯೦ | ೬೦೭೬೮೮ |
| ೨೪ | ತಮಿಳುನಾಡು | ೧೩೦೦೫೮ | ೭೨೧೩೮೯೫೮ | ೨೮೩ | ೪೫೯.೫೭ | ೧೬೫೫ | ೨೫೪೯೦೮ |
| ೨೫ | ತ್ರಿಪುರ | ೧೦೪೯೩ | ೩೬೭೧೦೩೨ | ೨೧ | ೪೯೯.೬೭ | ೧೩೪ | ೧೭೪೮೧೧ |
| ೨೬ | ಉತ್ತರ ಪ್ರದೇಶ | ೨೪೦೯೨೮ | ೧೯೯೫೮೧೪೭೭ | ೬೧೫ | ೩೯೧.೭೫ | ೩೦೬೬ | ೩೨೪೫೨೩ |
| ೨೭ | ಉತ್ತರಾಖಂಡ | ೫೩೪೮೪ | ೧೦೧೧೬೭೫೨ | ೫೮ | ೯೨೨.೧೪ | ೬೮೧ | ೧೭೪೪೨೭ |
| ೨೮ | ಪಶ್ಚಿಮ ಬಂಗಾಳ | ೮೮೭೫೨ | ೯೧೩೪೭೭೩೬ | ೪೫೭ | ೧೯೪.೨೧ | ೧೧೩೦ | ೧೯೯೮೮೬ |
| ೨೯ | ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು | ೮೨೪೯ | ೩೭೯೯೪೪ | [illegible] | ೦.೦೦ | ೧೦೫ | ೦ |
| ೩೦ | ಚಂಡೀಗಢ | ೧೧೪ | ೧೦೫೪೬೮೬ | ೧ | ೧೧೪.೦೦ | ೧ | ೧೦೫೪೬೮೬ |
| ೩೧ | ದಾದ್ರಾ ಮತ್ತ ನಗರ ಹವೇಲಿ | ೪೯೧ | ೩೪೨೮೫೩ | ೦ | ೦.೦೦ | ೬ | ೦ |
| ೩೨ | ದಾಮನ್ ಮತ್ತು ಡಿಯು | ೧೧೨ | ೨೪೨೯೧೧ | ೦ | ೦.೦೦ | ೧ | ೦ |
| ೩೩ | ದೆಹಲಿ | ೧೪೮೩ | ೧೬೭೫೩೨೩೫ | ೧೫ | ೯೮.೮೭ | ೧೯ | ೧೧೧೬೮೮೨ |
| ೩೪ | ಲಕ್ಷದ್ವೀಪ | ೩೨ | ೬೪೪೨೯ | ೦ | ೦.೦೦ | ೦ | ೦ |
| ೩೫ | ಪುದುಚೇರಿ | ೪೭೯ | ೧೨೪೪೪೬೪ | ೯ | ೫೩.೨೨ | ೬ | ೧೩೮೨೭೪ |
| | ಒಟ್ಟು | ೩೨೮೮೦೧೫ | ೧.೨೧೦ಇ+೦೯ | ೭೧೧೪ | ೪೬೨.೧೯ | ೪೧೮೪೭ | ೧೭೦೧೧೪ |

** Source:- Censue Report 2011 Published by RG & Census Commissioner of India website*

*** One Market in the radias of 5 kms. As per National Commission on Agriculture. Note: Bihar Agri. Produce Marketing (Regulated) Act Repealed from 1st September, 2006*

**ರಾಜ್ಯದ ಜಿಲ್ಲಾವಾರು ನಿಯಂತ್ರಿತ ಮಾರುಕಟ್ಟೆಗಳ ವಹಿವಾಟು ವಿವರ (೨೦೧೦)ಗಳನ್ನು ನೀಡಲಾಗಿದೆ.**

| ಕ್ರ.ಸಂ. | ಜಿಲ್ಲೆಗಳು | ಮುಖ್ಯ ಮಾರುಕಟ್ಟೆಗಳು | ಉಪ ಮಾರುಕಟ್ಟೆಗಳು | ಒಟ್ಟು ಮಾರುಕಟ್ಟೆಗಳು | ವ್ಯವಹಾರ ಮೌಲ್ಯ (ಲಕ್ಷ ರೂ.ಗಳಲ್ಲಿ) |
|---|---|---|---|---|---|
| ೧ | ಬೆಂಗಳೂರು | ೨ | ೭ | ೯ | ೩,೨೨,೨೮೩.೩೯ |
| ೨ | ಬೆಂಗಳೂರು (ಗ್ರಾಮಾಂತರ) | ೧ | ೫ | ೬ | ೧೯,೭೫೬.೦೨ |
| ೩ | ರಾಮನಗರ | ೩ | ೫ | ೮ | ೪,೨೪೯.೩೧ |
| ೪ | ಚಿತ್ರದುರ್ಗ | ೪ | ೧೦ | ೧೪ | ೫೭,೨೫೩.೬೭ |
| ೫ | ದಾವಣಗೆರೆ | ೬ | ೮ | ೧೪ | ೯೪.೪೯೧.೨೦ |
| ೬ | ಕೋಲಾರ | ೫ | ೭ | ೧೨ | ೩೪,೩೩೩.೯೨ |
| ೭ | ಚಿಕ್ಕಬಳ್ಳಾಪುರ | ೪ | ೮ | ೧೨ | ೧೧,೨೯೭.೧೮ |
| ೮ | ಶಿವಮೊಗ್ಗ | ೪ | ೧೮ | ೨೨ | ೧,೧೫,೧೧೫.೩೩ |
| ೯ | ತುಮಕೂರು | ೯ | ೨೫ | ೩೪ | ೬೮,೮೬೭.೧೧ |
| ೧೦ | ಚಿಕ್ಕಮಗಳೂರು | ೬ | ೯ | ೧೫ | ೨೩,೫೩೯.೮೨ |
| ೧೧ | ದಕ್ಷಿಣ ಕನ್ನಡ | ೫ | ೯ | ೧೪ | ೫೭,೩೬೩.೭೭ |
| ೧೨ | ಉಡುಪಿ | ೩ | ೩ | ೬ | ೧೧,೩೬೩.೫೪ |
| ೧೩ | ಹಾಸನ | ೬ | ೧೭ | ೨೩ | ೪೧,೫೫೧.೪೮ |
| ೧೪ | ಕೊಡಗು | ೩ | ೪ | ೭ | ೧೫,೫೫೪೭.೩೭ |
| ೧೫ | ಮಂಡ್ಯ | ೬ | ೧೦ | ೧೬ | ೫೧,೦೪೨.೦೯ |
| ೧೬ | ಮೈಸೂರು | ೭ | ೮ | ೧೫ | ೭೫,೨೭೦.೪೨ |
| ೧೭ | ಚಾಮರಾಜನಗರ | ೩ | ೪ | ೭ | ೧೦,೪೮೨.೭೫ |
| ೧೮ | ಬೆಳಗಾವಿ | ೧೦ | ೩೭ | ೪೭ | ೪೪,೫೮೩.೯೦ |
| ೧೯ | ವಿಜಯಪುರ | ೩ | ೧೪ | ೧೭ | ೨೫,೨೧೯.೦೪ |
| ೨೦ | ಬಾಗಲಕೋಟೆ | ೫ | ೧೫ | ೨೦ | ೧೩,೭೫೮.೬೭ |
| ೨೧ | ಧಾರವಾಡ | ೫ | ೧೨ | ೧೭ | ೫೩,೪೦೭.೨೪ |
| ೨೨ | ಗದಗ | ೫ | ೧೭ | ೨೨ | ೪೨,೪೮೬.೬೨ |
| ೨೩ | ಹಾವೇರಿ | ೭ | ೧೨ | ೧೯ | ೧,೦೬,೧೭೦.೧೮ |
| ೨೪ | ಉತ್ತರ ಕನ್ನಡ | ೮ | ೨೦ | ೨೮ | ೩೮,೧೫೫.೪೯ |
| ೨೫ | ಬಳ್ಳಾರಿ | ೬ | ೧೫ | ೨೧ | ೯೧,೪೯೧.೪೪ |
| ೨೬ | ಬೀದರ್ | ೫ | ೯ | ೧೪ | ೧೯,೯೯೬.೪೪ |
| ೨೭ | ಕಲಬುರಗಿ | ೭ | ೨೨ | ೨೯ | ೧,೩೪,೫೭೮.೫೨ |
| ೨೮ | ಯಾದಗಿರಿ | ೨೦೦೯ ಡಿಸೆಂಬರ್‌ನಲ್ಲಿ ಈ ಜಿಲ್ಲೆ ನೂತನವಾಗಿ ರಚಿಸಲ್ಪಟ್ಟಿದೆ | | | |
| ೨೯ | ರಾಯಚೂರು | ೪ | ೧೨ | ೧೬ | ೧,೩೦,೦೩೫.೨೨ |
| ೩೦ | ಕೊಪ್ಪಳ | ೪ | ೧೩ | ೧೭ | ೪೪,೯೨೯.೮೧ |
| ಒಟ್ಟು | | ೧೪೬ | ೩೫೫ | ೫೦೧ | ೧೭.೭೯,೬೪೧.೨೪ |

**ಆಧಾರ: ನಿರ್ದೇಶಕರು ವ್ಯವಸಾಯೋತ್ಪನ್ನ ಮಾರುಕಟ್ಟೆ**

## ರಾಜ್ಯದ ಪ್ರಮುಖ ಮಾರುಕಟ್ಟೆಗಳು

ರಾಜ್ಯಾದಂತ್ಯ ಕೆಲವು ಆಯ್ದ ಪ್ರಮುಖ ವ್ಯವಸಾಯ ಹುಟ್ಟುವಳಿಗಳಿಗೆ ಕೆಲವು ಸ್ಥಳಗಳು ಪ್ರಮುಖ ಮಾರುಕಟ್ಟೆಗಳಾಗಿ ಕಾರ್ಯ ನಿರ್ವಹಿಸುತ್ತಿವೆ. ೨೦೧೧-೧೨ರಲ್ಲಿ ನಿಯಂತ್ರಿತ ಹುಟ್ಟುವಳಿಗಳು ಮಾರಾಟಕ್ಕೆ ಬಂದ (ಆವಕ) ಪ್ರಮಾಣದ ಆಧಾರದಲ್ಲಿ ಈ ಕೆಳಗಿನವುಗಳನ್ನು ಆಯಾ ವ್ಯವಸಾಯ ಹುಟ್ಟುವಳಿಗಳ ಪ್ರಮುಖ ನಿಯಂತ್ರಿತ ಮಾರುಕಟ್ಟೆಗಳೆಂದು ಗುರುತಿಸಲಾಗಿದೆ. ಅವುಗಳ ವಿವರಣೆ ಈ ಮುಂದಿನಂತಿದೆ.

### ಪ್ರಮುಖ ಮಾರುಕಟ್ಟೆ ಸ್ಥಳಗಳು

**ಹತ್ತಿ**: ವಿಜಯಪುರ, ರಾಣೆಬೆನ್ನೂರು, ಬೈಲಹೊಂಗಲ, ರಾಯಚೂರು, ಸಂತೆ ಸರಗೂರು, ಹಾವೇರಿ, ಸೌಂದತ್ತಿ, ಹುಬ್ಬಳ್ಳಿ, ಧಾರವಾಡ, ಬಳ್ಳಾರಿ ಮತ್ತು ನರಗುಂದ.

**ಸೇಂಗಾ(ಕಡಲೆಕಾಯಿ)**: ಚಳ್ಳಕೆರೆ, ಗದಗ, ಚಿತ್ರದುರ್ಗ, ರಾಯಚೂರು, ದಾವಣಗೆರೆ ಮತ್ತು ಹುಬ್ಬಳ್ಳಿ.

**ಒಣ ಮೆಣಸಿನಕಾಯಿ**: ಬ್ಯಾಡಗಿ, ಹುಬ್ಬಳ್ಳಿ, ರಾಣೆಬೆನ್ನೂರು ಮತ್ತು ಹಾವೇರಿ.

**ಅಡಿಕೆ**: ಶಿವಮೊಗ್ಗ, ಸಾಗರ, ಸಿರ್ಸಿ, ಮಂಗಳೂರು, ಚಿತ್ರದುರ್ಗ.

**ತೆಂಗು**: ಕಡೂರು, ತರೀಕೆರೆ, ಕೆ.ಆರ್.ಪೇಟೆ, ತಿಪಟೂರು

**ಕೊಬ್ಬರಿ**: ಅರಸೀಕೆರೆ, ಮಂಡ್ಯ ಮತ್ತು ಚನ್ನರಾಯಪಟ್ಟಣ.

**ಹಣ್ಣು, ಹೂವು ಮತ್ತು ತರಕಾರಿ**: ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಹುಬ್ಬಳ್ಳಿ.

**ಜೋಳ**: ಗದಗ, ಹಾವೇರಿ, ಬೆಳಗಾವಿ ಮತ್ತು ಧಾರವಾಡ.

**ಗೋಧಿ**: ಗದಗ, ವಿಜಯಪುರ, ಬೆಳಗಾವಿ ಮತ್ತು ಧಾರವಾಡ.

**ರಾಗಿ**: ಅರಸೀಕೆರೆ, ಹಾಸನ, ತುಮಕೂರು ಮತ್ತು ಹರಪನಹಳ್ಳಿ.

**ತೊಗರಿಬೇಳೆ**: ಕಲಬುರಗಿ, ಬೀದರ, ಯಾದಗಿರಿ, ಸೇಡಮ್, ಚಿತ್ತಾಪುರ ಮತ್ತು ರಾಯಚೂರು.

**ವೀಳ್ಯದೆಲೆ**: ಹೊನ್ನಾವರ, ಧಾರವಾಡ, ರಾಣೆಬೆನ್ನೂರು, ಸವಣೂರು, ತುಮಕೂರು ಮತ್ತು ಚನ್ನಪಟ್ಟಣ

**ಈರುಳ್ಳಿ(ಉಳ್ಳಾಗಡ್ಡಿ)**: ಬೆಂಗಳೂರು, ಹುಬ್ಬಳ್ಳಿ, ಬೆಳಗಾವಿ, ದಾವಣಗೆರೆ, ಚಳ್ಳಕೆರೆ ಮತ್ತು ಮೈಸೂರು.

**ಆಲೂಗಡ್ಡೆ**: ಮೈಸೂರು, ಮಾಲೂರು, ಚಿಕ್ಕಬಳ್ಳಾಪುರ, ಬೆಂಗಳೂರು, ಹಾಸನ, ಬೆಳಗಾವಿ ಮತ್ತು ಹುಬ್ಬಳ್ಳಿ.

**ಸಾಂಬಾರ ವಸ್ತುಗಳು**: ಮಡಿಕೇರಿ, ಗೋಣಿಕೊಪ್ಪಲು, ಮೂಡಿಗೆರೆ ಮತ್ತು ಸಕಲೇಶಪುರ

**ರೇಷ್ಮೆ**: ರಾಮನಗರ, ಚನ್ನಪಟ್ಟಣ, ಕನಕಪುರ, ಶಿಡ್ಲಘಟ್ಟ, ವಿಜಯಪುರ ಮತ್ತು ಕೊಳ್ಳೇಗಾಲ.

**ಎಳನೀರು**: ಮದ್ದೂರು.




* * * * *